ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಫೆಬ್ರವರಿ 12, 2014 ಪುಟ 20 ರೂ. 15/-



ನಕಲ್
ವೆರ್ನನ್ ಗೋನ್ಸಾಲ್ವೆಸ್
ಸಂದರ್ಶನ



ಡಬ್ಬಿಂಗ್

ಶಿವಣ್ಣ V/s ಅಂಬಿ

ಕೋಲಾರ: ಜಾತಿಯ ಭೂತ ನರ್ತನ


ಮಂಗಳೂರು
ಪೂಜಾರಿ
ಮೊಯ್ಲಿ
ಣುಕಾಟ

ಮಂಡ್ಯ ನಗರಸಭೆ
ನಗರೋತ್ಥಾನ
ಹಗರಣ

ಮರಳು ನೀತಿ
ಹಾವೂ
ಸಾಯಲಿಲ್ಲ
ಕೋಲೂ
ಮುರಿಯಲಿಲ್ಲ



ಟಿಕೆಟ್‌ಗೆ ಢಿಶುಂ...ಢಿಶುಂ!



ಡಬ್ಬಿಂಗ್ ಚರ್ಚೆ: ಕನ್ನಡಿಗರ ಹೆಗಲ ಮೇಲಿಟ್ಟ ಬಂದೂಕು



ಡಾ.ವಾಸು ಎಚ್.ವಿ.

ಕನ್ನಡ ಚಿತ್ರರಂಗದಲ್ಲಿ ಮತ್ತೊಮ್ಮೆ ಡಬ್ಬಿಂಗ್ ಬೇಕಾ, ಬೇಡವಾ ಎನ್ನುವ ಚರ್ಚೆ ಆರಂಭವಾಗಿದೆ. ಇದು ಎಷ್ಟೋ ಸಾರಿ ಬಂದುಹೋದ ಚರ್ಚೆ. ಆದರೆ ಈ ಸಾರಿ ಅದು ಹಿಂದೆಂದಿಗಿಂತಲೂ ಜೋರಾಗಿರುವುದಕ್ಕೆ ಕಾರಣವಿದೆ. ಭಾರತ ಸ್ಪರ್ಧಾ ಆಯೋಗವು ಡಬ್ಬಿಂಗ್‌ಗೆ ಇರುವ 'ಘೋಷಿತ ನಿಷೇಧ'ವನ್ನು ಹಿಂತೆಗೆದುಕೊಳ್ಳಬೇಕೆಂದು ಸೂಚಿಸಿದೆ. ಇದು ಡಬ್ಬಿಂಗ್ ಪರ ಇರುವವರಿಗೆ ಸಕಾಲವಾಗಿ ತೋರಿದರೆ, ಅದನ್ನು ವಿರೋಧಿಸುವವರಿಗೆ ಆತಂಕ ಶುರುವಾಗಿದೆ.

ಈ ಹಿಂದೆಯೂ ಡಬ್ಬಿಂಗ್‌ನ ಪರ ವಾದಗಳನ್ನು ಮುಂದಿಡುವವರು ಇದ್ದರಾದರೂ, ಹಿಂದೆಂದಿಗಿಂತಲೂ ಅವರ ಸಂಖ್ಯೆ ಹೆಚ್ಚಾಗಿದೆ. ಮಠ ಸಿನೆಮಾದ ನಿರ್ದೇಶಕ ಗುರುಪ್ರಸಾದ್‌ರಂಥವರು ಅದನ್ನು ಬಹಿರಂಗವಾಗಿ ಹೇಳುವ ಧೈರ್ಯ ತೋರಿದ್ದಾರೆ. ಡಬ್ಬಿಂಗ್ ವಿರೋಧಿ ಚಳವಳಿಯಲ್ಲಿ ಹಿಂದೆಲ್ಲಾ ಡಾ.ರಾಜ್‌ಕುಮಾರ್ ಇರುತ್ತಿದ್ದರು. ಈಗ ಅವರ ನಾಮಬಲವನ್ನು ನೆಚ್ಚಿಕೊಳ್ಳಲಾಗಿದೆ.

ಮೊದಲಿಗೆ ಪರ-ವಿರೋಧದ ವಾದಗಳೇನು ನೋಡೋಣ. ಡಬ್ಬಿಂಗ್‌ನ ಪರ ಇರುವವರು ಹೇಳುತ್ತಿರುವುದು, ಇದರಿಂದ ಕನ್ನಡಿಗರಿಗೆ ಒಳ್ಳೆಯದಾಗುತ್ತದೆ. ಕನ್ನಡ ಸಿನಿಮಾಗಳು ಬಹಳ ಕಳಪೆಯಾಗಿವೆ. ಹಾಗಾಗಿ ಒಳ್ಳೆಯ ಸಿನಿಮಾಗಳು ಡಬ್ ಆಗಿ ಬಂದರೆ ಉಂಟಾಗುವ ಸ್ಪರ್ಧೆಯಲ್ಲಿ ಇದೂ ಸಹಾ ಬೆಳೆಯುತ್ತದೆ. ಭಾರತದ ಇತರೆ ರಾಜ್ಯಗಳ ಭಾಷೆಗಳು ಅಥವಾ ವಿದೇಶೀ ಸಿನಿಮಾಗಳಲ್ಲಿ ಹಲವಾರು ಒಳ್ಳೆಯ ಸಿನೆಮಾಗಳು ತಯಾರಾಗುತ್ತವೆ. ಅವನ್ನು ಎಲ್ಲಾ ಕನ್ನಡಿಗರೂ ಭಾಷೆಯ ತೊಡಕಿನ ಕಾರಣಕ್ಕೆ ನೋಡಲಾಗುವುದಿಲ್ಲ, ಕನ್ನಡಕ್ಕೇ ಡಬ್ ಆಗಿ ಬಿಟ್ಟರೆ, ಎಲ್ಲರಿಗೂ ಅನುಕೂಲ.

ವಾದವನ್ನು ಇನ್ನೂ ಮುಂದುವರೆಸಿದರೆ "ಈ ಕನ್ನಡ ಸಿನಿಮಾಗಳನ್ನು ಯಾರು ನೋಡುತ್ತಾರೆ? ಇವು ದರಿದ್ರ ಸಿನಿಮಾಗಳು. ಅವುಗಳ ಪರವಾಗಿ ಮಾತನಾಡೋಕೆ ಆಗುತ್ತಾ? ಇವರಿಗೆ ಸೃಜನಶೀಲತೆಯೇ ಇಲ್ಲ, ಒಂದು ವೇಳೆ ಕನ್ನಡ ಚಿತ್ರರಂಗ ಮುಚ್ಚಿಹೋದರೆ ಹೋಗಲಿ" ಎಂದು ಹೇಳುವವರೆಗೂ ಕೆಲವರು ಇದ್ದಾರೆ. ಕನ್ನಡ ಚಿತ್ರರಂಗವೇನೂ ಇದರಿಂದ ಮುಳುಗಿಹೋಗುವುದಿಲ್ಲ, ಈ ರೀತಿ ಡಬ್ಬಿಂಗ್‌ಗೇನೂ ವಿರೋಧವಿಲ್ಲದ ತೆಲುಗು ಮತ್ತು ತಮಿಳು ಚಿತ್ರರಂಗಗಳೇನು ಮುಚ್ಚಿಹೋಗಿವೆಯಾ? ಅವು ಇನ್ನೂ ಹೆಚ್ಚು ಬೆಳೆದಿವೆ. ಕನ್ನಡಕ್ಕೂ ಆ ಲಾಭ ಸಿಗುತ್ತದೆ.

ಪ್ರಧಾನವಾಗಿ ನಿರ್ಮಾಪಕರು ಮತ್ತು ಪ್ರದರ್ಶಕರು ಈ ವಾದದ ಮುಂಚೂಣಿಯಲ್ಲಿದ್ದಾರಾದರೂ, ಅದಕ್ಕೆ ಹಲವು ಸಿನಿಮಾಸಕ್ತರು, ಪ್ರಗತಿಪರರೂ ಸಹಾ ಕೈಜೋಡಿಸಿದ್ದಾರೆ. ನಿರ್ಮಾಪಕರುಗಳು ಇನ್ನು ಮುಂದೆ ಹೆಚ್ಚು ರಿಸ್ಕ್ ಇಲ್ಲದೇ, ಡಬ್ಬಿಂಗ್ ಹಕ್ಕುಗಳನ್ನು ಕೊಂಡು, 25 ಲಕ್ಷ ಖರ್ಚು ಮಾಡಿ 'ಕನ್ನಡ ಸಿನಿಮಾ'ವನ್ನು ಬಿಡುಗಡೆ ಮಾಡಿ ದುಡ್ಡು ಮಾಡಿಕೊಳ್ಳಬಹುದಲ್ಲವಾ ಎಂದು ಆಲೋಚನೆ ಮಾಡುತ್ತಿರುವವರು ಇವರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಮೊನ್ನೆ ನಡೆದ ಚಿತ್ರೋದ್ಯಮ ಬಂದ್‌ಗೆ ಬೆಂಬಲ ನೀಡಿರಲಿಲ್ಲ ಎನ್ನುವುದನ್ನು ಗಮನಿಸಬೇಕು. ಈ 'ಸ್ವಹಿತಾಸಕ್ತಿ'ಯ ಜನರ ಜೊತೆಗೆ, ಚಿತ್ರ ರಸಿಕರಲ್ಲಿ ಹಲವರು ಈ ರೀತಿ ಭಾವಿಸುತ್ತಿದ್ದಾರೆ. ಆದರೆ ಅದರ ಪರವಾಗಿ ನಿಂತಿರುವ ಚಿತ್ರರಂಗದ ಬಲಾಢ್ಯ ವರ್ಗವು ಇದರಿಂದ ಕನ್ನಡಿಗರಿಗೆ ಒಳ್ಳೆಯದಾಗುತ್ತದೆ ಎಂದು, ಕನ್ನಡಿಗರ ಹೆಗಲ ಮೇಲೆ ಬಂದೂಕಿಟ್ಟುಕೊಂಡೇ ಮಾತನಾಡುತ್ತಿದ್ದಾರೆ.

ಇದಲ್ಲದೇ ದುಡ್ಡು ಕೊಟ್ಟು ಸಿನೆಮಾ ನೋಡುವ ಪ್ರೇಕ್ಷಕರು ಗ್ರಾಹಕರೂ ಆಗಿರುತ್ತಾರೆ. ಅವರಿಗೆ ತಾವು ಕೊಟ್ಟ ಹಣಕ್ಕೆ ಒಳ್ಳೆಯದನ್ನು ಕೊಳ್ಳುವ ಹಕ್ಕಿರುವುದಿಲ್ಲವೇ? ಒಂದು ಸೃಜನಶೀಲ ಮಾಧ್ಯಮಕ್ಕೆ ಭಾಷೆಯ ಗೆರೆ ಹಾಕಿ, ಅವರಿಗೆ ವಂಚಿಸುವುದು ಎಷ್ಟು ಸರಿ? ಎಂಬೆಲ್ಲಾ ಮಾತುಗಳೂ ಇವೆ.

ಇನ್ನು ಡಬ್ಬಿಂಗ್‌ಅನ್ನು ವಿರೋಧಿಸುತ್ತಿರುವವರಲ್ಲಿ ಪ್ರಧಾನವಾಗಿ ಕನ್ನಡ ಚಿತ್ರರಂಗದ ಕಾರ್ಮಿಕರು ಮತ್ತು ತಂತ್ರಜ್ಞರ ಒಕ್ಕೂಟವಿದೆ. ಅವರೊಂದಿಗೆ ಚಲನಚಿತ್ರ ಕಲಾವಿದರು (ಇದಕ್ಕೆ ಸ್ಟಾರ್‌ಗಳದ್ದೇ ನಾಯಕತ್ವ) ಈ ಹೋರಾಟದಲ್ಲಿ ಕೈಜೋಡಿಸಿದ್ದಾರೆ. ಇದಲ್ಲದೇ, ಈ ಉದ್ದಿಮೆಯನ್ನು ಹತ್ತಿರದಿಂದ ಬಲ್ಲ ಕೆಲವು ಪ್ರಗತಿಪರ ಆಲೋಚನೆಯುಳ್ಳವರೂ ಇದ್ದಾರೆ.

ಇವರ ವಾದ "ಇದರಿಂದ ಮೊದಲೇ ದುರ್ಬಲವಾಗಿರುವ ಕನ್ನಡ ಚಿತ್ರರಂಗದ ಮಾರುಕಟ್ಟೆ ಇನ್ನಷ್ಟು ದುರ್ಬಲವಾಗುತ್ತದೆ. ಕನ್ನಡ ಚಿತ್ರರಂಗದ ತಂತ್ರಜ್ಞರು, ಕಾರ್ಮಿಕರು ಮತ್ತು ಇನ್ನಿತರರು ಕೆಲಸ ಕಳೆದುಕೊಂಡು ಜೀವನೋಪಾಯವೇ ಕಷ್ಟವಾಗುತ್ತದೆ. ಕಂಠದಾನ ಮಾಡುವವರು ಬಿಟ್ಟರೆ ಮಿಕ್ಕಾರಿಗೂ ಇದರಿಂದ ಕೆಲಸ ಸಿಗುವುದಿಲ್ಲ. ನಿರ್ಮಾಪಕರು ಮಾತ್ರ ಲಾಭ ಮಾಡಿಕೊಳ್ಳುತ್ತಾರೆ." ಈ ಪ್ರಶ್ನೆಯನ್ನು ಕನ್ನಡ ಪ್ರೇಮದ ತೀವ್ರ ಭಾವೋನ್ಮಾದದ ಪ್ರಶ್ನೆಯನ್ನಾಗಿಸಲೂ ಕೆಲವರು ಪ್ರಯತ್ನ ಪಡುತ್ತಿದ್ದಾರೆ. ಕನ್ನಡ ಪರ ಸಂಘಟನೆಗಳೂ ಈ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದಾರೆ. ಕೋಟ್ಯಾಂತರ ರೂ. ಸಂಭಾವನೆ ಪಡೆಯುವ ಹೀರೋಗಳೂ "ಬಡ ಕಾರ್ಮಿಕರು ಮತ್ತು ತಂತ್ರಜ್ಞರ ಪಾಡೇನು?" ಎಂಬಂತಹ ಮೊಸಳೆ ಕಣ್ಣೀರು ಸುರಿಸುವ ಮಾತುಗಳನ್ನಾಡುತ್ತಿದ್ದಾರೆ.

ಇವರೂ ಕನ್ನಡಿಗರ ಹೆಗಲ ಮೇಲೆ ಬಂದೂಕಿಟ್ಟು, ತಮ್ಮ ಬೇಳೆ ಬೇಯಿಸಿಕೊಳ್ಳುವ ಪ್ರಯತ್ನದಲ್ಲೇ ಇದ್ದಾರೆ.

ಕನ್ನಡದಲ್ಲಿ ಅತ್ಯುತ್ತಮ ಚಲನಚಿತ್ರಗಳು ತಯಾರಾಗಬೇಕು; ಕನ್ನಡ ಸಂಸ್ಕೃತಿ ಶ್ರೀಮಂತವಾಗಬೇಕೆಂದರೆ ಇಲ್ಲಿನ ಸೃಜನಶೀಲತೆ ಚೆನ್ನಾಗಿ ಅರಳಿ ಇತರ ಭಾಷೆಗಳ ಚಲನಚಿತ್ರಗಳನ್ನು ಸರಿಗಟ್ಟುವಂತಹ, ಸಾಧ್ಯವಾದರೆ ಅದನ್ನು ಮೀರುವಂತಹ ಚಿತ್ರಗಳು ಸಾಲುಸಾಲಾಗಿ ಬರಬೇಕು; ಅದರಲ್ಲಿ ಯಾವ ಸಂದೇಹವೂ ಇಲ್ಲ, ಅದಕ್ಕೆ ಡಬ್ಬಿಂಗ್ ಪೂರಕವೋ, ಮಾರಕವೋ ಎಂಬುದಷ್ಟೇ ಪ್ರಶ್ನೆ. ಕನ್ನಡ ಉಳಿದರೆಷ್ಟು, ಬಿಟ್ಟರೆಷ್ಟು ನನಗೆ ನಾನು ಬಯಸಿದ್ದು ದಕ್ಕುವಂತೆ ಆಗಬೇಕು ಎಂಬ ಮುಕ್ತ ಮಾರುಕಟ್ಟೆಯ ಸಿದ್ಧಾಂತಿಗಳೂ ಇದ್ದಾರೆ. ಆದರೆ ಕನ್ನಡ ಚಿತ್ರರಂಗದ ಬೆಳವಣಿಗೆಗೂ ಡಬ್ಬಿಂಗ್ ಒಳ್ಳೆಯದನ್ನು ಮಾಡುತ್ತದೆ ಎಂದು ಪ್ರಾಮಾಣಿಕವಾಗಿ ಭಾವಿಸಿ, ಅದನ್ನು ಬೆಂಬಲಿಸುವವರೂ ಇದ್ದಾರೆ.

ಕನ್ನಡ ಚಿತ್ರರಂಗವು ವಿಕಾಸವಾಗಿ ಬಂದ ಬಗೆ ಮತ್ತು ತುಲನಾತ್ಮಕವಾಗಿ ಅದರ ಸದ್ಯದ ಮಾರುಕಟ್ಟೆಯ ಸ್ಥಿತಿಯನ್ನು ಸೂಕ್ತವಾಗಿ ಅವಲೋಕಿಸದೇ ಇದರ ಬಗ್ಗೆ ಚರ್ಚೆಯನ್ನು ಮಾಡಲಾಗುವುದಿಲ್ಲ, ಇಡೀ ಭಾರತದಲ್ಲಿ ಹಿಂದಿಯನ್ನು ಮೀರಿಸುವಂತಹ ಮಾರುಕಟ್ಟೆ, ಸೃಜನಶೀಲತೆ ಮತ್ತು ಉದ್ಯಮಶೀಲತೆಯನ್ನು ಪ್ರದರ್ಶಿಸುತ್ತಿರುವ ದಕ್ಷಿಣ ಭಾರತದ ಚಿತ್ರರಂಗವು ಮೊದಲು ಮದ್ರಾಸ್ (ಚೆನ್ನೈ) ಕೇಂದ್ರಿತವಾಗಿದ್ದುದು ಎಲ್ಲರಿಗೂ ಗೊತ್ತಿದೆ. ನಂತರ ತೆಲುಗು, ಕನ್ನಡ ಹಾಗೂ ಮಲೆಯಾಳಂ ಚಿತ್ರರಂಗಗಳು ತಮ್ಮ ತಮ್ಮ ರಾಜ್ಯದ ರಾಜಧಾನಿಗಳಲ್ಲಿ ಸ್ವತಂತ್ರ ಉದ್ದಿಮೆ ಕಟ್ಟಿಕೊಂಡವು. ಆಗೆಲ್ಲಾ ಕನ್ನಡಕ್ಕೆ ಮದ್ರಾಸಿನಲ್ಲಿ ಮೂರು ಅಥವಾ ನಾಲ್ಕನೆಯ ಆದ್ಯತೆಯಷ್ಟೇ ಇರುತ್ತಿತ್ತು, ಕಿತ್ತೂರು ರಾಣಿ ಚೆನ್ನಮ್ಮದಂತಹ ಕನ್ನಡ ಚಿತ್ರವು, ಹಗಲಿನಲ್ಲಿ ಶೂಟಿಂಗ್ ಮಾಡಿಕೊಂಡ ವೀರಪಾಂಡ್ಯ ಕಟ್ಟ ಬೊಮ್ಮನ್‌ನ ಸೆಟ್‌ಅನ್ನು ರಾತ್ರಿ ಬಾಡಿಗೆ ಪಡೆದು, ಚಿತ್ರೀಕರಿಸಿ ಮಾಡಿದ ಚಿತ್ರವಾಗಿತ್ತು! ಅಂದರೆ ಕನ್ನಡ ಚಿತ್ರರಂಗದ ಅಂದಿನ ಸ್ಥಿತಿಯನ್ನು ಊಹಿಸಿಕೊಳ್ಳಿ.

ಇಂತಹ ಇತಿಹಾಸವನ್ನು ಹೊಂದಿರುವ ಕನ್ನಡ ಚಿತ್ರರಂಗಕ್ಕೆ ಇಂದಿಗೂ ಬಹಳ ಸೀಮಿತ ಮಾರುಕಟ್ಟೆ ಮಾತ್ರ ಇದೆ. ಇದು ಚಿತ್ರರಂಗಕ್ಕೆ ಮಾತ್ರ ಸೀಮಿತವಾದುದಲ್ಲ, ಕರ್ನಾಟಕದಲ್ಲಿ ಶೇ.68ರಷ್ಟು ಮಾತ್ರ ಕನ್ನಡಿಗರು ಇರುವುದೂ, ಕೇರಳದಲ್ಲಿ ಶೇ.90ಕ್ಕೂ ಹೆಚ್ಚು ಜನ ಮಲೆಯಾಳಂಅನ್ನೇ ಮಾತೃಭಾಷೆಯಾಗಿ ಹೊಂದಿರುವವರು ಇರುವುದನ್ನು ಗಮನಿಸಿದರೆ, ಕನ್ನಡ ಉದ್ದಿಮೆಯು ಆತಂಕಕ್ಕಿರುವ 'ಅಪಾಯ'ದ ಅರಿವಾಗಬಹುದು. ಕೇವಲ ಆಯಾ ರಾಜ್ಯಗಳಲ್ಲಿ ಮಾತ್ರವಲ್ಲದೇ, ಜಗತ್ತಿನ ಅದೆಷ್ಟೋ ರಾಷ್ಟ್ರಗಳಲ್ಲಿ ತಮಿಳು, ತೆಲುಗು ಮತ್ತು ಮಲಯಾಳಂ ಮಾತನಾಡುವವರು ಕನ್ನಡಿಗರಿಗಿಂತ ಭಾರೀ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆಯಾ ದೇಶಗಳಲ್ಲಿ ತಮ್ಮ ಸಂಸ್ಕೃತಿ, ಅಭಿರುಚಿಗಳನ್ನು ಅಸರ್ಟ್ ಮಾಡುವ ಪ್ರಮಾಣದಲ್ಲಿ ಇದ್ದಾರೆ. ಪಂಜಾಬ್ ಮತ್ತು ಗುಜರಾತ್ ಬಿಟ್ಟರೆ ಪ್ರಪಂಚದ ಬೇರೆಡೆಗಳಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗಿರುವವರಲ್ಲಿ ತಮಿಳರು ಮತ್ತು ಮಲೆಯಾಳಿಗಳು ಇರುವುದನ್ನು ಗಮನಿಸಬೇಕು.





ಹೀಗಾಗಿಯೇ ಸದ್ಯದಲ್ಲೇ ಬಿಡುಗಡೆಯಾಗಲಿರುವ ರಜನೀಕಾಂತ್ ನಟಿಸಿರುವ 'ತಲೈವಾ' ಚಿತ್ರವು ಜಪಾನ್‌ನ 30 ಚಿತ್ರಮಂದಿರಗಳಲ್ಲೂ ಪ್ರದರ್ಶಿತವಾಗಲಿದೆ! ಲಕ್ಷಗಟ್ಟಲೆ ಸದಸ್ಯರನ್ನು ಹೊಂದಿರುವ ಅಮೆರಿಕಾದ ತೆಲುಗರ ಸಂಘಟನೆ 'ತಾನಾ'ದ ಮುಂದೆ ವರ್ಷಕ್ಕೊಂದು ಕಾರ್ಯಕ್ರಮ ಮಾಡಲೂ ಕರ್ನಾಟಕ ಸರ್ಕಾರದ ಅನುದಾನ ಕೇಳುವ 'ಅಕ್ಕ' ಏನೇನೂ ಅಲ್ಲ, ಹೀಗಾಗಿ ಸದ್ಯದ ಸ್ಥಿತಿ ಹೇಗಿದೆಯೆಂದರೆ, ತೆಲುಗು ಮತ್ತು ತಮಿಳು ಸಿನಿಮಾಗಳಿಗೆ ಓವರ್‌ಸೀಸ್ (ದೇಶದ ಹೊರಗಿನ) ಬಿಡುಗಡೆಯಲ್ಲೇ ಸಿನಿಮಾದ ಹಣ ಬಂದುಬಿಡುತ್ತದೆ. ಇದು ಕೇವಲ ಸಿನಿಮಾ ಪ್ರದರ್ಶನದಿಂದ ಮಾತ್ರವಲ್ಲದೇ ಡಿವಿಡಿ ಮಾರಾಟವೂ ಸೇರಿದಂತೆ. ಇನ್ನು ಟಿವಿ ಹಕ್ಕುಗಳು ಮತ್ತು ರೀಮೇಕ್ ಹಾಗೂ ಡಬ್ಬಿಂಗ್‌ನ ಮೂಲಕ ಬರುವುದು ಲಾಭವನ್ನೂ ಖಾತರಿಗೊಳಿಸುತ್ತದೆ. ಉಳಿದಂತೆ ಗೃಹ ಮಾರುಕಟ್ಟೆಯಿಂದ ಒದಗುವುದು ಇನ್ನಷ್ಟು ಹೆಚ್ಚಿನ ಲಾಭವಷ್ಟೇ ಆಗಿರುತ್ತದೆ.

ಇದರರ್ಥ ಮುಂಚಿನಿಂದಲೂ ದೇಶದ ಹೊರಗಿನ ಮಾರುಕಟ್ಟೆಯ ಮೇಲೆ ಬೆಳೆದಿದೆ ಎಂದಲ್ಲ, ಪ್ರಧಾನವಾಗಿ ತಮಿಳು ಮತ್ತು ತೆಲುಗು ಚಿತ್ರರಂಗಗಳು ತಮ್ಮ ವಿಸ್ತಾರವಾದ ಗೃಹ ಮಾರುಕಟ್ಟೆಯಿಂದಲೇ ಬೆಳೆದಂಥವು, ಇಂದು ಸಾಗರದಾಚೆಗೂ ವಿಸ್ತರಿಸಿವೆ. ಇನ್ನೂ ಒಂದು ಹೋಲಿಕೆಯನ್ನು ನೋಡುವುದಾದರೆ, ಆಂಧ್ರದಲ್ಲಿ ಸುಮಾರು 1800 ಥಿಯೇಟರ್‌ಗಳಿವೆ. ಕರ್ನಾಟಕದಲ್ಲಿ 680 ಥಿಯೇಟರ್‌ಗಳು ಮಾತ್ರ ಇವೆ. (10 ವರ್ಷಗಳ ಕೆಳಗೆ ಸುಮಾರು 800 ಥಿಯೇಟರ್‌ಗಳಿದ್ದು ಅವುಗಳಲ್ಲಿ 100ಕ್ಕೂ ಹೆಚ್ಚು ಈಗ ಮುಚ್ಚಿಕೊಂಡಿವೆಯೆಂದು ಹೇಳಲಾಗುತ್ತಿದೆ). ಇದರಲ್ಲಿ ಸುಮಾರು 380 ಥಿಯೇಟರ್‌ಗಳಲ್ಲಿ ಮಾತ್ರ ಕನ್ನಡ ಸಿನಿಮಾ ಹಾಕಲಾಗುತ್ತದೆ. ಇಷ್ಟನ್ನು ನೆಚ್ಚಿಕೊಂಡು ಕನ್ನಡ ಸಿನಿಮಾ ಮಾಡಬೇಕಾಗುತ್ತದೆ.

ಇಂದು ಕನ್ನಡ ಚಿತ್ರರಂಗವನ್ನು ಉದ್ಯಮಶೀಲತೆ ಹಾಗೂ ಸೃಜನಶೀಲತೆಯ ಕೊರತೆ ಬಾಧಿಸುತ್ತಿರುವುದನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು. ಕಳಪೆ ಸಿನಿಮಾಗಳು ಎಲ್ಲಾ ಭಾಷೆಗಳಲ್ಲೂ ಬರುತ್ತಿವೆ. 20 ಕಳಪೆ ಸಿನೆಮಾ ನಂತರ ಒಂದು ಯಶಸ್ವೀ ಚಿತ್ರ ಬರುವುದೇ ಸಾಮಾ ವಿದ್ಯಮಾನ. ಆದರೆ ಆ ಕಳಪೆ ಸಿನಿಮಾಗಳೂ ಹೆ ನಷ್ಟ ಉಂಟುಮಾಡದಿರಲು ಮತ್ತು ಒಂದು ಹಿ ಸಿನಿಮಾವು ಹತ್ತಾರು ಸಿನಿಮಾಗಳನ್ನು ಮಾಡುವ ಧೈರ್ಯ ತಂದುಕೊಡುವುದು, ಅದಕ್ಕಿರುವ ಮಾರುಕಟ್ಟೆಯ ಬಲದಿ ಮಾತ್ರ. ಅದೇ ಉದ್ಯಮಶೀಲತೆಯನ್ನು ಹಿಗ್ಗಿಸುತ್ತದೆ ಮ ಅಂತಹ ಸಾಧ್ಯತೆಯೇ ಸೃಜನಶೀಲತೆಯನ್ನೂ ವಿಸ್ತರಿಸುತ್ತ ಹಾಗಿಲ್ಲದೇ, ಸೃಜನಶೀಲತೆಯು ಕೇವಲ ತನ್ನಂತೆ ತಾ ಹುಟ್ಟಿ ಬೆಳೆಯುವುದಿಲ್ಲ.

ಒಂದು ರಕ್ಷಿತ ಗೃಹ ಮಾರುಕಟ್ಟೆಯ ಆಧಾ ಮೇಲೆಯೇ ಎಲ್ಲಾ ಉದ್ದಿಮೆಗಳೂ ಬೆಳೆದಿವೆ. ಒ ಬೆಳೆದ ನಂತರ ಇತರರೊಡನೆ ಸ್ಪರ್ಧಿಸುವ ಸಾಧ್ಯತೆಗಳ ಅವು ಪಡೆದುಕೊಳ್ಳುತ್ತವೆ. ಮದ್ರಾಸ್ ಕೇಂದ್ರಿ ಉದ್ದಿಮೆಯಾಗಿದ್ದ ಕನ್ನಡ ಚಿತ್ರರಂಗವು ಮೊದಲೇ ಬಾಲಗ್ರ ಪೀಡಿತವಾಗಿದ್ದುದಲ್ಲದೇ, ಅದು ಮತ್ತಷ್ಟು ವಿಸ್ತರಿಸ ಇಂದಿಗೂ ಇರುವ ಮಾರುಕಟ್ಟೆಯ ಸೀಮಿತತೆಯ ಅಡ್ಡಿಯಾಗಿದೆ. ಇಂತಹ ಸಂದರ್ಭದಲ್ಲಿ ಒಂದು ರಕ್ಷಿ ಮಾರುಕಟ್ಟೆಯಿಲ್ಲದೇ ಕನ್ನಡ ಚಿತ್ರರಂಗವು ಇತರರೊ ಸ್ಪರ್ಧಿಸುವುದು ಸುಲಭದ ಮಾತಲ್ಲ.

ಕನ್ನಡದಲ್ಲಿ ದರಿದ್ರ, ಕಳಪೆ ಸಿನಿಮಾಗ ಬರುತ್ತಿಲ್ಲವೆಂದಲ್ಲ; ಅದಕ್ಕೆ ಈ ಸೀಮಿತ ಮಾರುಕಟ್ಟೆ ಮೇಲೆ ಮಾತ್ರ ಅಪವಾ ಹೊರಿಸಬೇಕೆಂದೂ ಅಲ್ಲ. ಹಾ ನೋಡಿದರೆ ಇತರ ಭಾಷೆಗಳ ಬರುತ್ತಿರುವ ಸಿನಿಮಾಗಳ ಗುಣಮ ಎಂಥದ್ದು? ಅಲ್ಲಿಯೂ 20 ಕಳ ಸಿನಿಮಾಗಳ ನಂತರ ಒಂದು ಒಳ್ಳೆ ಸಿನಿಮಾ ಬರುತ್ತಿರುವುದೇ ವಿದ್ಯಮಾ ನಮಗಿಂತಲೂ 3-4 ಪಟ್ಟು ಹೆ ಸಂಖ್ಯೆಯ ಸಿನಿಮಾಗಳು ಅ ತಯಾರಾಗುತ್ತಿವೆ. ಇನ್ನೂ ಹೆಚ್ ಪ್ರಯೋಗಗಳೂ ಸಾಧ್ಯವಾಗಿದೆ.

ಈಗ ಡಬ್ಬಿಂಗ್‌ಗೆ ಅನುಮತಿ ಸಿ ಎಂತಹ ಸಿನಿಮಾಗಳು ಡಬ್ ಆಗುತ್ತ ಜಗತ್ತಿನ ಅತ್ಯುತ್ತಮ ಸಂಗತಿಗಳ ನಮಗೆ ಕನ್ನಡದ ಮುಖಾಂತರ ಸಿಗಲು ಯಾವ ಅಡ್ಡಿಯ ಇರಬಾರದು ಎಂಬುದೇನೋ ನಿಜ. ಆದರೆ ತೆಲು ತಮಿಳು, ಇಂಗ್ಲಿಷ್ ಮತ್ತು ಮಲಯಾಳಂಗಳ ಕ ದರಿದ್ರ ಸಿನಿಮಾಗಳನ್ನು ಡಬ್ ಮಾಡಲು ನಿರ್ಮಾಪಕ ಹೆಚ್ಚಿನ ಆಸಕ್ತಿ ತೋರುತ್ತಾರೋ ಅಥವಾ ಈ ಭಾಷೆಗಳ ಸೇರಿದಂತೆ ಫ್ರೆಂಚ್, ಇರಾನಿ ಇತ್ಯಾದಿ ಭಾಷೆಗಳ ಅತ್ಯುತ್ತ ಚಿತ್ರಗಳನ್ನೋ? ಈ ಬಗ್ಗೆ ಗ್ಯಾರಂಟಿ ಕೊಡುವವರು ಯಾರ ಇದನ್ನು ಖಾತರಿಯಿಂದ ಹೇಳಬಹುದು. ಮಾರುಕ ಅದನ್ನು ನಿರ್ಧರಿಸುತ್ತದೆ. ಅಂದರೆ "ಪ್ರೇಕ್ಷಕರು ಏನ ಬಯಸುತ್ತಾರೋ ಅದನ್ನು ಕೊಡುತ್ತೇವೆ" ಎಂ ಸಮರ್ಥನೆಯೊಂದಿಗೆ ಇಂದು ಕನ್ನಡ ಸಿನಿಮಾಗಳು, ನ ಚಾನೆಲ್‌ಗಳು ಎಂತಹ ಅಭಿರುಚಿಯನ್ನು ಕನ್ನಡಿಗರ ಮೂಡಿಸುತ್ತಿದ್ದಾರೋ ಅಂತಹ ಅಭಿರುಚಿಯ ಸಿನಿಮಾಗಳೇ ಸಾಲುಸಾಲಾಗಿ ಡಬ್ ಆಗುತ್ತವೆ ಎನ್ನುವುದ ಸಂದೇಹವೇ ಇಲ್ಲ.

ಇವತ್ತಿನ ಸಂದರ್ಭವೇನು ಎಂದು ನೋಡದೇ, ಕೇ ಜಗತ್ತಿನ ಅತ್ಯುತ್ತಮ ಅಂಶಗಳನ್ನು ಕನ್ನಡಿಗರಿಗೆ ಉಣಬಡಿಸ ಮಹದಾಶಯದ ಮಾತುಗಳಿಂದ ಪ್ರಯೋಜನವಾಗದ ಡಬ್ಲ್ಯುಟಿಓ ಒಪ್ಪಂದದ ಅನ್ವಯ, ಗ್ಯಾಟ್ಸ್ ಷರತ್ತುಗಳ ರಚಿತವಾಗಿರುವ ಭಾರತೀಯ ಸ್ಪರ್ಧಾ ಆಯೋಗದ ಆದೇ ಅನ್ವಯ ಇಂದು ಡಬ್ಬಿಂಗ್‌ನ ಚರ್ಚೆ ಮೇಲೆದ್ದಿ ಎನ್ನುವುದನ್ನು ಮರೆಯಬಾರದು. ಎಲ್ಲಾ ಸರಕುಗ ಮಾರಾಟದಲ್ಲಿ ಹೇಗೋ ಹಾಗೆ, ಮನರಂಜ ಉದ್ದಿಮೆಯಲ್ಲೂ ಜಾಗತಿಕ ಹಾಗೂ ಭಾರತೀಯ ಬಲಾಢ್ಯರಿಗೆ ಲಾಭ ತಂದುಕೊಡುವ ಉದ್ದೇಶದಿಂದ ಡಬ್ಬಿಂಗ್ ಮುಕ್ತತೆಯನ್ನು ಕೇಳಲಾಗುತ್ತಿದೆಯಷ್ಟೇ. ಮಿಕ್ಕ ವಿಚಾರದಲ್ಲಿ ಹೇಗೆ ಒಂದು ರಕ್ಷಿತ ಗೃಹ ಮಾರುಕಟ್ಟೆಯ ಮೂಲ ಸ್ಥಳೀಯ ಉದ್ದಿಮೆಗಳನ್ನು ನಾವು ರಕ್ಷಿಸಿಕೊಳ್ಳಬೇಕು ಮತ್ತ ಬೆಳೆಸಬೇಕೋ, ಹಾಗೆ ಚಿತ್ರರಂಗಕ್ಕೂ ಅದರ ರಕ್ಷಣಾತ್ಮ ಕ್ರಮಗಳ ಮೂಲಕ ಬೆಳೆಸಬೇಕು. ●

ಎರಡು ಸಂದರ್ಶನಗಳ ಸುತ್ತ....



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಇತ್ತೀಚೆಗೆ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿ ...ಸ್ ನೌ ಟಿವಿ ಚಾನೆಲ್‌ನ ಸುದ್ದಿ ಸಂಪಾದಕ ಆರ್ನಬ್ ...ಸ್ವಾಮಿಗೆ ಕೊಟ್ಟ ಸಂದರ್ಶನಕ್ಕೆ ವಿವಿಧ ತರಹದ ...ಯೆಗಳು ವ್ಯಕ್ತವಾಗಿವೆ. ಹೆಚ್ಚಿನವರು "ಸಂದರ್ಶನದಲ್ಲಿ ...ಲ್ ಗಾಂಧಿಯ ಉತ್ತರಗಳು ಸಪ್ಪೆಯಾಗಿದ್ದವು" ಎಂದು ...ಪ್ರಾಯಪಟ್ಟಿದ್ದಾರೆ. ಹಾಗೆಯೇ ಇತರರು "ಆತ ಇನ್ನೂ ...ೀಯವಾಗಿ ಪಕ್ವಗೊಂಡಿಲ್ಲ", "ಹಲವು ಪ್ರಶ್ನೆಗಳಿಗೆ ... ಕೊಡದೆ ಪಲಾಯನ ಮಾಡಿದ", "ನರೇಂದ್ರ ...ದಿಯ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಕಠಿಣವಾಗಿ ...ಯಿಸಲಿಲ್ಲ" ಎಂದೂ ಹೇಳಿದ್ದಾರೆ.

...ಸಂದರ್ಶನವನ್ನು ಇಡಿಯಾಗಿ ನೋಡಿದ ನನ್ನ ...ಪ್ರಾಯ "ಕಾಂಗ್ರೆಸ್ ಪಕ್ಷದವರು ಇಲ್ಲಿಯತನಕ ...ತಿರುವ ಪಾಪಗಳೆಲ್ಲ ರಾಹುಲ್ ಗಾಂಧಿಯ ...ಂಯನ್ನು ಕಟ್ಟಿಹಾಕಿತು" ಎಂಬುದಾಗಿತ್ತು.

...ದೇನೇ ಇರಲಿ, ಪಕ್ಷದ ಸದಸ್ಯರ ಮತ್ತು ಬಾಡಿಗೆಗೆ ...ರುವ ಸಾವಿರಾರು ಜನರ ಮುಂದೆ ವೇದಿಕೆಯ ಮೇಲೆ ... ಭಾಷಣ ಬಿಗಿಯುವುದಕ್ಕೂ, 'ಕಠಿಣ' ಪ್ರಶ್ನೆಗಳನ್ನು ...ವ ಆರ್ನಬ್ ತರಹದ ಪತ್ರಕರ್ತರ ಎದುರು ಕೂತು ...ಗಳನ್ನು ಕೊಡುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ...ಉದಾಹರಣೆ ಎಂದರೆ ನರಹಂತಕ ನರೇಂದ್ರ ಮೋದಿ ...ಯವ ಸಾರ್ವಜನಿಕ ಭಾಷಣಗಳು. ತನ್ನ ಭಾಷಣದಲ್ಲಿ ...ಾರು ಸುಳ್ಳುಗಳನ್ನು ಮತ್ತು ಕಪೋಲಕಲ್ಪಿತ ...ಸವನ್ನೂ ಮೋದಿ ಬೊಗಳಿದರೂ ಆತ ತನ್ನ ಮಾತಿನ ...ಯಿಂದಲೇ ಸಿಕ್ಕಾಪಟ್ಟೆ ಚಪ್ಪಾಳೆಗಳನ್ನು ಗಿಟ್ಟಿಸುತ್ತಾನೆ. ... ಸಂದರ್ಶನಗಳಲ್ಲಿ ಆತನ ವರ್ತನೆ, ಮಾತಿನ ಶೈಲಿ ... ಪದಬಳಕೆಯನ್ನು ನೋಡಿದರೆ ಆತ ಎಷ್ಟು ಟೊಳ್ಳು ... ಗೊತ್ತಾಗುತ್ತದೆ. (ಆಸಕ್ತಿ ಇರುವವರು ಮೋದಿ ... ತಿಂಗಳುಗಳ ಹಿಂದೆ ರಾಯ್‌ಟರ್ಸ್ ಸುದ್ದಿ ಸಂಸ್ಥೆಗೆ ... ಸಂದರ್ಶನದ ವಿಡಿಯೋ ತುಣುಕುಗಳನ್ನು ...ರ್‌ನೆಟ್‌ನಲ್ಲಿ ನೋಡಬಹುದು.)

...ಹಾಗೆ ನೋಡಿದರೆ ಇತ್ತೀಚೆಗೆ ನಡೆದ ಎಐಸಿಸಿ ...ಲ್ಲಿ ರಾಹುಲ್ ಕೊಟ್ಟ ಭಾಷಣ ನಿಜಕ್ಕೂ ಚೆನ್ನಾಗಿತ್ತು. ... ಆತನ ಆಸಕ್ತಿ ಮತ್ತು ಪ್ರಾಮಾಣಿಕ ಕಾಳಜಿಗಳನ್ನು ...ಸುವಂತಿದೆ (ಇದು ಕೂಡ ನೆಟ್‌ನಲ್ಲಿ ಲಭ್ಯವಿದೆ). ಆ ...ಬಿಕ್ಕೆ ಹೋಲಿಸಿದರೆ ರಾಹುಲ್ ಸಂದರ್ಶನ ಸಪ್ಪೆಯಾಗಿ ...ತ್ತದೆ ಎಂಬುದೂ ಅಷ್ಟೇ ಸತ್ಯ.

...ಮಾರು ಒಂದೂವರೆ ಗಂಟೆಗಳ ಕಾಲ ನಡೆದ

ಅದರಲ್ಲೂ ಮೋದಿಯ ಬಗ್ಗೆ ಆರ್ನಬ್ ಕೇಳಿದ ಪ್ರಶ್ನೆಗಳಿಗೆ ಉತ್ತರ ಕೊಡದೇ ಇರುವ ಮೂಲಕ ರಾಹುಲ್ ಮೋದಿಯು ಅಮುಖ್ಯ ಎಂಬ ಸಂದೇಶವನ್ನು ಸಾರಿದ್ದಾರೆ.

ಅಷ್ಟೇ ಮುಖ್ಯವಾಗಿ ಆರ್ನಬ್ ಮತ್ತೆ ಮತ್ತೆ 'ಮೋದಿಯೊಂದಿಗೆ ಚರ್ಚೆಗೆ ನೀವು ಸಿದ್ಧರಿದ್ದೀರಾ?' ಎಂದು ಕೇಳಿದ ಪ್ರಶ್ನೆಗೆ ರಾಹುಲ್ 'ಚರ್ಚೆ ಈಗಾಗಲೇ ನಡೆಯುತ್ತಿದೆ' ಎಂದು ಉತ್ತರಿಸುವ ಮೂಲಕ ಈ ಕುರಿತು ನೈಜ ಚರ್ಚೆ ಟಿವಿ ಚಾನೆಲ್‌ಗಳಲ್ಲಿ ನಡೆಯುವ ಬದಲು ಸಾರ್ವಜನಿಕರ ನಡುವೆ ನಡೆಯುವುದೇ ಸರಿ ಎಂದು ತೋರಿಸಿದ್ದಾರೆ.

ಇನ್ನು 1984ರ ಸಿಖ್ಖರ ನರಮೇಧಕ್ಕೆ 'ಕ್ಷಮೆ' ಕೇಳಿದ್ದರೆ ಟೈಮ್ಸ್ ನೌ ಚಾನೆಲ್‌ನವರು 'ನಾವೆಂತಹ ಸಾಧನೆ ಮಾಡಿದೆವು ನೋಡಿ' ಎಂದು ಕೊಚ್ಚಿಕೊಳ್ಳಲು ನೆರವಾಗುತ್ತಿದ್ದರಲ್ಲದೆ ಹೆಚ್ಚಿನದೇನನ್ನೂ ಸಾಧಿಸುತ್ತಿರಲಿಲ್ಲ. ಈಗಾಗಲೇ ಆ ನರಮೇಧಕ್ಕೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಪ್ರಧಾನಿ ಮನಮೋಹನ್ ಸಿಂಗ್ ಅವರು ಕ್ಷಮೆಯಾಚಿಸಿರುವುದರಿಂದ ರಾಹುಲ್ ಕ್ಷಮೆ ಕೇಳುವುದಕ್ಕಿಂತ ಆ ದುರ್ಘಟನೆಯಲ್ಲಿ ಅನ್ಯಾಯಕ್ಕೊಳಗಾದವರಿಗೆ ನ್ಯಾಯ ಸಿಗುವಂತೆ ಮಾಡಿದರೆ ಅದೇ ಸರಿಯಾದ ಕ್ರಮವಾಗುತ್ತದೆ."

ರಾಹುಲ್ ಗಾಂಧಿ ಪ್ರಥಮ ಬಾರಿಗೆ ಓರ್ವ 'ಕಠಿಣ ಪ್ರಶ್ನೆಗಳನ್ನು ಕೇಳುವ' ಪತ್ರಕರ್ತರೊಂದಿಗೆ ಮುಖಾಮುಖಿಯಾಗಿ ಒಂದು ಗಂಟೆಗಿಂತಲೂ ಹೆಚ್ಚು ಸಮಯವನ್ನು ಕಳೆದಿದ್ದಾರೆ. ಆದರೆ ಅವರ 'ಪ್ರತಿಸ್ಪರ್ಧಿ' ಎಂದೇ ಬಿಂಬಿಸಲಾಗುತ್ತಿರುವ ಮೋದಿ ಎಂದಾದರೂ ಇಂತಹ 'ಪರೀಕ್ಷೆ'ಗೆ ತಮ್ಮನ್ನು ಒಡ್ಡಿಕೊಂಡಿದ್ದಾರೆಯೇ ಎಂದು ನೋಡಿದರೆ ನಗು ಉಕ್ಕಿಬರುತ್ತದೆ.

ಮೋದಿ ದೇಶದಾದ್ಯಂತ ಸುತ್ತುತ್ತಾ ಸುದ್ದಿಯಲ್ಲಿರುತ್ತಾನೆಯೇ ಹೊರತು ಆತ ಪತ್ರಕರ್ತರೊಂದಿಗೆ ನೇರಾನೇರ ಚರ್ಚೆಗೆ ಕೂತಿದ್ದು ಅಪರೂಪ. ಹಾಗೆ ಕೂತಾಗಲೂ ಆತ ಮಾಡಿಕೊಂಡಿರುವ ಎಡವಟ್ಟುಗಳಿಗೆ ಲೆಕ್ಕವಿಲ್ಲ. ಮೋದಿ ಇತ್ತೀಚೆಗೆ ದೈನಿಕ್ ಭಾಸ್ಕರ್ ಎಂಬ ಪತ್ರಿಕೆಗೆ ಸಂದರ್ಶನ ಕೊಟ್ಟಿದ್ದ. ಆ ಸಂದರ್ಶನದಲ್ಲಿ ಆತ "ಸರ್ದಾರ್ ವಲ್ಲಭಭಾಯಿ ಪಟೇಲರ ಅಂತ್ಯ ಸಂಸ್ಕಾರಗಳಿಗೆ ನೆಹರೂ ಹಾಜರಾಗಿರಲಿಲ್ಲ" ಎಂದು ತನ್ನ ಎಂದಿನ ಪ್ರವೃತ್ತಿಯಂತೆ ಸುಳ್ಳು ಒದರಿದ್ದ. ಮಾರನೆ ದಿನವೇ ಪಟೇಲರ ಅಂತ್ಯ ಕ್ರಿಯೆಗಳಲ್ಲಿ ನೆಹರೂ ಭಾಗವಹಿಸಿದ್ದ ದೃಶ್ಯಗಳು ಬಹಿರಂಗಗೊಂಡಿದ್ದವು. ಈಗ ಪಟೇಲರ ಖ್ಯಾತಿಯನ್ನೇ ತನ್ನ ರಾಜಕೀಯಕ್ಕೆ ಬಂಡವಾಳವಾಗಿಸಿಕೊಳ್ಳಬೇಕೆಂದು

ಘಟನೆಗೂ ಸಂಬಂಧವೇ ಇಲ್ಲ. ಈಗ ರಾಹುಲ್ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷನಾದ್ದರಿಂದ, ಅಂತಹ ಪ್ರಶ್ನೆಗಳನ್ನೂ ಎದುರಿಸಬೇಕಾಗುತ್ತದೆ ಎಂಬುದೂ ಅಷ್ಟೇ ವಾಸ್ತವ.

ಅದೇ ಮಾನದಂಡದಲ್ಲಿ ಮೋದಿಯನ್ನೂ 1992ರಲ್ಲಿ ಬಾಬ್ರಿ ಮಸೀದಿಯನ್ನು ಕೆಡವಿದ್ದರ ಬಗ್ಗೆ, ನೂರಾರು ಅಮಾಯಕರನ್ನು ಬಲಿ ತೆಗೆದುಕೊಂಡಿರುವ ಕೇಸರಿ ಭಯೋತ್ಪಾದನೆ ಬಗ್ಗೆ ಯಾಕೆ ಯಾರೂ ಪ್ರಶ್ನಿಸುವುದಿಲ್ಲ? ಅದರಲ್ಲೂ ಬಾಬ್ರಿ ಮಸೀದಿಯನ್ನು ಕೆಡವಿದ್ದ ಅಡ್ವಾನಿಯ ರಥಯಾತ್ರೆಯಲ್ಲಿ ಮೋದಿಯೂ ಭಾಗವಹಿಸಿದ್ದ, ಆತನ ಬೆನ್ನಿಗಿರುವ ಆರೆಸ್ಸೆಸ್ ಪ್ರಚೋದನೆಯಿಂದಲೇ ದೇಶದ ವಿವಿಧ ಕಡೆ ಕೇಸರಿ ಭಯೋತ್ಪಾದಕ ಕೃತ್ಯಗಳು ನಡೆದಿವೆ ಎಂಬುದು ತನಿಖೆಗಳಲ್ಲಿ ಸ್ಪಷ್ಟವಾಗಿದ್ದರೂ ಅಂತಹ ಯಾವ ಪ್ರಶ್ನೆಗಳಿಗೂ ಮೋದಿ ಉತ್ತರಿಸುವುದಿಲ್ಲ. ಅಷ್ಟೇ ಯಾಕೆ ತಾನೇ ನಡೆಸಿದ, ಎರಡು ಸಾವಿರಕ್ಕೂ ಹೆಚ್ಚು ಅಮಾಯಕರ ಸಾವಿಗೆ ಕಾರಣವಾದ ಗುಜರಾತ್ ನರಮೇಧ ಕುರಿತ ಪ್ರಶ್ನೆಗಳಿಗೂ ಆತ ಉತ್ತರಿಸುವುದಿಲ್ಲ.

ಈ ಕುರಿತು ಆತ ಥಾಪರ್ ಅವರಿಗೆ ಕೊಟ್ಟ ಮೂರು ನಿಮಿಷಗಳ ಸಂದರ್ಶನದ ಒಂದೆರಡು ಉದಾಹರಣೆಗಳನ್ನು ಇಲ್ಲಿ ಕೊಡುತ್ತೇನೆ.


ಥಾಪರ್: ನೀವು ಗುಜರಾತನ್ನು ಬಹಳಷ್ಟು ಅಭಿವೃದ್ಧಿ ಮಾಡಿದ್ದೀನಿ ಎಂದು ಹೇಳಿದರೂ ನಿಮ್ಮನ್ನು ನರಹಂತಕ ಎಂದೂ, ಮುಸಲ್ಮಾನದ ದ್ವೇಷಿ ಎಂದೂ ಹಲವರು ದೂರುತ್ತಾರೆ. ನಿಮಗೆ 'ಇಮೇಜ್ ಪ್ರಾಬ್ಲಮ್' ಇದೆ ಎನಿಸುತ್ತದೆಯಾ?


ಮೋದಿ: ಅಂತಹ ಆರೋಪವನ್ನು ಇಬ್ಬರೋ ಮೂವರೋ ಮಾಡುತ್ತಿದ್ದಾರೆ ಅಷ್ಟೇ. ಅದು ಜನಾಭಿಪ್ರಾಯವಲ್ಲ.

ಥಾಪರ್: ಅಂದರೆ ಈ ಪಿತೂರಿಯ ಹಿಂದೆ ಇಬ್ಬರೋ ಮೂವರೋ ಇದ್ದಾರಷ್ಟೇ ಎಂಬುದು ನಿಮ್ಮ ಅಭಿಪ್ರಾಯವೇ?

ಮೋದಿ: ನಾನು ಹಾಗೆ ಹೇಳಲಿಲ್ಲ.

ಥಾಪರ್: ಸುಪ್ರೀಂಕೋರ್ಟ್ ಕೂಡ ನಿಮ್ಮ ಸರ್ಕಾರದ ಬಗ್ಗೆ ವಿಶ್ವಾಸವಿಲ್ಲ ಎಂದಿತ್ತು. ಸುಪ್ರೀಂಕೋರ್ಟಿನ ಮುಖ್ಯ ನ್ಯಾಯಾಧೀಶರು ಅಸಹಾಯಕ ಮಕ್ಕಳು ಮತ್ತು ಅಮಾಯಕ ಮಹಿಳೆಯರು ಕೊಲೆಯಾಗುತ್ತಿದ್ದಾಗ ಅತ್ತ ನೋಡದ ನೀರೋ





...ನದಲ್ಲಿ ರಾಹುಲ್ ಹಲವು ಬಾರಿ ಆರ್ನಬ್ ಕೇಳಿದ ...ಗೆ ನೇರವಾದ ಉತ್ತರ ಕೊಡದೆ ತನ್ನ ರಾಜಕೀಯ ...ಗಳ, ಗುರಿಗಳ, ಇಚ್ಛೆಗಳ ಬಗ್ಗೆ ವಿವರಿಸಿದರು. ...ರಾಜಕೀಯ ಪ್ರತಿಸ್ಪರ್ಧಿ ಎಂದೇ ಬಿಂಬಿಸಲಾಗುತ್ತಿರುವ ...ದ್ರ ಮೋದಿ ತನ್ನನ್ನು 'ಶಹಜಾದ' ಎಂದು ಲೇವಡಿ ...ಬಂಪ ಬಗ್ಗೆಯೂ ಅವರ ಅಭಿಪ್ರಾಯವನ್ನು ...ಗಲೂ ರಾಹುಲ್ ನೇರ ಉತ್ತರ ಕೊಡಲಿಲ್ಲ. ಇನ್ನು ...ಬಹು ಚರ್ಚಿತವಾಗಿರುವ 1984ರ ಸಿಖ್ಖರ ...ಧದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತೀರ ಎಂಬ ಪ್ರಶ್ನೆಗೂ ...ಲ್ ನೇರ ಮತ್ತು ದಿಟ್ಟ ಉತ್ತರ ಕೊಡಲಿಲ್ಲ.

... ಬಗ್ಗೆ ಫರ್ಜಾನ ವರ್ಸೆ ಎಂಬ ಮುಂಬೈ ಮೂಲದ ... ಹೇಳಿರುವುದನ್ನು ಗಮನಿಸೋಣ. ಫರ್ಜಾನ ಅವರು ...ಲೇಖನದಲ್ಲಿ ಹೀಗೆ ಬರೆದಿದ್ದಾರೆ:

...ಷ್ಟು ಸಂದರ್ಶನದಲ್ಲಿ ರಾಹುಲ್ ಹಲವಾರು ...ಗಳ ಬಗ್ಗೆ ಮತ್ತು ವ್ಯವಸ್ಥೆಯಲ್ಲಿನ ದೋಷಗಳ ...ಬಗ್ಗೆ ಅಭಿಪ್ರಾಯಗಳನ್ನು ಮಂಡಿಸಿದರು. ಆರ್ನಬ್ ... ನಿರ್ದಿಷ್ಟ ಪ್ರಶ್ನೆಗಳಿಗಿಂತ ರಾಹುಲ್ ವ್ಯಕ್ತಪಡಿಸಿದ ...ಗಳು ಮತ್ತು ದೋಷಗಳು ಮುಖ್ಯವಾದ್ದರಿಂದ ...ಬಗ್ಗೆ ಯಾವ ತಕರಾರೂ ಇರಕೂಡದು. ಆಕಸ್ಮಾತ್ ... ಉಲ್ಲೇಖಿಸಿದ ವ್ಯಕ್ತಿಗಳ ಬಗ್ಗೆ ರಾಹುಲ್ ...ಿಸಿದ್ದರೆ ಅದಕ್ಕಿಂತ ದಡ್ಡತನ ಇನ್ನೊಂದಿರಲಿಕ್ಕಿಲ್ಲ.

ಪ್ರಯತ್ನಿಸುತ್ತಿರುವ ಮೋದಿಯ ಸುಳ್ಳು ರಟ್ಟಾಗುತ್ತಿದ್ದಂತೆ ಆ ಸಂದರ್ಶನದ ಪುಟವೇ ಇಂಟರ್‌ನೆಟ್‌ನಿಂದ ನಾಪತ್ತೆಯಾಗಿದೆ!

ಅದಕ್ಕಿಂತ ಮುಂಚೆ ಆತ ರಾಯ್‌ಟರಸ್‌ಗೆ ಕೊಟ್ಟ ಸಂದರ್ಶನದಲ್ಲೂ "ನಾನು ಹಿಂದೂ ರಾಷ್ಟ್ರವಾದಿ" ಎಂದದ್ದು ಮತ್ತು ಗುಜರಾತ್ ಗಲಭೆಯಲ್ಲಿ ಸಾವಿಗೀಡಾದ ಮುಸಲ್ಮಾನರನ್ನು "ಕಾರಿನ ಚಕ್ರಗಳಿಗೆ ಸಿಕ್ಕಿಹಾಕಿಕೊಂಡು ಸತ್ತ ಕುನ್ನಿಗಳು" ಎಂದು ಬಣ್ಣಿಸಿದ್ದೂ ಆತನಿಗೇ ಮಾರಕವಾಗಿ ಪರಿಣಮಿಸಿದ್ದವು.

ಆರ್ನಬ್ ನಡೆಸಿಕೊಡುವ 'ಫ್ರಾಂಕ್ಲಿ ಸ್ಪೀಕಿಂಗ್' ಕಾರ್ಯಕ್ರಮದಲ್ಲಿ ರಾಹುಲ್ ಒಂದೂವರೆ ಗಂಟೆ ಕೂತಿದ್ದು ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನವನ್ನಾದರೂ ಮಾಡಿದರು. ಆದರೆ ಕರಣ್ ಥಾಪರ್ ನಡೆಸಿಕೊಡುವ 'ಡೆವಿಲ್ಸ್ ಅಡ್ವೊಕೇಟ್' ಎಂಬ ಕಾರ್ಯಕ್ರಮಕ್ಕೆ 2007ರಲ್ಲಿ ಹಾಜರಾದ ಮೋದಿ ಮೂರುವರೆ ನಿಮಿಷಕ್ಕೆ ಪ್ರಶ್ನೆಗಳಿಗೆ ಉತ್ತರಿಸಲಾಗದೆ ಕಾಲ್ಕಿತ್ತಿದ್ದ!

ಆರ್ನಬ್ ಅವರು 1984ರ ಸಿಖ್ಖರ ನರಮೇಧದ ಬಗ್ಗೆ ರಾಹುಲ್ ಅವರನ್ನು ಪ್ರಶ್ನಿಸಿದ್ದು ಸರಿಯೇ ಎಂಬ ಪ್ರಶ್ನೆಯೂ ಇದೆ. ಯಾಕೆಂದರೆ ಅದು ನಡೆದಾಗ ರಾಹುಲ್ ಇನ್ನೂ 14 ವರ್ಷ ವಯಸ್ಸಿನ ಬಾಲಕ. ಆತನಿಗೂ ಆ

ತರಹ ನೀವು ಎಂದಿದ್ದರು.

ಮೋದಿ: ಆದರೆ ಕೋರ್ಟ್ ತನ್ನ ತೀರ್ಪಿನಲ್ಲೆಲ್ಲೂ ಹಾಗೆ ಹೇಳಿಲ್ಲ.

ಥಾಪರ್: ಆ ನರಮೇಧದ ಬಗ್ಗೆ ನೀವು ಪಶ್ಚಾತಾಪವನ್ನು ಯಾಕೆ ವ್ಯಕ್ತಪಡಿಸಿಲ್ಲ. ನಿಮ್ಮ ಸರ್ಕಾರ ಅಮಾಯಕರ ರಕ್ಷಣೆಗೆ ಇನ್ನೂ ಹೆಚ್ಚಿನದ್ದನ್ನು ಮಾಡಬಹುದಿತ್ತು ಎಂದು ನೀವು ಯಾಕೆ ಒಪ್ಪಿಕೊಳ್ಳುವುದಿಲ್ಲ?

ಮೋದಿ: ನನಗೆ ವಿರಾಮ ಬೇಕು, ಕುಡಿಯಲು ನೀರು ಬೇಕು (ಎನ್ನುತ್ತಾ ಮೈಕ್ರೊಫೋನ್ ಕಿತ್ತೆಗೆದು ಅಲ್ಲಿಂದ ಹೊರಟುಹೋದ).

ಮೊನ್ನಿನ ಸಂದರ್ಶನದಲ್ಲಿ ತನಗೆ ಸಂಬಂಧವೇ ಇರದಿದ್ದ 1984ರ ಮಾರಣ ಹೋಮದ ಬಗೆಗಿನ ಪ್ರಶ್ನೆಯ ಎದುರು ರಾಹುಲ್ ಪ್ರತಿಕ್ರಿಯಿಸಿದ ರೀತಿಯನ್ನು, ಅಂದಿನ ಸಂದರ್ಶನದಲ್ಲಿ ಮೋದಿ ತಾನೇ ನಡೆಸಿದ ಕೊಲೆಗಳನ್ನು ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ರೀತಿಯನ್ನೂ ಹೋಲಿಸಿದರೆ ಯಾರು ಹೆಚ್ಚು ಸೂಕ್ಷ್ಮಜ್ಞರು ಎಂದು ಎಂಥವರಿಗೂ ಗೊತ್ತಾಗುತ್ತದೆ.

ಮೋದಿ ಎಂತಹ ದುರಹಂಕಾರಿ ಎಂಬುದಕ್ಕೆ ಇಲ್ಲಿ ಇನ್ನೊಂದು ಉದಾಹರಣೆಯನ್ನು ಕೊಡುತ್ತೇನೆ. ಇದು

2012ರಲ್ಲಿ ಗುಜರಾತ್ ವಿಧಾನಸಭೆಗೆ ಚುನಾವಣೆಗಳು ನಡೆಯುತ್ತಿದ್ದ ಸಂದರ್ಭದಲ್ಲಿ ಸಿಎನ್‌ಎನ್ ಐಬಿಎನ್ ಟಿವಿ ಚಾನೆಲ್‌ನ ಮುಖ್ಯಸ್ಥ ರಾಜ್‌ದೀಪ್ ಸರ್ದೇಸಾಯ್‌ಗೆ ಮೋದಿ ಕೊಟ್ಟ ಸಂದರ್ಶನ. ಇದು ನಡೆದದ್ದು ಟಿವಿ ಸ್ಟುಡಿಯೋದಲ್ಲಲ್ಲ, ಬದಲಿಗೆ ಚುನಾವಣಾ ಪ್ರಚಾರಕ್ಕೆಂದು ಮೋದಿ ಉಪಯೋಗಿಸುತ್ತಿದ್ದ ಬಸ್ ಒಂದರಲ್ಲಿ. ಆಕಸ್ಮಾತ್ ಈ ಸಂದರ್ಶನ ಕೂಡ ಸ್ಟುಡಿಯೋದಲ್ಲಿ ಜರುಗಿದ್ದರೆ ಅಲ್ಲಿಂದಲೂ ಮೋದಿ ಪೇರಿ ಕೀಳುತ್ತಿದ್ದನೇನೋ!

ಸಂದರ್ಶನದ ಆಯ್ದ ಭಾಗ ಹೀಗಿದೆ:

ರಾಜ್‌ದೀಪ್ ಸರ್ದೇಸಾಯ್: 2002ರ ಕೋಮುಗಲಭೆಯ ಹಿನ್ನೆಲೆಯಲ್ಲಿ ಸೋನಿಯಾ ಗಾಂಧಿಯವರು ನಿಮ್ಮನ್ನು 'ಮೌತ್ ಕಾ ಸೌದಾಗರ್' ಎಂದು ಕರೆದಿದ್ದರು. ನಿಮ್ಮ ಪ್ರತಿಕ್ರಿಯೆ?

ಮೋದಿ: ಈ ವಿಷಯದ ಬಗ್ಗೆ ರಾಜ್‌ದೀಪ್ ಸರ್ದೇಸಾಯ್ ಕಳೆದ ಹತ್ತು ವರ್ಷಗಳಿಂದ ಹೇಳಿದ್ದೇ ಹೇಳುವ ಕಿಸಬಾಯಿದಾಸನಂತೆ ಪ್ರಸ್ತಾಪಿಸುತ್ತಿರುತ್ತಾರೆ. ಅವರಿಗೆ ದಿನದ ರೊಟ್ಟಿ ಹುಟ್ಟುವುದೇ ಇಂತಹ ಪ್ರಶ್ನೆಗಳನ್ನು ಕೇಳುವ ಮೂಲಕ. ಅವರಿಗೆ ಒಳ್ಳೆಯದಾಗಲಿ. ಅಷ್ಟೇ ಅಲ್ಲ, ಮೋದಿಯನ್ನು ಸದಾ ಟೀಕಿಸುವವರಿಗೆ ಅವರ ಮಿತ್ರರು ರಾಜ್ಯಸಭಾದಲ್ಲಿ ಸ್ಥಾನವನ್ನೋ, ಪದ್ಮಶ್ರೀ, ಪದ್ಮಭೂಷಣ ತರಹದ ಪ್ರಶಸ್ತಿಗಳನ್ನೋ ಕೊಟ್ಟು ಸತ್ಕರಿಸುತ್ತಾರೆ. ನಿಮಗೂ ಅಂತಹ ಅದೃಷ್ಟ ಒದಗಿ ಬರಲಿ.

ರಾಜ್‌ದೀಪ್: ನೀವು ನನ್ನ ಪ್ರಶ್ನೆಗೆ ಉತ್ತರಿಸಿಲ್ಲ. 2002ರ ಗಲಭೆಗಳು ನಿಮ್ಮ ಮುಂದಿನ ರಾಜಕೀಯ ಹಾದಿಗೆ ತೊಡರಗಾಲಾಗುತ್ತದಾ? ಯಾಕೆಂದರೆ ಈಗಾಗಲೇ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ನೀವು ಅವರ ರಾಜ್ಯದಲ್ಲಿ ಪ್ರಚಾರ ಮಾಡುವುದು ಬೇಡ ಎಂದಿದ್ದಾರೆ.

ಮೋದಿ: ರಾಜ್‌ದೀಪ್, ನಿನ್ನ ಬಳಿ 24X7 ಟಿವಿ ಚಾನೆಲ್ ಇದೆ. ಅದರಲ್ಲಿ ನೀನು ಈ ಬಗ್ಗೆ ಗಂಟೆಗಟ್ಟಲೆ ಚರ್ಚೆ ನಡೆಸು.

ರಾಜ್‌ದೀಪ್: ನೀವು ಬಿಹಾರಕ್ಕೆ ಹೋಗುತ್ತೀರಾ?

ಮೋದಿ: (ಉತ್ತರಿಸದೆ ಹೊರಗಡೆ ಇರುವ ಜನರತ್ತ ಕೈಬೀಸುವಲ್ಲಿ ಮಗ್ನರಾಗುತ್ತಾರೆ)

ರಾಜ್‌ದೀಪ್ (ಸಂದರ್ಶನವನ್ನು ಮುಂದುವರೆಸುತ್ತಾ) ನೀವು ಈ ದೇಶದ ಪ್ರಧಾನಿ ಆಗಬೇಕೆಂದರೆ 2002ರ ಮಾರಣಹೋಮಕ್ಕೆ ಕ್ಷಮೆ ಕೇಳಬೇಕು ಅನ್ನಿಸುವುದಿಲ್ಲವೇ?


ಮೋದಿ: ನಾನೀಗಾಗಲೇ ಹೇಳಿದ್ದೇನೆ. ಇಂತಹ ಪ್ರಶ್ನೆಗಳನ್ನು ಕೇಳುವವರಿಗೆ ಸೂಕ್ತ ಸ್ಥಾನಮಾನಗಳು ಸಿಗುತ್ತವೆ ಎಂದು.


ರಾಜ್‌ದೀಪ್: ನನ್ನ ಪತ್ರಿಕೋದ್ಯಮಕ್ಕೆ ನನಗೀಗಾಗಲೇ ಪದ್ಮಶ್ರೀ ಪ್ರಶಸ್ತಿ ಸಿಕ್ಕಿದೆ. ನೀವು 2002ಕ್ಕೆ ಕ್ಷಮೆ ಕೇಳುವ ಬಗೆಗಿನ ಪ್ರಶ್ನೆಗೆ ಉತ್ತರಿಸುವುದಿಲ್ಲವೇ?


ಮೋದಿ: (ಪ್ರಶ್ನೆಗೆ ಉತ್ತರಿಸದೇ ಮತ್ತೆ ಹೊರಗಿರುವ ಜನರತ್ತ ಕೈಬೀಸುತ್ತಾ ಕೂರುತ್ತಾನೆ.)


ಇಷ್ಟೆಲ್ಲ ಹೇಳಿದ ಮೇಲೆ ಒಂದನ್ನು ಸ್ಪಷ್ಟಪಡಿಸಬೇಕಿದೆ. ನಾನು ರಾಹುಲ್ ಅವರ ಅಭಿಮಾನಿಯೂ ಅಲ್ಲ, ಬೆಂಬಲಿಗಳೂ ಅಲ್ಲ. ಆದರೆ ಆ ಯುವಕನಲ್ಲಿ ಒಂದಿಷ್ಟು ಸಮಚಿತ್ತ, ಸಾಮಾಜಿಕ ಕಾಳಜಿ, ಪ್ರಾಮಾಣಿಕತೆ ಇದೆ ಎಂದೂ ಆತ ಇನ್ನಷ್ಟು ಪಕ್ವತೆ ಮತ್ತು ಸ್ಪಷ್ಟತೆ ಪಡೆದರೆ ಕಾಂಗ್ರೆಸ್ ಪಕ್ಷಕ್ಕೆ ಒಳ್ಳೆಯದಾಗುತ್ತದೆ ಎಂದೂ ಅನ್ನಿಸುತ್ತದೆ... ●


ಮಂಗಳೂರು: ಪೂಜಾರಿ-ಮೊಯ್ಲಿ ಟಿಕೆಟ್ ತಿಣುಕಾಟ!


ವೀರಪ್ಪ ಮೊಯ್ಲಿ


ಜನಾರ್ದನ ಪೂಜಾರಿ


ರಮಾನಾಥ್ ರೈ


ಮೋಹನ್


ಹರ್ಷ

ದಕ್ಷಿಣ ಕನ್ನಡ ಕಾಂಗ್ರೆಸ್‌ನ 'ಅಂಡರ್' ವರ್ಲ್ಡ್‌ನಲ್ಲಿ ಮತ್ತೆ ಗ್ಯಾಂಗ್‌ವಾರ್ ಸದ್ದು-ಸಪ್ಪಳ ಕೇಳಲಾರಂಭಿಸಿದೆ! ಪರಂಪರಾಗತ ಶತ್ರುಗಳಾದ ಜನಾರ್ದನ ಪೂಜಾರಿ ಮತ್ತು ವೀರಪ್ಪ ಮೊಯ್ಲಿ ಎಂಬ ಕಾಲೆಳೆದಾಟದ ಕಿಂಗ್‌ಗಳು ಕತ್ತಿ ವರಸೆಗೆ ಇಳಿದಿದ್ದಾರೆ. ಚಿಕ್ಕಬಳ್ಳಾಪುರಕ್ಕೆ ಮೊಯ್ಲಿ ವಲಸೆ ಹೋದ ತರುವಾಯ ಜಿಲ್ಲಾ ಕಾಂಗ್ರೆಸ್ ತಣ್ಣಗಿತ್ತು. ಆದರೆ ಈ ಮೊಯ್ಲಿ ಮಹಾತ್ಮ ಮಂಗಳೂರು ಲೋಕಸಭೆ ಕ್ಷೇತ್ರದಲ್ಲಿ ತನ್ನ ಪುತ್ರ ರತ್ನ ಹರ್ಷನನ್ನು ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡುವ ಇರಾದೆಯಿಂದ ಪುನರ್ ಎಂಟ್ರಿ ಹೊಡೆಯುತ್ತಿದ್ದಂತೆಯೇ ಜಿಲ್ಲಾ ಕಾಂಗ್ರೆಸ್‌ನಲ್ಲಿ ಕದನ ಕುತೂಹಲ ಕೆರಳಿದೆ. ಮೊಯ್ಲಿ ನಿರ್ಗಮನದ ಬಳಿಕ ಸ್ಥಳೀಯ ಕಾಂಗ್ರೆಸ್‌ನ ಅನಭಿಷಕ್ತ ದೊರೆಯಂತಾಗಿದ್ದ ಜನಾರ್ದನ ಪೂಜಾರಿ ವೈರಿಯ ಕೆಣಕುವಿಕೆಗೆ ಕೆಂಡಾಮಂಡಲವಾಗಿ ಯುದ್ಧೋನ್ಮಾದಗೊಂಡಿದ್ದಾರೆ. ಮೊಯ್ಲಿಯಿಂದಾಗಿ ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲಿ ಮತ್ತದೇ ಹಳೆಯ ಬೀದಿ ಕಾಳಗ ಶುರುವಾದಂತಾಗಿದೆ.

ಮಂಗಳೂರು ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಸತತ ಐದು ಸಲ ಸೋತಿದೆ. ಬರೋಬ್ಬರಿ ಇಪ್ಪತ್ತೈದು ವರ್ಷದಿಂದ ಈ ಕ್ಷೇತ್ರ ಬಿಜೆಪಿ ಬೆಂಕಿಯ ವಶದಲ್ಲಿದೆ ಅಂದರೆ, ಅದು ಕಾಂಗ್ರೆಸ್‌ನ ಒಳಜಗಳ ವೀರರ ಕೊಡುಗೆಯೇ ಹೊರತು ಸಂಘ ಪರಿವಾರದ 'ಡಾನ್' ಕಲ್ಲಡ್ಕ ಪ್ರಭಾಕರ ಭಟ್ಟನ ಮತಾಂಧ ಬಳಗದ ಪರಾಕ್ರಮವೇನೂ ಅಲ್ಲ! ಬಿಜೆಪಿ ಅದೆಷ್ಟೇ ಕೋಮು ಕಿತಾಪತಿ ನಡೆಸಿದರೂ ಅದಕ್ಕೆ ಅದರದೇ 'ಸಿದ್ಧಾಂತ'ದಿಂದ ಗೆಲ್ಲುವ ಶಕ್ತಿ ದಕ್ಷಿಣ ಕನ್ನಡದಲ್ಲಿ ಇಲ್ಲ. ಕಾಂಗ್ರೆಸ್‌ನ ಎದುರಾಳಿಗಳಾದ ಜನಾರ್ದನ ಪೂಜಾರಿ ಮತ್ತು ವೀರಪ್ಪ ಮೊಯ್ಲಿ ಪಡೆಯ ಮನೆಮುರುಕು ಕಿತ್ತಾಟವೇ ಭಂಡ ಬಿಜೆಪಿಗಳ ಬಲದಂತಾಗಿದೆ!! ಆದರೆ ಕಾಂಗ್ರೆಸ್ ಹೈಕಮಾಂಡ್ ಮಾತ್ರ ಬುದ್ಧಿ ಕಲಿತಿಲ್ಲ, ಪೂಜಾರಿ-ಮೊಯ್ಲಿಗಳೆಂಬ ಕೊಬ್ಬಿದ ಗೂಳಿಗಳಿಗೆ ಮೂಗುದಾರ ಹಾಕಲು ಸಾಧ್ಯವಾಗಿಲ್ಲ...

ಈ ಬಾರಿ ಕಾಂಗ್ರೆಸ್‌ಗೆ ಮಂಗಳೂರು ಪಾರ್ಲಿಮೆಂಟ್ ಕ್ಷೇತ್ರದಲ್ಲಿ ಗೆಲ್ಲುವ ಅವಕಾಶ ನಿಚ್ಚಳವಾಗಿತ್ತು, ಕಾಂಗ್ರೆಸ್‌ನಲ್ಲಿ ಅಪರೂಪದ ಒಗ್ಗಟ್ಟು ಮೂಡಿತ್ತು; ಕಲ್ಲಡ್ಕ ಭಟ್ಟನ ಭಂಡಾಟವೇ ಬಿಜೆಪಿಗೆ ಮುಳುವಾಗಿತ್ತು, ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಪೂಜಾರಿ ಜಿಲ್ಲೆಯಲ್ಲಿ ಕಾಂಗ್ರೆಸ್ ಮುನ್ನಡೆಸಿದ ರೀತಿ-ನೀತಿಗೆ ಎಂಟರಲ್ಲಿ ಏಳು ಕಡೆ ಬಿಜೆಪಿ ಬೆನ್ನ ಮುರಿದುಕೊಂಡು ಬಿದ್ದಿತ್ತು, ಈ ಸಪ್ತ ಕಾಂಗ್ರೆಸ್ ಶಾಸಕರೆಲ್ಲ ಒಂದಾಗಿ ದುಡಿದರೆ ನಾಲ್ಕು ಸೋಲಿನ ನಂತರ ಪೂಜಾರಿಗೆ ಪಾರ್ಲಿಮೆಂಟ್‌ಗೆ ಹೋಗುವ ಯೋಗ ಖುಲಾಯಿಸಬಹುದೆಂದು ರಾಜಕೀಯ ಪಡಸಾಲೆಯಲ್ಲಿ ಲೆಕ್ಕಾಚಾರ ಹಾಕಲಾಗಿತ್ತು, ಪೂಜಾರಿಗೆ ಕಾಂಗ್ರೆಸ್‌ನಲ್ಲಿ ಟಿಕೆಟ್‌ಗೆ ಪೈಪೋಟಿಯೂ ಇರಲಿಲ್ಲ. ಕೆಪಿಸಿಸಿ ವೀಕ್ಷಕ ತಂಡ, ಸ್ಥಳೀಯ ಘಟಕಗಳು ಮತ್ತು ಕೆಪಿಸಿಸಿ ಚುನಾವಣಾ ಕಮಿಟಿಯೂ ಪೂಜಾರಿ ಹೆಸರನ್ನು ಮಾತ್ರ ಎಐಸಿಸಿಗೆ ಶಿಫಾರಸ್ಸು ಮಾಡಿತ್ತು, ಮಂಗಳೂರು ಕ್ಷೇತ್ರಕ್ಕೆ ಪೂಜಾರಿ ಕಾಂಗ್ರೆಸ್‌ನ ಒಕ್ಕೊರಲ ಆಯ್ಕೆ ಆಗಿತ್ತು.

ಆದರೆ ರೇಸ್‌ನಲ್ಲಿರುವ ಕುದುರೆಗಳ ಪಟ್ಟಿ ಬೆಂಗಳೂರಿನಿಂದ ದಿಲ್ಲಿ ತಲುಪುವಷ್ಟರಲ್ಲಿ ಮಾಯಾ ಜಾದೂ ಆಗಿತ್ತು! ಕಾಂಗ್ರೆಸ್ ಹೈಕಮಾಂಡ್ ಎದುರಿಗಿದ್ದ ಲಿಸ್ಟ್‌ನಲ್ಲಿ ಕೇಂದ್ರ ಇಂಧನ ಮಂತ್ರಿ ಡಾ. ಮೊಯ್ಲಿ ಮಹಾತ್ಮರ ಅನಾಮಧೇಯ ಮಗ ಮಹಾರಾಯ ಹರ್ಷನ ಹೆಸರು ಪ್ರತ್ಯಕ್ಷವಾಗಿತ್ತು!! ಮೊಯ್ಲಿಜೀ ತನ್ನ ಕುಲೋದ್ಧಾರಕ ಹರ್ಷ ದಕ್ಷಿಣ ಕನ್ನಡದಲ್ಲಿ ಪ್ರಬಲ ಅಭ್ಯರ್ಥಿಯಾಗಲಿದ್ದಾನೆಂದು ಹೈಕಮಾಂಡ್ ಮಾಂಡಲೀಕರ ಕಿವಿಯೂದಿದ್ದರು. ಅಷ್ಟೇ ಅಲ್ಲ; ಪೂಜಾರಿ ಎದುರಾಳಿಗಳ್ಯಾರೂ ಮುಂದೆ ಬರದಂತೆ ನಾನಾನಮೂನೆಯ ಭಯ ಮೂಡಿಸಿ ತನ್ನದೊಬ್ಬನದೇ ಹೆಸರು ಸ್ಥಳೀಯ ಘಟಕಗಳಿಂದ ಮೇಲಕ್ಕೆ ಹೋಗುವಂತೆ ಓಕಮತ್ತು ಮಾಡಿದ್ದಾರೆಂದೂ ಚಾಡಿ ಹೇಳಿದ್ದರು.

ಹಿರಿಯಜ್ಜ ಪೂಜಾರಿ ಸಾಹೇಬರು ಹಾಗೆ ಮಾಡಿದ್ದು ಭಾಗಶಃ ಸತ್ಯವೂ ಹೌದು. ಟಿಕೆಟ್ ಆಕಾಂಕ್ಷಿಗಳು ಪೈಪೋಟಿಗೆ ಇಳಿಯದಂತೆ 'ಅಡೆತಡೆ' ಒಡ್ಡಿದ್ದು ನಿಜ. ಜೂನಿಯರ್‌ಗಳಿಗೆ ಪೂಜಾರಿಯ ಭಯವೇ ಅಂಥದ್ದು. ಒಂಥರಾ ಅವ್ಯಕ್ತ ಆತಂಕ ಪೂಜಾರಿ ಎದುರ್ಹಾಕಿಕೊಳ್ಳೋದಕ್ಕೆ. ಹಾಗಂತ ಮೊಯ್ಲಿ ಮಗನ ಹೆಸರಿರಲಿ ಆತನ ನೆರಳೂ ಅಭ್ಯರ್ಥಿ ಆಕಾಂಕ್ಷಿಗಳ ಪಟ್ಟಿಯಲ್ಲಿರಲಿಲ್ಲ, ದಕ್ಷಿಣ ಕನ್ನಡ ಕಾಂಗ್ರೆಸ್ ವಲಯದಲ್ಲಷ್ಟೇ ಅಲ್ಲ, ಬೆಂಗಳೂರು- ದಿಲ್ಲಿಯ ಕಾಂಗ್ರೆಸ್ ದರ್ಬಾರಿನಲ್ಲೂ ಮೊಯ್ಲಿಗೊಬ್ಬ 'ಇಂಥ' ಮಗನಿದ್ದಾನೆಂದೇ ಗೊತ್ತಿರಲಿಲ್ಲ, ಸಾಮಾಜಿಕ-ಸಾಂಸ್ಕೃತಿಕ-ರಾಜಕೀಯವಾಗಿ ಎಲ್ಲೂ ಗುರುತಿಸಿಕೊಂಡವನೂ ಅಲ್ಲ. 'ಮೋಕ್ಷಯುಗ್' ಎಂಬ ಸಂಸ್ಥೆ ಕಟ್ಟಿಕೊಂಡು ಅಪ್ಪನ ಅಧಿಕಾರ ಬಲದಿಂದ ಮೊಯ್ಲಿ ಮಗನೊಬ್ಬ ಏನೇನೋ ಮಾಡಿದ್ದಾನೆಂದು ಗುಲ್ಲೆದ್ದಿತ್ತು, ಅವನೇ ಈ ಹರ್ಷ ಮೊಯ್ಲಿ; ಎಂಪಿ ಕ್ಯಾಂಡಿಡೇಟಾಗುವ ಯಾವ ಅರ್ಹತೆ-ಯೋಗ್ಯತೆ ಇದ್ದವನಲ್ಲ.

ಮೊಯ್ಲಿ ಮಾತ್ರ ಈ ಪಾರ್ಲಿಮೆಂಟ್ ಚುನಾವಣೆಯ ಶುಭ ಸಂದರ್ಭದಲ್ಲಿ ಮಗನನ್ನು ರಾಜಕೀಯ ಅಂಕಣಕ್ಕೆ ತರಬೇಕೆಂದು ತಂತ್ರ ಹೆಣೆಯುತ್ತಲೇ ಇದ್ದರು. ತನ್ನ ಪ್ರಭಾವ ಬಳಸಿ ದಿಲ್ಲಿಗೆ ತಲುಪಿದ ಕಾಂಗ್ರೆಸ್ ಕ್ಯಾಂಡಿಡೇಟ್‌ಗಳ ಪಟ್ಟಿಯಲ್ಲಿ ಮಗನ ಹೆಸರೂ ಸೇರಿಸಿದ್ದರು. ಮಗನನ್ನು ದಕ್ಷಿಣ ಕನ್ನಡಕ್ಕೆ ರೌಂಡ್ ಹಾಕಿಸತೊಡಗಿದ್ದರು. ಆದರೆ ಇದ್ಯಾವುದೂ ವರ್ಕ್‌ಔಟ್ ಆಗುವ ಭರವಸೆ ಆತನಲ್ಲಿ ಮೂಡಿರಲಿಲ್ಲ, ಈಗ ಮಗನ ಹೆಸರು ತೇಲಿಬಿಟ್ಟರೆ ಮುಂದೆಂದಾದರೂ ಚೌಕಾಸಿಗೆ ಅವಕಾಶ ಆಗಬಹುದೆಂಬ ದೂ(ದು)ರಾಲೋಚನೆ ಮೊಯ್ಲಿಜೀ ಮದುಳಲ್ಲಿತ್ತು, ಯಾವಾಗ ರಾಹುಲ್ ಗಾಂಧಿ ಸ್ಥಳೀಯ ಮತದಾನ (ಅಮೆರಿಕ ಮಾದರಿ) ಮೂಲಕ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಗೆ ಮುಂದಾದರೋ, ಆಗ ಮೊಯ್ಲಿಯ ಪ್ಲಾನ್‌ಗೆ ಅನಿರೀಕ್ಷಿತ ಅನುಕೂಲ ಒದಗಿದಂತಾಯ್ತು.

ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ತೀವ್ರ ಪೈಪೋಟಿಯಿರುವ ಇಡೀ ದೇಶದ ಬರೀ ಹದಿನೈದು ಕ್ಷೇತ್ರಗಳಲ್ಲಷ್ಟೇ ಪ್ರಾಯೋಗಿಕವಾಗಿ ಈ 'ಆಮ್ ಆದ್ಮಿ' ಪ್ರಯೋಗ ನಡೆಸಲು ಯೋಚಿಸಿದ್ದರು. ಆಕಾಂಕ್ಷಿಗಳು ಹೆಚ್ಚಿರುವ ಕಡೆ ಅಭ್ಯರ್ಥಿ ಆಯ್ಕೆ ಕಗ್ಗಂಟಾದಾಗ ಈ 'ಚುನಾವಣೆ' ತಾರಕ ತಂತ್ರ ಎಂಬ ಭಾವನೆ ರಾಹುಲ್ ಗಾಂಧಿಯದು. ವಿಚಿತ್ರವೆಂದರೆ, ಯಾವ ಕಿರಿಕಿರಿ-ಮೇಲಾಟವೇ ಇಲ್ಲದ ದಕ್ಷಿಣ ಕನ್ನಡವನ್ನು ಹೊಸ ಪ್ರಯೋಗ ಪಟ್ಟಿಗೆ ಸೇರಿಸಲಾಗಿತ್ತು, ಇದು ದಕ್ಷಿಣ ಕನ್ನಡ ಕಾಂಗ್ರೆಸಿಗರನ್ನಷ್ಟೇ ಅಲ್ಲ, ಖುದ್ದು ಸಿಎಂ ಸಿದ್ದು ಮತ್ತು ಕೆಪಿಸಿಸಿ ಅಧ್ಯಕ್ಷ ಪರಮೇಶಿಯನ್ನು ತಬ್ಬಿಬ್ಬುಗೊಳಿಸಿತ್ತು! ಮೊಯ್ಲಿ ಮಹಿಮೆ ದಿಲ್ಲಿಯಲ್ಲಿ ಕೆಲಸ ಮಾಡಿದ್ದು ಎಲ್ಲರಿಗೂ ಆ ಕ್ಷಣವೇ ಖಾತ್ರಿಯಾಗಿ ಹೋಗಿತ್ತು!

ಮೊಯ್ಲಿ ಇಷ್ಟೊಂದು ಹಠದಿಂದ ಅಡ್ಡ ಕಸಬು ಮಾಡಲು ಕಾರಣವೂ ಇದೆ. ಈ ಬಾರಿ ಪರಮವೈರಿ ಪೂಜಾರಿಗೆ ಎಂಪಿಯಾಗುವ ಛಾನ್ಸ್ ಹೆಚ್ಚಿದೆ ಎಂಬುದು ಮೊಯ್ಲಿಗೆ ಮನವರಿಕೆಯಾಗಿದೆ. ಕಳೆದ ಬಾರಿ ಪೂಜಾರಿಯನ್ನು ಸೋಲಿಸಲು ತಾನು ಮಾಡಿದ ಒಳಸಂಚು ಈ ಬಾರಿ ಫಲ ಕೊಡುವ ನಂಬಿಕೆ ಮೊಯ್ಲಿಗಿಲ್ಲ. ಏಕೆಂದರೆ ಸುಳ್ಯ ಒಂದು ಬಿಟ್ಟರೆ ಉಳಿದೆಲ್ಲ ಅಸೆಂಬ್ಲಿ ಕ್ಷೇತ್ರದಲ್ಲಿ ಕಾಂಗ್ರೆಸ್ ಶಾಸಕರಿದ್ದಾರೆ. ಇವರಲ್ಲಿ ಮೂಡುಬಿದಿರೆಯ ಮೂಢ ಮಂತ್ರಿ ಅಭಯಚಂದ್ರ ಜೈನ್ ಒಬ್ಬನ ಬಿಟ್ಟರೆ ಉಳಿದೆಲ್ಲರೂ ಪೂಜಾರಿ ನಿಷ್ಠರು. ಹಾಗಾಗಿ ಪೂಜಾರಿಗೆ ಟಿಕೆಟ್ಟೇ ತಪ್ಪಿಸಬೇಕೆಂಬುದು ಮೊಯ್ಲಿ ಯೋಚನೆ. ಮಗ ಗೆಲ್ಲದಿದ್ದರೂ ಬೇಜಾರಿಲ್ಲ ಎದುರಾಳಿ ಪೂಜಾರಿ ಮಾತ್ರ ಎಂಪಿಯಾಗಲೇ ಬಾರದು. ಪೂಜಾರಿ ಗೆದ್ದರೆ ದಿಲ್ಲಿಯಲ್ಲಿ ಕುಳಿತು ತಾನು ಹೇಗೆ ಆತನ ಮುರಿಯಲು ಹೆಣಗಾಡಿದೆನೋ ಅದೇ ಆಟ ಆತನೂ ದಿಲ್ಲಿಯಲ್ಲಿ ಎಂಪಿಯಾಗಿ ನಡೆಸುತ್ತಾನೆಂಬ ಭಯ ಮೊಯ್ಲಿಯದು.

ಅದೇನೇ ಇರಲಿ, ಮೊಯ್ಲಿ ಹೈಕಮಾಂಡ್ ಅನ್ನು ಯಾಮಾರಿಸಿ ದಾರಿ ತಪ್ಪಿಸಿದ್ದಾರೆ. ಸುಖಾಸುಮ್ಮನೆ ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲಿ ಒಡಕು ಮೂಡಿಸಿದ್ದಾರೆ. ಆಂತರಿಕ ಚುನಾವಣೆಯಿಂದ ದಕ್ಷಿಣ ಕನ್ನಡದ ಕ್ಯಾಂಡಿಡೇಟ್ ಆಯ್ಕೆಯಾಗುವಂತೆ ಮಾಡಿದ್ದಾರೆ. ಬಲಾಢ್ಯ ಪೂಜಾರಿ ಎದುರು ದುರ್ಬಲ ಪುತ್ರನನ್ನು ಸೆಣಸಾಟಕ್ಕೆ ಇಳಿಸಿ ಪ್ರಮೋಟ್ ಮಾಡಲು ಪ್ರಯತ್ನಿಸುತ್ತಿದ್ದಾರೆ. ಅಪ್ಪನ ಆಣತಿಯಂತೆ ಅಬ್ಬೇಪಾರಿ ಹರ್ಷ ಕ್ಷೇತ್ರದಾದ್ಯಂತ ಓಡಾಡಿ ಪಡೆ ಕಟ್ಟಲು ಕಷ್ಟಪಡುತ್ತಾನೆ. ಆತನಿಗೆ ಹೋದ-ಹೋದಲ್ಲೆಲ್ಲ "ನೀನ್ಯಾರು... ನಿನ್ನ ಪರಿಚಯವೇ ಇಲ್ಲ... ಓ... ಮೊಯ್ಲಿ ಮಗನಾ... ನಿನಗೆಂಥಕ್ಕೆ ಮಾರಾಯಾ ಎಂಪಿಗಿರಿ ಎಂದು..." ಮೂದಲಿಸುತ್ತಿದ್ದಾರೆ. ಕಂಡಕಂಡಲ್ಲಿ ಎದುರಾಗುತ್ತಿರುವ ಈ ಅಪಶಕುನ ಹರ್ಷನನ್ನು ಹೈರಾಣಾಗಿಸಿಬಿಟ್ಟಿದೆ.

ಆದರೆ ಮೊಯ್ಲಿ ಮಗನನ್ನು ಎಂಪಿ ಕ್ಯಾಂಡಿಡೇಟೆಂದು ಬಿಂಬಿಸಲು ತರತರದ ಸ್ಕೆಚ್ ಹಾಕುತ್ತಲೇ ಇದ್ದಾರೆ. ಅಪರಿಚಿತ ಮಗನಿಗೆ ಪ್ರಚಾರ ಕೊಡಲು ಮೊಯ್ಲಿ ಟಿವಿ ಚಾನೆಲ್-ಪತ್ರಿಕೆಗಳ ಮೊರೆ ಹೋಗಿದ್ದಾರೆ. ಕಳೆದ ಬರೀ ಹದಿನೈದೇ ದಿನದಲ್ಲಿ ಮಗ ಸುದ್ದಿ ಶೂರನಾಗಿ ಮಾಡಲು ಮೊಯ್ಲಿ 10 ಕೋಟಿ ವ್ಯಯಿಸಿದ್ದಾರೆಂಬ ಸುದ್ದಿ ಹರಡಿದೆ. ಇಂಧನ ಮಂತ್ರಿಯಾದ ನಂತರ ಸುಮಾರು 5 ಸಾವಿರ ಕೋಟಿಗೆ ಮೊಯ್ಲಿ ತೂಗುತ್ತಾರೆಂದು ಕಾಂಗ್ರೆಸ್ ಡೇರೆಯೊಳಗೆ ಗುಸುಗುಸು ಎದ್ದಿದೆ. ಟಿಕೆಟ್ ಅಖಾಡದಲ್ಲೇ ಪೂಜಾರಿಯ ಸದ್ದಡಗಿಸಲು ಮೊಯ್ಲಿ ಹಣ ನೀರಂತೆ ಹರಿಸುತ್ತಿದ್ದಾರೆ. ಹಣ ಹೊಂಚುವ ಕಲೆ ಗೊತ್ತಿರುವ ಪೂಜಾರಿಯೂ ವೈರಿ ಪಡೆಗೆ ಧನಾಧಾರಿತ ಎದಿರೇಟೇ ಕೊಡಲು ಅಣಿಯಾಗಿದ್ದಾರೆ. ಒಟ್ಟಿನಲ್ಲಿ ರಾಹುಲ್‌ರ 'ಆಂತರಿಕ ಚುನಾವಣೆ' ಅಡ್ಡದಾರಿ ಹಿಡಿದಿದೆ; ಒಣ ಬಡಿದಾಟಕ್ಕೆ ಹೊಸ ಖದರು ಕೊಟ್ಟಿದೆ.


ಜನಾರ್ದನ ಪೂಜಾರಿ ಮತ್ತು ಹರ್ಷ ಮೊಯ್ಲಿ ಜತೆಗೆ ಇನ್ನಿಬ್ಬರು ಆಂತರಿಕ ಅಖಾಡಕ್ಕೆ ಧುಮುಕಲು ಸಜ್ಜಾಗಿದ್ದಾರೆ. ಒಬ್ಬ ಪ್ರಗತಿಪರ ಚಿಂತನೆಗಳ ಹೋರಾಟಗಾರ ಪಿ.ವಿ. ಮೋಹನ್ ಎಂಬ ಎಐಸಿಸಿ ಸದಸ್ಯ ಮತ್ತೊಬ್ಬ ಪೂಜಾರಿಯ ಮಾಜಿ ಶಿಷ್ಯ-ಕಳ್ಳ ಟಿಂಬರ್ ಉದ್ಯಮಿ ಕಣಚ್ಚೂರು ಮೋನು. ಆದರೆ ಮುಖಾಮುಖಿ ಕಾಳಗ ಇರುವುದು ಪೂಜಾರಿ V/s ಮೊಯ್ಲಿ ನಡುವೆ ಮಾತ್ರ. ಹರ್ಷ ಹೆಸರಿಗಷ್ಟೇ. ಆತನ ಅಪ್ಪನೇ ಅದೃಶ್ಯ ಪೈಲ್ವಾನ್. ಕೊನೇ ಕ್ಷಣದಲ್ಲಿ ಅಭ್ಯರ್ಥಿಯಾಗಿ ಅವತರಿಸಿರುವ ಹರ್ಷ ಮೊಯ್ಲಿ ಅರ್ಥಾತ್ ಅವನಪ್ಪ ವೀರಪ್ಪ ಮೊಯ್ಲಿಗೆ ದಕ್ಷಿಣ ಕನ್ನಡದಲ್ಲಿ ನೆಲೆ-ಬೆಲೆಯೇ ಇಲ್ಲ, ಆತ ಒಮ್ಮೆ ಪೂಜಾರಿಗೆ ಟಾಂಗ್ ಕೊಟ್ಟು ಇಲ್ಲಿಂದ ಲೋಕಸಭೆಗೆ ಸ್ಪರ್ಧಿಸಿ ಮಣ್ಣು ಮುಕ್ಕಿದ್ದರು. ಕೆಲವು ಅತಿರೇಕದ-ಯಕ್ಷಗಾನ ಶೈಲಿಯ ಮಾತುಗಾರಿಕೆ ಬಿಟ್ಟರೆ ಪೂಜಾರಿ ಹಳ್ಳಿ-ಹಳ್ಳಿಗಳಲ್ಲಿ ಬೇರು ಇರುವ ನಾಯಕ. ಪ್ರಾಮಾಣಿಕತೆ-ನಿಷ್ಠೆ-ಕೆಲಸಗಾರಿಕೆಯ ಜನಪರ ಪೂಜಾರಿ ಎಲೆಕ್ಟೋರಲ್ ಪಾಲಿಟಿಕ್ಸ್‌ನಲ್ಲಿ ಮಾತ್ರ ವೀಕ್. ಆದರೆ ಮೊಯ್ಲಿಗಿಂತ ಬೆಟರ್ ಮತ್ತು ಜನಪ್ರಿಯ ಎಂಬುದಕ್ಕೆ ಯಾರ ಆಕ್ಷೇಪವೂ ಇಲ್ಲ.

ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲಿ ಪೂಜಾರಿ ಪರ ಗಟ್ಟಿಯಾದ ಒಲವಿದೆ. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ಆತನ ಸ್ಟ್ರೆಟಜಿಯಿಂದಾಗಿಯೇ ಕಾಂಗ್ರೆಸ್ ಸಂಘ ಪರಿವಾರದ ಸೈತಾನರ ಅಡ್ಡೆಯಂತಾಗಿದ್ದ ದಕ್ಷಿಣ ಕನ್ನಡದಲ್ಲಿ ಭರ್ಜರಿ ಜಯ ಸಾಧಿಸಿದೆ. ಹೀಗಾಗಿ ಶಾಸಕರು, ಕಾರ್ಪೊರೇಟರ್‌ಗಳು, ಜಿಲ್ಲಾ ಪಂಚಾಯ್ತಿ ಸದಸ್ಯರು ಮತ್ತು ಇತರ ಸ್ಥಳೀಯ ಸಂಸ್ಥೆಗಳ ಮೆಂಬರ್‌ಗಳಲ್ಲಿ ಬಹುತೇಕರು ಪೂಜಾರಿ ಪರವೇ ಇವತ್ತಿಗೂ ಇದ್ದಾರೆ. ಮೊಯ್ಲಿ ಬೆಂಬಲಿಗರೆಂದರೆ ಒಂದಿಬ್ಬರು ಆತನ ಜಾತಿ ಬಂಧುಗಳಾದ ಕಾರ್ಪೊರೇಟರ್ಸ್ ಮತ್ತು ಮಂತ್ರಿ ಅಭಯ, ಕೆಪಿಸಿಸಿಯ ಕೆಲಸಕ್ಕೆ ಬಾರದ ಸದಸ್ಯ ಐವಾನ್ ಡಿಸೋಜಾ ಎಂಬ ನಾಲ್ಕೈದು ಮಂದಿ ಮಾತ್ರ.

ದಕ್ಷಿಣ ಕನ್ನಡ ಕಾಂಗ್ರೆಸ್‌ನಲ್ಲೀಗ ರಣೋತ್ಸಾಹ; ಮೊಯ್ಲಿ-ಪೂಜಾರಿ ಪಡೆಯಲ್ಲಿ ಜಿದ್ದಾಜಿದ್ದಿ. ಕುದುರೆ ವ್ಯಾಪಾರದ ಕರಾಮತ್ತು, ಹಣದ ಹೊಳೆಯು ಹುಚ್ಚೆದ್ದು ಹರಿವ ಸೂಚನೆ. ಏನೇ ಆದರೂ ಆಂತರಿಕ ಯುದ್ಧದಲ್ಲಿ ಜನಾರ್ದನ ಪೂಜಾರಿ ಎಂಬ ದೊಡ್ಡ ಬಾಯಿ ಭೂಪನೇ ಗೆಲ್ಲುವುದು ಗ್ಯಾರಂಟಿ. ಆದರೆ ಎಂಪಿ ಆಗುವುದು? ಹೈಕಮಾಂಡ್ ಮೊಯ್ಲಿ ಬಾಲ ಕಟ್ ಮಾಡಿದರಷ್ಟೇ ಗೆಲುವು ಸಾಧ್ಯ!

● ಶುದ್ಧೋಧನ

ಹರಿಯತ್ತ ಚಿತ್ತ!






ದಕ್ಷಿಣ ಕನ್ನಡ ಕಾಂಗ್ರೆಸ್‌ನ ಎಂಪಿ ಅಭ್ಯರ್ಥಿ ಆಯ್ಕೆ ಚಿತ್ರವಿಚಿತ್ರ ಆಯಾಮ ಪಡೆಯುತ್ತಿದೆ. ಹಳೆ ಹುಲಿ ಜನಾರ್ದನ ಪೂಜಾರಿ ಹುರಿಯಾಳಾದರೆ ಮೊಯ್ಲಿ ಸೋಲಿಸಲು ಶ್ರಮಿಸೋದು. ಹರ್ಷ ಮೊಯ್ಲಿ ಉಮೇದುದಾರನಾದರೆ ಆತನಿಗೆ ಮಣ್ಣು ಮುಕ್ಕಿಸಲು ಪೂಜಾರಿ ಪಟಾಲಮ್ ಪ್ರಯತ್ನಿಸೋದು ನಿಸ್ಸಂಶಯ. ಹೀಗಾಗಿ ಕಲ್ಲಡ್ಕ ಭಟ್ಟನ ಗುಲಾಮ ನಳಿನ್‌ಕುಮಾರ್ ಕಟೀಲ್ ಮತ್ತೆ ಸಂಸದನಾಗಿ ಜಿಲ್ಲೆಗೆ ಕಂಟಕನಾಗುತ್ತಾನೆಂಬ ಭಯ ನಿಷ್ಠಾವಂತ ಕಾಂಗ್ರೆಸಿಗರು ಮತ್ತು ಸಂಘಪರಿವಾರದ ಬಗ್ಗೆ ಆತಂಕವಿರುವ ಪ್ರಗತಿಪರರಿಗೆ.

ಕಾಂಗ್ರೆಸ್‌ನ ಒಣ ಬಡಿದಾಟ ಬಂದ್ ಮಾಡಿಸಿ ಬಿಜೆಪಿ ಭೂಗತ ಮಾಡಬೇಕೆಂದಿದ್ದರೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ಬಿ.ಕೆ. ಹರಿಪ್ರಸಾದ್‌ರನ್ನು ದಕ್ಷಿಣ ಕನ್ನಡ ಕಾಂಗ್ರೆಸ್ ಕ್ಯಾಂಡಿಡೇಟ್ ಮಾಡಬೇಕೆಂಬ ಕೂಗು ಸಣ್ಣಗೆ ಎದ್ದಿದೆ. ಸ್ಥಳೀಯ ಬಹುಸಂಖ್ಯಾತ ಬಿಲ್ಲವ ಸಮುದಾಯದ ಹರಿ ಬಗ್ಗೆ ಕ್ಷೇತ್ರದಲ್ಲಿ ಒಳ್ಳೆಯ ಹೆಸರಿದೆ. ಪೂಜಾರಿ ವಿರೋಧಿಗಳಾದ ಮಂತ್ರಿ ಸೊರಕೆ, ಮೊಯ್ಲಿ ಮುಂತಾದವರಿಗೆ ಹರಿ ವಿರುದ್ಧ ಧ್ವನಿ ಎತ್ತುವ ತಾಕತ್ತಿಲ್ಲ. ಹಾಗೆಯೇ ಅಲ್ಪಸಂಖ್ಯಾತರು ಮತ್ತು ಬಿಲ್ಲವರು ಹರಿಗೆ ಮತ ಹಾಕುವ ಸಾಧ್ಯತೆಯಿದೆ. ಇದು ಗೆಲುವಿಗೆ ಸಾಕು. ಜಾತಿ ಮೀರಿ ಒಣಧರ್ಮದ ಆಧಾರದಲ್ಲಿ ಬಿಜೆಪಿ ಪರ ಮೈಂಡ್ ವಾಶ್ ಆಗಿರುವ ಬಿಲ್ಲವ ಯುವಕರನ್ನು ಸೆಳೆಯಲು ಹರಿ ಅಸ್ತ್ರವೇ ತಾರಕ ಎಂಬ ಅಭಿಪ್ರಾಯವೂ ಮೂಡಿದೆ. ಸಂಘ ಪರಿವಾರದ ಕಿತಾಪತಿಯಿಂದ ದಾರಿ ತಪ್ಪಿರುವ ಬಿಲ್ಲವರಲ್ಲಿನ ಹಿಂದೂತ್ವ ಅಳಿಸಿ ಶೂದ್ರತ್ವ ಜಾಗ್ರತಗೊಳಿಸಲು ಪೂಜಾರಿಗಿಂತ ಹರಿಯೇ ಸಮರ್ಥ ಎಂದು ದಕ್ಷಿಣ ಕನ್ನಡದಲ್ಲಿ ಚರ್ಚೆಯಾಗುತ್ತಿದೆ.

ಅತ್ತ ಉತ್ತರ ಕನ್ನಡದಲ್ಲೂ ಹರಿಯೇ ಕಾಂಗ್ರೆಸ್‌ಗೆ ಗತಿ ಎಂಬಂತಾಗಿದೆ. ಮಾರ್ಗ್ರಿ V/s ದೇಶಪಾಂಡೆ ಗುಂಪುಗಾರಿಕೆಯಲ್ಲಿ ಹೈರಾಣಾಗಿರುವ ಉತ್ತರ ಕನ್ನಡ ಕಾಂಗ್ರೆಸ್ ಗೆಲ್ಲಬೇಕೆಂದಿದ್ದರೆ ಹರಿ ಹುರಿಯಾಳಾದರೆ ಮಾತ್ರ ಸಾಧ್ಯ ಎನ್ನುವಂಥ ಸನ್ನಿವೇಶ ನಿರ್ಮಾಣವಾಗಿದೆ. ಹಿರಿಯರಾದ ಪೂಜಾರಿಗೆ ಟಾಂಗ್ ಕೊಡುವ ಮನಸ್ಸು ಸಜ್ಜನ ಹರಿಗಿಲ್ಲ. ಅವರ ಚಿತ್ತವೇನಿದ್ದರೂ ಉತ್ತರ ಕನ್ನಡದತ್ತ. ಅವರಿಗೆ ಬೆಂಗಳೂರು ಉತ್ತರಕ್ಕಿಂತ ಉತ್ತರ ಕನ್ನಡವೇ ಸೇಫು. ಹೈಕಮಾಂಡ್ ಮುತುವರ್ಜಿ ವಹಿಸಿ ಮೊಯ್ಲಿಗೆ ಕಡಿವಾಣ ಹಾಕಿದರೆ ದಕ್ಷಿಣ ಕನ್ನಡದಲ್ಲಿ ಪೂಜಾರಿಯೂ ಗೆಲ್ಲಬಲ್ಲರು.


ಕಳಪೆ ಕಾಂಕ್ರೀಟ್ ರಸ್ತೆ


ಅರ್ಧಕ್ಕೆ ನಿಂತ ಕಾಮಗಾರಿ

ಮಂಡ್ಯ ನಗರಸಭೆಯಲ್ಲಿ 'ನಗರೋತ್ಥಾನ' ಹಗರಣ


ಮಂಡ್ಯ ನಗರಸಭೆಯಲ್ಲಿ ನಡೆಯುತ್ತಿರೋದು ಅಕ್ಷರಶಃ ...ಮು ದರೋಡೆ. ಕಳಪೆ ಕಾಮಗಾರಿ, ಬೋಗಸ್ ಬಿಲ್ಲು, ... ಡಾಕ್ಯುಮೆಂಟ್‌ಗಳ ಸರಣಿ ಹೈಡ್ರಾಮಾದಿಂದಾಗಿ ...ರ್ವಜನಿಕರ ಕೋಟಿಕೋಟಿ ಹಣ ಗುತ್ತಿಗೆದಾರರ, ...ಕಾರಿಗಳ ಅಕೌಂಟುಗಳನ್ನು ಬೆಚ್ಚಗೆ ಸೇರುತ್ತಿದೆ. ಕಮಿಷನ್ ...ಚಾರದ ಅಧಿಕಾರಿಗಳು ಕಣ್ಣಮುಂದೆ ಕಳಪೆ ಕಾಮಗಾರಿ ...ಯುತ್ತಿದ್ದರೂ ತಮಗೂ ಅದಕ್ಕೂ ಸಂಬಂಧವೇ ...ವೆಂಬಂತೆ ತೆಪ್ಪಗಾಗಿಬಿಟ್ಟಿದ್ದಾರೆ. ಒಟ್ಟಿನಲ್ಲಿ 'ಹುಚ್ಚನ ...ಮದುವೇಲಿ ಉಂಡೋನೆ ಜಾಣ', 'ಯಾರೋ ದುಡ್ಡು ...ಮ್ಮನ ಜಾತ್ರೆ' ಎಂಬ ಗಾದೆಗಳು ಮಂಡ್ಯ ನಗರಸಭೆಗೆ ...ಕ್ಕಂತೂ ಹೇಳಿಮಾಡಿಸಿದಂತಿವೆ. ನಗರ ...ವೃದ್ಧಿಯಾಗುತ್ತದೆಂಬ ಭ್ರಮೆಯಲ್ಲಿದ್ದ ಮಂಡ್ಯದ ಜನ ...ತ್ರ ಈ ಕಣ್ಣಾಮುಚ್ಚಾಲೆ ಕಂಡು ದಂಗುಬಡಿದಿದ್ದಾರೆ.

...ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ...ಎಸ್‌ಎಂಟಿಡಿಪಿ) ಯೋಜನೆಯಡಿ ರಾಜ್ಯದ 211 ...ಸಭೆ, ಪುರಸಭೆ, ಪಟ್ಟಣ ಪಂಚಾಯತಿ ವ್ಯಾಪ್ತಿಗೆ 1040 ...ಟಿ ರೂ. ವನ್ನು 2012ರಲ್ಲೇ ಬಿಜೆಪಿ ಸರ್ಕಾರ ಬಿಡುಗಡೆ ...ಡಿತ್ತು. ಕೇಂದ್ರ ಹಾಗೂ ರಾಜ್ಯ ಸರ್ಕಾರ ಶೇ.50ರಷ್ಟು ...ವನ್ನು ಈ ಯೋಜನೆಗೆ ನೀಡಿವೆ. ಅದರಂತೆ ಮಂಡ್ಯ ...ಸಭೆಗೆ 30 ಕೋಟಿ ರೂ. ಬಿಡುಗಡೆಯಾಗಿದೆ. ಅದರಲ್ಲಿ ...80ರಷ್ಟು ಅಂದರೆ 24 ಕೋಟಿ ರಸ್ತೆ ಕಾಮಗಾರಿಗೆ ...ೂ ಶೇ.20ರಷ್ಟು ಅಂದರೆ 6 ಕೋಟಿ ಹಣ ...ಚರಂಡಿಗೆ ಮೀಸಲಿಡಲಾಗಿದೆ. ಆದರೆ ಒಳಚರಂಡಿಗೆಂದು ...ಸಲಿಟ್ಟ 6 ಕೋಟಿ ಹಣವನ್ನು ಬೇರೆ ಕಾಮಗಾರಿಗೆ ...ಸಲಾಗಿದ್ದು, ರಸ್ತೆಗೆಂದು ಮೀಸಲಿಟ್ಟ 24 ಕೋಟಿ ...ದಲ್ಲಿ 17 ಪ್ಯಾಕೇಜ್‌ಗಳನ್ನು ಮಾಡಿ ಕಾಮಗಾರಿ ...ಭಿಸುವಂತೆ 22-12-2012 ರಂದೇ ಪೌರಾಡಳಿತ ...ೇಶನಾಲಯ ಅನುಮೋದನೆ ನೀಡಿತ್ತು. ಇದರ ...ವಾಗಿ ಮೊದಲನೇ ಹಂತದ ಕಾಮಗಾರಿಗಳು ನಡೆದು ...ಗಲೇ ಹಡಾಲೆದ್ದು ಹೋಗಿವೆ. ಈಗ 2ನೇ ಹಂತದ ...ಗಾರಿಗಳ ಕಣ್ಣಾಮುಚ್ಚಾಲೆ ಶುರುವಾಗಿವೆ.

...ಬೆಂಗಳೂರಿನ ಗುತ್ತಿಗೆದಾರ ದೊರೆಸ್ವಾಮಿ ಎಂಬಾತನ ... ಸ್ಟಾರ್ ಬಿಲ್ಡರ್ಸ್ ಅಂಡ್ ಡೆವಲಪರ್ಸ್, ನಗರೋತ್ಥಾನ ...ಗಾರಿಯ 24 ಕೋಟಿ ವೆಚ್ಚದ 17 ಪ್ಯಾಕೇಜ್‌ಗಳ ...ಗೆ ಹಿಡಿದಿದೆ. ಈ ದೊರೆಸ್ವಾಮಿ ತನ್ನ ಟೆಂಡರ್‌ನಲ್ಲಿ ...ಲ ಅಂದಾಜು ಪಟ್ಟಿಯ ಎಸ್.ಆರ್. ದರಕ್ಕಿಂತಲೂ ...14ರಷ್ಟು ಹೆಚ್ಚಿಗೆ ರೇಟು ಜಡಿದಿದ್ದರೂ ಸರ್ಕಾರ ...ಗೇ ಗುತ್ತಿಗೆ ಒಪ್ಪಿಸಿರೋದು ಸೋಜಿಗದ ವಿಷಯ. ...ನ್ನೊಂದು ಸಂಗತಿಯೆಂದರೆ ಹೀಗೆ ಗುತ್ತಿಗೆ ಗಿಟ್ಟಿಸಿಕೊಂಡ ...ಮಿ ದೊರೆಸ್ವಾಮಿ ನೇರವಾಗಿ ತಾನೇ ಕಾಮಗಾರಿಗಳ ...ವಾರಿ ವಹಿಸದೆ ಅವುಗಳನ್ನು ಮತ್ತಾರಿಗೋ ...ಗುತ್ತಿಗೆ ನೀಡಿ ದಲ್ಲಾಳಿ ಸಂಪ್ರದಾಯವನ್ನು ...ಹಾಕಿದ್ದಾನೆ. ಇನ್ನು ಉಪಗುತ್ತಿಗೆ ಪಡೆದ ಗುತ್ತಿಗೆದಾರ ...ರೂ ಅಂದಾಜು ಪಟ್ಟಿಯ ಎಸ್ಟಿಮೇಷನ್‌ಗಳನ್ನೆಲ್ಲ ...ಗೆ ತೂರಿ ಬೇಕಾಬಿಟ್ಟಿಯಾಗಿ ಜಲ್ಲಿ, ಮರಳು ಚೆಲ್ಲಾಡಿ ...ಹದ ತುಂಬೆಲ್ಲಾ ಕಾಮಗಾರಿಗಳ ಧೂಳೆಬ್ಬಿಸಿ ಆವರಸದಲ್ಲಿ ... ಪಡೆದು ದುಂಡಗಾಗುವ ಹವಣಿಕೆಯಲ್ಲಿದ್ದಾರೆ.

ಸಂಪೂರ್ಣ ಕಳಪೆ ಕಾಮಗಾರಿ

...ಮಂಡ್ಯ ನಗರಸಭೆ ವ್ಯಾಪ್ತಿಯ ಹಾಲಹಳ್ಳಿ, ಹೌಸಿಂಗ್ ...ಬೋರ್ಡ್, ಕೀಲಾರ ಕಾಲೋನಿ, ಕಲ್ಲಹಳ್ಳಿ, ವಿ.ವಿ.ನಗರ, ...ಚಾಮುಂಡೇಶ್ವರಿ ನಗರ, ಹೊಸಹಳ್ಳಿ ಸೇರಿದಂತೆ ನಗರದ ... ವಾರ್ಡ್‌ಗಳಲ್ಲಿ ಕಾಮಗಾರಿ ಆರಂಭವಾಗಿದೆ. ಟೆಂಡರ್ ...ನಿಯಮದ ಪ್ರಕಾರ ಗುತ್ತಿಗೆ ಪಡೆದವರು ಕಾಮಗಾರಿಗಳನ್ನು ...ಬೇರೊಬ್ಬರಿಗೆ ಉಪಗುತ್ತಿಗೆ ನೀಡುವಂತಿಲ್ಲ. ಆದರೆ ...ಗುತ್ತಿಗೆದಾರ ದೊರೆಸ್ವಾಮಿ ನಿಯಮ ಉಲ್ಲಂಘಿಸಿ ...ಉಪಗುತ್ತಿಗೆ ನೀಡಿದ್ದಾನೆ. ಒಂದೇ ಒಂದು ರಸ್ತೆ


ಬಿ. ಸಿದ್ದರಾಜು ಕರೀಗೌಡ ಕೃಷ್ಣಯ್ಯ ಶಶಿಕುಮಾರ್

ಕಾಮಗಾರಿಯೂ ಅಂದಾಜು ಪಟ್ಟಿಯಲ್ಲಿರುವಂತೆ ನಡೆಯುತ್ತಿಲ್ಲ. ಗುತ್ತಿಗೆ ನಿಯಮದಲ್ಲಿ 1 ಅಡಿ ಮಣ್ಣು ತೆಗೆದು ಹೊಸ ಮಣ್ಣು ಹಾಕಬೇಕು, ಜಿಎಸ್‌ಬಿ 15 ಸಿಎಂ, ವೆಟ್‌ಮಿಕ್ಸ್ 23 ಸಿಎಂ ಹಾಕಬೇಕು, ಟಾರ್ ಹಾಕುವ ಮುಂಚೆ ಗುಂಡಿ ಮುಚ್ಚಬೇಕು ಎಂಬೆಲ್ಲಾ ರೂಲ್ಸುಗಳಿವೆ. ಆದರೆ ಇದ್ಯಾವುದನ್ನೂ ಪಾಲಿಸಲಾಗುತ್ತಿಲ್ಲ. 2 ಇಂಚು 20ಎಂ.ಎಂ. ಜಲ್ಲಿ ಹಾಕಿದ ಮೇಲೆ 1 1/2 ಇಂಚು ದಪ್ಪ ಟಾರ್ ಹಾಕಬೇಕು. ಆದರೆ ಕಡೇಪಕ್ಷ ರಸ್ತೆಗಳಲ್ಲಿರುವ ಗುಂಡಿಗಳನ್ನು ಭದ್ರವಾಗಿ ಬ್ಲಾಕ್ ಮಾಡದೆಯೇ ಮೇಲೆ ಟಾರ್ ಸವರಲಾಗುತ್ತಿದೆ. ಸ್ಪ್ರೈಯರ್ ಟಾರ್‌ಗೆ 1 ಮೀಟರ್‌ಗೆ 15.76 ರೂ ನಿಗದಿ ಮಾಡಿದ್ದರೂ ಸ್ಪ್ರೈಯರ್ ಟಾರ್ ಬಳಕೆ ಸಾಕಷ್ಟು ಕಡಿಮೆ ಇದೆ. ರಸ್ತೆ ಕಾಮಗಾರಿಗಳ ಗುಣಮಟ್ಟ ಹೇಗಿದೆಯೆಂದರೆ ಟಾರ್ ಹಾಕಿ ವಾರ ಕಳೆಯುವ ಮೊದಲೇ ಕೈಯಲ್ಲೇ ಟಾರ್‌ನ್ನು ಕಿತ್ತು ಬಿಸಾಕಬಹುದಾದಷ್ಟು ಸಡಿಲವಾಗಿ ಹೋಗಿದೆ. ಸರಿಯಾದ್ದೊಂದು ಮಳೆ ಸುರಿದರೆ ಕಾಮಗಾರಿಗಳ ಬಂಡವಾಳ ಬಯಲಾಗುವುದು ಖಾತ್ರಿ. ಕೆಲವೆಡೆ ರಸ್ತೆಯ ಮಟ್ಟಕ್ಕಿಂತ ಮ್ಯಾನ್‌ಹೋಲ್ ಮೇಲಿದ್ದು ಅಪಘಾತಗಳು ಕಟ್ಟಿಟ್ಟ ಬುತ್ತಿ.

ಇನ್ನೂ ಸೋಜಿಗವೆಂದರೆ ಇವರು ಕಾಮಗಾರಿಗೆ ಸರಕುಗಳನ್ನು ಬೇರೆಲ್ಲಿಂದಲೋ ತರುತ್ತಿಲ್ಲ. ಒಂದು ರಸ್ತೆಯಲ್ಲಿ ಅಗೆದ ಮಣ್ಣನ್ನೆ ಮತ್ತೊಂದು ರಸ್ತೆಯಲ್ಲಿ ಚೆಲ್ಲಿ ಕಾಮಗಾರಿಯ ಶಾಸ್ತ್ರ ಮಾಡಲಾಗುತ್ತಿದೆ. ಸಿಮೆಂಟ್ ಕಾಂಕ್ರೀಟ್ ರಸ್ತೆಯಂತೂ ಸಂಪೂರ್ಣ ಕಳಪೆ. ಇದಕ್ಕೆ ಕಲ್ಲಹಳ್ಳಿ ವಿ.ವಿ.ನಗರದ ಪಿಇಎಸ್ ಕಾಲೇಜು ಹಿಂಭಾಗದ ಕಾಂಕ್ರೀಟ್ ರಸ್ತೆಯೇ ಸ್ಪಷ್ಟ ಸಾಕ್ಷಿ. 400 ಎಂಎಂ. 20ಎಂಎಂ ಜಲ್ಲಿ ಹಾಕಿಲ್ಲ, ಕಡಿಮೆ ಗುಣಮಟ್ಟದ ಮರಳನ್ನು ಬಳಸಿ, ಕಡಿಮೆ ಸಿಮೆಂಟ್ ಬಳಕೆ ಮಾಡಿದ್ದಲ್ಲದೆ ಕ್ಯೂರಿಂಗ್ ಸಹ ಮಾಡಿಲ್ಲ. ಕೆಲವು ರಸ್ತೆಗಳಲ್ಲಂತು ಜೆಸಿಬಿ ಮೂಲಕ ಗದ್ದೆ ಉಳುಮೆ ಮಾಡುವ ರೀತಿ ಕೆರೆದು, ಹೊಸ ಮಣ್ಣು ಹಾಕದೆ ಅದೇ ಮಣ್ಣನ್ನು ಮಟ್ಟ ಮಾಡಿ ಜಲ್ಲಿ ಹರಡಿ ಡಾಂಬರ್ ಸವರಿ ಎದ್ದು ಹೋಗಿದ್ದಾರೆ. ಒಟ್ಟಾರೆ 24 ಕೋಟಿ ವೆಚ್ಚದ ನಗರೋತ್ಥಾನ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು ಸರ್ಕಾರದ ಪಾರದರ್ಶಕ ಕಾಯ್ದೆಯನ್ನು ಸ್ಪಷ್ಟವಾಗಿ ಉಲ್ಲಂಘಿಸಲಾಗಿದೆ.

ಬಾಯಿ ಬಡಿದುಕೊಳ್ಳುತ್ತಿರುವ ಉಪಗುತ್ತಿಗೆದಾರರು

ಕೆಲ ನಗರಸಭಾ ಸದಸ್ಯರು ತಮ್ಮ ವಾರ್ಡ್‌ನಲ್ಲಿ ಮಾಡಿರುವ ಕಾಮಗಾರಿಗೆ ಇಂತಿಷ್ಟು ಪರ್ಸೆಂಟೇಜ್ ನೀಡಬೇಕೆಂದು ಒತ್ತಡ ಹೇರುತ್ತಿದ್ದರಿಂದ ಬಿಲ್ ಪಾವತಿಸುವಂತೆ ಉಪಗುತ್ತಿಗೆ ಪಡೆದವರು ನಗರಸಭೆ ಅಧಿಕಾರಿಗಳ ಮೇಲೆ ಒತ್ತಡ ಹಾಕಲಾರಂಭಿಸಿದ್ದರು. ಮಾಡಿರುವ ಕೆಲಸವೇ ಕಳಪೆ, ಅಂತದ್ದರಲ್ಲಿ ಅರ್ಧಂಬರ್ಧ ಕೆಲಸಕ್ಕೆ ಬಿಲ್ ಪಾವತಿಸುವಂತೆ ಪಟ್ಟುಹಿಡಿದ ಗುತ್ತಿಗೆದಾರರ ವಿಷಯ ಸಾರ್ವಜನಿಕವಾಗಿ ಬಹಿರಂಗವಾಯಿತು. ಸಾರ್ವಜನಿಕರಿಂದಲೂ ಕಳಪೆ ಕಾಮಗಾರಿ ವಿರುದ್ಧ ವ್ಯಾಪಕ ಟೀಕೆಗಳು ಕೇಳಿಬಂದವು. ಈ ಕುರಿತು ಆರ್‌ಟಿಐ ಹೋರಾಟಗಾರ ಕಲ್ಲಹಳ್ಳಿ ಕೆ.ಆರ್.ರವೀಂದ್ರ ಕಳಪೆ ಕಾಮಗಾರಿಯ ಬಗ್ಗೆ ಕರ್ತವ್ಯ ಲೋಪ ಎಸಗಿರುವ ಡಿಸಿ ಕೃಷ್ಣಯ್ಯ, ಮಂಡ್ಯ ನಗರಸಭೆ ಆಯುಕ್ತ ಶಶಿಕುಮಾರ್, ಎಇಇಗಳಾದ ವೈ.ಹೆಚ್.ಕರೀಗೌಡ, ಶಿವಪ್ರಕಾಶ್‌ಕುಮಾರ್, ನಗರಾಭಿವೃದ್ಧಿ ಕೋಶದ ಎಇಇ ನಾಗರಾಜು, ಗುತ್ತಿಗೆದಾರ ಸ್ಟಾರ್ ಡೆವಲಪರ್ಸ್‌ನ ದೊರೆಸ್ವಾಮಿ, 3ನೇ ಪಾರ್ಟಿ ಕಾಮಗಾರಿ ತಪಾಸಣೆ ಮಾಡುವ ಬೆಂಗಳೂರಿನ ಸಿವಿಲ್ ಟೆಕ್ನಾಲಜಿ ಇಂಡಿಯಾದ ವ್ಯವಸ್ಥಾಪಕ ರವಿಯವರ ವಿರುದ್ಧ ಕರ್ನಾಟಕ ಲೋಕಾಯುಕ್ತರಿಗೆ ದೂರನ್ನೂ ನೀಡಿದ್ದರು.

ಯಾವಾಗ ಲೋಕಾಯುಕ್ತರಿಗೆ ದೂರು ನೀಡಿದ್ದು ಗೊತ್ತಾಯಿತೋ, ಕಾಮಗಾರಿಯ ಬಿಲ್ ಪಾವತಿಸಲು ಜಿಲ್ಲಾಧಿಕಾರಿ ಕೃಷ್ಣಯ್ಯ ಸುತಾರಾಂ ಒಪ್ಪಲಿಲ್ಲ. ಹೀಗೆ ಸುಮಾರು 6 ಕೋಟಿಯಷ್ಟು ಬಿಲ್‌ಗೆ ಸಂಚಕಾರ ಬಂದಿದ್ದರಿಂದ ಕಾಸು ಹಾಕಿದ ಉಪಗುತ್ತಿಗೆದಾರರು ಲಬೋ ಲಬೋ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಮುಖ್ಯ ಗುತ್ತಿಗೆದಾರ ದೊರೆಸ್ವಾಮಿ ಮಾತು ನಂಬಿ ತಮ್ಮ ಕೈನಿಂದಲೇ ಹಣಹಾಕಿ

⏭07


ಕಳಪೆ ಕಾಮಗಾರಿಗೆ ಸಾಕ್ಷಿಯಾದ ಬಸ್-ಬೇ

ಗೋಲ್‌ಮಾಲ್ ಬಸ್-ಬೇ

ಟ್ರಾಫಿಕ್ ಸಮಸ್ಯೆ ನಿಯಂತ್ರಣ ಮಾಡಲೆಂದು, ಸಾರ್ವಜನಿಕರಿಗೆ ಅನುಕೂಲವಾಗಲೆಂದು ಡಿಸಿ ಕೃಷ್ಣಯ್ಯ ಹಾಗೂ ಎಸ್ಪಿ ಭೂಷಣ್ ಜಿ. ಬೊರಸೆ ಒತ್ತಾಸೆಯಿಂದ ಶುರುವಾದ ಬಸ್-ಬೇ ಕಾಮಗಾರಿಯಲ್ಲೂ ಅಕ್ರಮದ ವಾಸನೆ ಹೊಡೆಯುತ್ತಿದೆ. ನಗರದ 3 ಕಡೆ ಬಸ್-ಬೇ ಮಾಡಲು 23.21ಲಕ್ಷ ತೆಗೆದಿರಿಸಲಾಗಿತ್ತು. ನಗರದ ಕೆಎಸ್‌ಆರ್‌ಟಿಸಿ ಬಸ್‌ಸ್ಟ್ಯಾಂಡ್ ಮುಂಭಾಗ 9.83 ಲಕ್ಷ ಹಾಗೂ ಮಹಾವೀರ ಸರ್ಕಲ್ ಹತ್ತಿರ ಸಿಲ್ವರ್ ಜ್ಯೂಬಿಲಿಪಾರ್ಕ್‌ನಲ್ಲಿ 9.88 ಲಕ್ಷ ವೆಚ್ಚದಲ್ಲಿ ಬಸ್-ಬೇ ನಿರ್ಮಾಣ ಕಾಮಗಾರಿ ಮಾಡಲಾಗುತ್ತಿದೆ. ಟೆಂಡರ್ ಕರೆದರೆ ಸಾಕಷ್ಟು ಲಾಭ ಮಾಡುವುದು ಕೈ ತಪ್ಪಿಹೋಗುತ್ತದೆ ಎಂಬ ದುರುದ್ದೇಶದಿಂದ ಕರ್ನಾಟಕ ಭೂ ಸೇನಾ ನಿಗಮದ ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್) ಸಂಸ್ಥೆಗೆ ಕಾಮಗಾರಿ ವಹಿಸಲಾಗಿದೆ.

ಆದರೆ ಕೆಆರ್‌ಐಡಿಎಲ್‌ನವರು ಇದನ್ನು ಬೇನಾಮಿಯಾಗಿ ಹಾಲಹಳ್ಳಿ ಸಿದ್ದರಾಮಯ್ಯ ಎಂಬ ಗುತ್ತಿಗೆದಾರನಿಗೆ ನೀಡಿದ್ದಾರೆ. ಕೇವಲ ಜಲ್ಲಿ, ಡಸ್ಟ್, ಟಾರ್ ಹಾಕಿ ಮಾಡುವ ಕಾಮಗಾರಿಗೆ ಹೆಚ್ಚೆಂದರೆ 3 ರಿಂದ 4 ಲಕ್ಷ ಸಾಕು. ಆದರೆ ಬರೋಬ್ಬರಿ 10 ಲಕ್ಷ ರೂ.ಗಳನ್ನು ನೀಡಲಾಗಿದೆ. ಹಾಲಹಳ್ಳಿ ಸಿದ್ದರಾಮಯ್ಯನ ಸುಪುತ್ರನನ್ನು 'ಇದೇನಯ್ಯಾ ಕಾಮಗಾರಿ ಹೀಗೆ ನಡೀತಿದೆ' ಎಂದು ಜನ ಕೇಳಿದರೆ 'ನೀವು ಕಂಟ್ರಾಕ್ಟರ್ ಆಗಿ ಕೆಲಸ ಮಾಡಿ ಆಗ ಗೊತ್ತಾಗುತ್ತೆ' ಎಂಬ ಉಡಾಫೆ ಉತ್ತರ ಕೊಡುತ್ತಾನೆ. ಇಂತಹದೇ ಕಸುಬುಗಳಿಂದ ದುಂಡಾಗದ ಅಂತವರಿಂದ ಇದಕ್ಕಿಂತ ಜವಾಬ್ದಾರಿಯುತ ಉತ್ತರ ನಿರೀಕ್ಷಿಸೋದು ನಮ್ಮ ಮೂರ್ಖತನವಾದೀತು ಅಲ್ಲವೆ?

ಕೆಎಸ್‌ಆರ್‌ಟಿಸಿ ಮುಂಭಾಗ ನಿರ್ಮಿಸುತ್ತಿರುವ ಬಸ್-ಬೇಯಲ್ಲಿ ಪ್ರಯಾಣಿಕರು ನಿಲ್ಲುವುದಕ್ಕೇ ಜಾಗವಿಲ್ಲ. ಕಿಷ್ಕಿಂಧೆಯಂತಹ ಸ್ಥಳದಲ್ಲಿ ಬಸ್-ಬೇ ನಿರ್ಮಾಣ ಮಾಡಲಾಗುತ್ತಿದೆ. ಜಲ್ಲಿ, ಟಾರ್ ಹಾಕಲು ಮಾತ್ರ 10 ಲಕ್ಷ. ಆಸನ ವ್ಯವಸ್ಥೆ ಶೆಲ್ಟರ್‌ನ್ನು ಕೆಎಸ್‌ಆರ್‌ಟಿಸಿಯೇ ಮಾಡ್ಕೋಬೇಕು. 10 ಲಕ್ಷ ಹಣದಲ್ಲಿ ಪ್ರಯಾಣಿಕರಿಗೆ ಆಸನ ವ್ಯವಸ್ಥೆ, ಶೆಲ್ಟರ್ ಸೇರಿದಂತೆ ಇಡೀ ಕಾಮಗಾರಿಯನ್ನೇ ಅಚ್ಚುಕಟ್ಟಾಗಿ ಮುಗಿಸಬಹುದಿತ್ತು.

ಕೆಆರ್‌ಐಡಿಎಲ್‌ನ ಉಪ ನಿರ್ದೇಶಕ ಕೆ.ಎಸ್.ಶಿವಪ್ರಸಾದ್ ಹಾಗೂ ಸಹಾಯಕ ನಿರ್ದೇಶಕ ಕೆ.ಟಿ.ಜಗದೀಶ್ ಅವರನ್ನು ಡಿಸಿ ಕೃಷ್ಣಯ್ಯ ಕರೆಸಿ ಸರಿಯಾಗಿ ಕಾಮಗಾರಿ ನಡೆಸುವಂತೆ ಎಚ್ಚರಿಕೆ ನೀಡಬೇಕಿದೆ. ಇಲ್ಲದಿದ್ದರೆ ಅದು ಮತ್ತೊಂದು ನಗರೋತ್ಥಾನ ಹಗರಣವಾಗುವುದು. ಸಾರ್ವಜನಿಕರಿಂದ ಛೀಮಾರಿ ಹಾಕಿಸಿಕೊಳ್ಳೋದು ಕಟ್ಟಿಟ್ಟ



ಮರಳು ನೀತಿ
ಹಾವೂ ಸಾಯಲಿಲ್ಲ... ಕೋಲೂ ಮುರಿಯಲಿಲ್ಲ

ಮರಳು ಸಾಗಣೆ ಮಾಡುತ್ತಿರುವ ಲಾರಿ ಮಾಲೀಕರು ಒಂದು ತಿಂಗಳ ಕಾಲ ನಡೆಸಿದ ಮುಷ್ಕರ ಹೇಗೋ ಅಂತ್ಯ ಕಂಡಿದೆ. ಮುಷ್ಕರ ನಿರತರು ಅಂತಿಮ ಪ್ರಯತ್ನವಾಗಿ ಸಿಎಂ ಮನೆಗೆ ಘೇರಾವ್ ಮಾಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಲಾರಿ ಮಾಲೀಕರ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರಿಗೆ ವಹಿಸಿಕೊಟ್ಟಿದ್ದು ಎಲ್ಲವೂ ಮಾಮೂಲಿ ಘಟನೆಗಳೆಂಬಂತೆ ನಡೆದುಹೋದವು. ಹಾಗೆಯೇ ಲಾರಿ ಮಾಲೀಕರ ಸಂಘ ಹಾಗೂ ಸಚಿವರ ನಡುವೆ ನಡೆದ ಚರ್ಚೆಯ ಫಲಿತವಾಗಿ ಮುಷ್ಕರ ಕೈಬಿಟ್ಟು ಲಾರಿಗಳು ಎಂದಿನಂತೆ ರಸ್ತೆಗಿಳಿದಿವೆ. ಈ ಮುಷ್ಕರದಿಂದ ತೊಂದರೆಗೊಳಗಾಗಿದ್ದ ಜನ ಸದ್ಯ ನಿಟ್ಟುಸಿರು ಬಿಟ್ಟಿದ್ದಾರೆ.

ಈ ಮುಷ್ಕರಕ್ಕೆ ಸದ್ಯದ ಕಾರಣ ರಾಜ್ಯ ಸರ್ಕಾರ ರೂಪಿಸಿರುವ ಹೊಸ ಮರಳು ನೀತಿ. ಆದರೆ ವಿಪರ್ಯಾಸ ಹೇಗಿದೆ ನೋಡಿ. ಸರ್ಕಾರ ಹೊಸ ಮರಳು ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆಂದು ಗುಟುರು ಹಾಕುತ್ತಿದ್ದರೆ, ಇತ್ತ ಲಾರಿ ಮಾಲೀಕರು ಕೂಡ ಹೊಸ ಮರಳು ನೀತಿಯನ್ನು ಕೂಡಲೇ ಜಾರಿಗೆ ತನ್ನಿ ಎಂದು ಒತ್ತಾಯಿಸುತ್ತಿದ್ದಾರೆ. ಇಂಥಾ ಒಂದು ವಿಚಿತ್ರ ಸನ್ನಿವೇಶ ಬಹುಶಃ ಹಿಂದೆಂದೂ ಬಂದಿರಲಿಕ್ಕಿಲ್ಲ.

ಹಾಗಾದರೆ ಇಂಥಾ ಎಡಬಿಡಂಗಿ ಸ್ಥಿತಿಯಲ್ಲಿರುವ ಈ ಮರಳು ಸಮಸ್ಯೆಯ ಮೂಲವೇನು? ಅದರ ಆಳ ಅಗಲ ಎಷ್ಟು ಎಂಬುದನ್ನು ಸ್ವಲ್ಪ ವಿವರವಾಗಿ ಚರ್ಚಿಸೋಣ.

ಇಂದಿನ ಆಧುನಿಕ ಜಗತ್ತಿನಲ್ಲಿ ಮರಳು ಇಲ್ಲದೇ ಯಾವುದೇ ಅಭಿವೃದ್ಧಿ ಸಾಧ್ಯವೇ ಇಲ್ಲ ಎನ್ನಬಹುದು. ಈಗ ಚಾಲ್ತಿಯಲ್ಲಿರುವ ಕಟ್ಟಡ ನಿರ್ಮಾಣ ತಂತ್ರಜ್ಞಾನದಲ್ಲಿ ಮರಳು ಇಲ್ಲದ ಯಾವುದೇ ಕಾಮಗಾರಿಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಯಾವುದೇ ಕಟ್ಟಡ, ಸೇತುವೆ, ಕೈಗಾರಿಕೆ, ರಸ್ತೆ ಇತ್ಯಾದಿ ಎಲ್ಲ ರೀತಿಯ ಅಭಿವೃದ್ಧಿ ಕಾಮಗಾರಿಗಳಲ್ಲೂ ಸಿಮೆಂಟು, ಉಕ್ಕು ಹೇಗೆ ಅನಿವಾರ್ಯವೋ ಮರಳು ಕೂಡ ಅಷ್ಟೇ ಅನಿವಾರ್ಯವಾಗಿದೆ.

ಆದರೆ ಸಿಮೆಂಟು, ಉಕ್ಕು ಮುಂತಾದ ಕೈಗಾರಿಕಾ ಉತ್ಪನ್ನಗಳು ಭಾರೀ ಉದ್ಯಮಿಗಳ ಕಬ್ಜಾದಲ್ಲಿವೆ. ಪ್ರಕೃತಿದತ್ತವಾಗಿ ದೊರೆಯುವ ಮರಳಿನ ಮೇಲಿನ ಹಿಡಿತವನ್ನು ಸ್ಥಳೀಯ ರಾಜಕಾರಣಿಗಳು ಹಾಗೂ ಭ್ರಷ್ಟ ಅಧಿಕಾರಿಗಳ ಕೂಟ ಹಿಡಿದುಕೊಳ್ಳುವಲ್ಲಿ ಬಹುತೇಕ ಯಶಸ್ವಿಯಾಗಿದೆ. ಆದರೆ ಮರಳು ನಿಕ್ಷೇಪದ ಮೇಲೆ ಸಂಪೂರ್ಣ ಹಿಡಿತ ಸಾಧಿಸಲು ಈ ದಂಧೆಕೋರರಿಗೆ ಇನ್ನೂ ಸಾಧ್ಯವಾಗಿಲ್ಲ ಎಂಬುದು ಬೇರೆ ಮಾತು.

ನಗರೀಕರಣ ಪ್ರಕ್ರಿಯೆ ಹೆಚ್ಚುತ್ತಿದ್ದಂತೆ ಮರಳಿನ ಬೇಡಿಕೆಯೂ ತೀವ್ರವಾಗಿ ಹೆಚ್ಚಿ ಅಡ್ಡಾದಿಡ್ಡಿ ಎಲ್ಲೆಂದರಲ್ಲಿ ಮರಳು ತೆಗೆಯುವ ದಂಧೆಯೂ ಹೆಚ್ಚಾಯಿತು. ಮೊದಲಿಗೆ ಹಳ್ಳಕೊಳ್ಳಗಳಲ್ಲಿ ಸಂಗ್ರಹವಾಗಿದ್ದ ಮರಳು ನಿಕ್ಷೇಪ ಸಂಪೂರ್ಣ ಖಾಲಿಯಾಯ್ತು, ಪರಿಣಾಮ ಬೆಲೆ ಏರುತ್ತಲೇ ಹೋಯ್ತು. ಐದಾರು ವರ್ಷಗಳ ಹಿಂದೆ ಒಂದು ಲೋಡ್ ಮರಳಿಗೆ 3,000-4,000 ರೂ. ಇದ್ದದ್ದು ಈಗ 30ರಿಂದ 40 ಸಾವಿರ ರೂಪಾಯಿಗೆ ಏರಿದೆ. ಅಂದರೆ ಸುಮಾರು ಹತ್ತು ಪಟ್ಟು ಹೆಚ್ಚಳ!! ಬಹುಶಃ ದೇಶದಲ್ಲಿ ಮರಳಿನಷ್ಟು ವೇಗದಲ್ಲಿ ಬೆಲೆಯೇರಿಕೆ ಕಂಡಿರುವ ಸರಕು ಮತ್ತೊಂದಿಲ್ಲ.



ಮರಳಿನ ಬೆಲೆ ಗಗನಕ್ಕೇರಿದ್ದರಿಂದ ಫಿಲ್ಟರ್ ಮರಳು ದಂಧೆ ಶುರುವಾಗಿದೆ. ಮಣ್ಣನ್ನು ಪ್ರೆಷರ್ ವಾಶ್ ಮೂಲಕ ತೊಳೆದು ಉತ್ಪಾದಿಸಿದ 'ಮರಳು' ಫಿಲ್ಟರ್ ಮರಳು ಎನಿಸಿಕೊಂಡಿದೆ. ಇದು ಗುಣಮಟ್ಟದಲ್ಲಿ ಅತ್ಯಂತ ಕಳಪೆಯಾಗಿದ್ದು ಕಟ್ಟಡ ನಿರ್ಮಾಣಕ್ಕೆ ಎಷ್ಟು ಮಾತ್ರಕ್ಕೂ ಯೋಗ್ಯವಲ್ಲ.

ನದಿ ಮರಳಿಗೆ ಹೋಲಿಕೆ ಮಾಡಿದರೆ ಫಿಲ್ಟರ್ ಮರಳಿನ ಬೆಲೆ ಅಗ್ಗ. ಇಂಥಾ ಫಿಲ್ಟರ್ ಮರಳನ್ನು ಸ್ವಂತ ಕಟ್ಟಡ ನಿರ್ಮಾಣ ಮಾಡುತ್ತಿರುವವರು ಬಳಸುವುದಿಲ್ಲ. ಅದೇನಿದ್ದರೂ ಕಳ್ಳ ಬಿಲ್ಲು ವಿದ್ಯೆಯಲ್ಲಿ ಪರಿಣತರಾಗಿರುವ ಸರ್ಕಾರಿ ಕಾಮಗಾರಿಗಳ ಗುತ್ತಿಗೆದಾರರ ಬಳಕೆಗೆ ಮಾತ್ರ. ಉತ್ತಮ ಗುಣಮಟ್ಟದ ಮರಳು ಯಥೇಚ್ಛವಾಗಿ ಅಗ್ಗದ ಬೆಲೆಗೆ ಸಿಗುತ್ತಿದ್ದ ಕಾಲದಲ್ಲೇ ಸರ್ಕಾರಿ ಕಾಮಗಾರಿಗಳ ಕತೆ ಏನೆಂಬುದು ನಮಗೆ ಗೊತ್ತು. ಇನ್ನು ಫಿಲ್ಟರ್ ಮರಳು ಅರ್ಥಾತ್ ಸುಧಾರಿತ ಮಣ್ಣು ಕಲೆಸಿ ಕಟ್ಟುವ ಕಾಮಗಾರಿಗಳನ್ನು ದೇವರೇ ಕಾಪಾಡಬೇಕು. ಅದರಲ್ಲೂ ದೀನದಲಿತರಿಗಾಗಿ ಕಟ್ಟಲಾಗುವ ಅಂಬೇಡ್ಕರ್ ವಸತಿ ಯೋಜನೆಗಳು/ ಆಶ್ರಯ ಮನೆಗಳು/ ಸ್ಲಂ ಪುನರ್ವಸತಿಗೆ ನಿರ್ಮಿಸಿದ ಮನೆಗಳ ಕತೆ ಮುಂದಿನ ದಿನಗಳಲ್ಲಿ ಏನಾಗಬಹುದು ಎಂಬ ಬಗ್ಗೆ ಹೇಳೋದೇ ಬೇಡ.

ಈ ಫಿಲ್ಟರ್ ಮರಳು ತಯಾರಿಕೆ ಕಾನೂನುಬಾಹಿರವಾಗಿದ್ದರೂ ಅದನ್ನು ಸಂಪೂರ್ಣ ತಹಬಂದಿಗೆ ತರಲು ಇದುವರೆಗೂ ಸಾಧ್ಯವಾಗಿಲ್ಲ. ಅಧಿಕಾರಿಗಳು ಅದೆಷ್ಟು ರೈಡ್‌ಗಳನ್ನು ನಡೆಸಿದ್ದಾರೋ, ಅದೆಷ್ಟು ಕೇಸುಗಳನ್ನು ಹಾಕಿದ್ದಾರೋ ಲೆಕ್ಕವಿಲ್ಲ. ಹಾಗೆ ಈ ಕೇಸುಗಳ ಪರಿಣಾಮವಾಗಿ ಅಧಿಕಾರಿಗಳ ಜೇಬು ಸೇರಿದ ಹಣಕ್ಕೂ ಲೆಕ್ಕವಿಲ್ಲ.

ಮಾರುಕಟ್ಟೆಯಲ್ಲಿ ಮರಳಿನ ಬೇಡಿಕೆಯಿಂದಾಗಿ ನದಿಗಳಿಂದ ಮರಳು ತೆಗೆಯುವ ಪ್ರಕ್ರಿಯೆ ಇತ್ತೀಚಿನ ವರ್ಷಗಳಲ್ಲಿ ಎಲ್ಲೆ ಮೀರಿ ನಡೆಯುತ್ತಿದೆ. ನದಿಯ ಆಜುಬಾಜಿನಲ್ಲಿರುವ ನೂರಾರು ರೈತರೂ ಕೂಡ ತಮ್ಮ ಜಮೀನಿನ ಭಾಗದಲ್ಲಿ ಮರಳು ಸಂಗ್ರಹಿಸಿ ಲಾರಿ ಮಾಲೀಕರಿಗೆ ಮಾರಿ ಕಾಸು ಗಳಿಸುವ ಕಾಯಕದಲ್ಲಿ ತೊಡಗಿದ್ದಾರೆ.

ಇದರ ಒಟ್ಟಾರೆ ಪರಿಣಾಮದಲ್ಲಿ ಪರಿಸರ ಸಮತೋಲನ ಹಾಳಾಗಿದೆ. ಅಂತರ್ಜಲವನ್ನು ಹೆಚ್ಚಿಸುವ ನೈಸರ್ಗಿಕ ಕಣಜವಾಗಿದ್ದ ಮರಳು ನಿಕ್ಷೇಪಗಳು ಖಾಲಿಯಾಗಿದ್ದೂ ಅಂತರ್ಜಲ ಕುಸಿತಕ್ಕೆ ಒಂದು ಪ್ರಮುಖ ಕಾರಣ ಎಂದು ಹಲವು ಸಂಶೋಧನಾ ವರದಿಗಳು ಹೇಳಿವೆ. ನದಿಗಳಲ್ಲಿ ಮರಳನ್ನು ತೆಗೆಯಲಿಕ್ಕಾಗಿ ಆಳದ ಗುಂಡಿಗಳನ್ನು ತೋಡುವುದರಿಂದ ನದಿಯ ಸಹಜ ಹರಿವು ಕುಂಠಿತಗೊಂಡು ಕ್ರಮೇಣ ನದಿಗಳು ಬತ್ತಿ ಹೋಗುವ ಅಪಾಯವಿರುತ್ತದೆ. ಅಲ್ಲದೆ ನದಿಯ ದಡಗಳ ಕುಸಿತ, ಮಣ್ಣಿನ ಸವಕಳಿ ಮುಂತಾದ ದುಷ್ಪರಿಣಾಮಗಳೂ ಇವೆ. ಪರಿಣಾಮವಾಗಿ ಪ್ರವಾಹಕ್ಕೊಳಗಾದಾಗ ನದಿಯ ದಿಕ್ಕು ಬದಲಾವಣೆಯಾಗುವ ಅಪಾಯವೂ ಇದೆ.

ಈ ಹಿನ್ನೆಲೆಯಲ್ಲಿ ಹಲವು ಪರಿಸರ ಹೋರಾಟಗಾರರ ಹಾಗೂ ಸಂಘ ಸಂಸ್ಥೆಗಳ ಪ್ರಯತ್ನದ ಫಲವಾಗಿ ಸುಪ್ರೀಂಕೋರ್ಟ್ ಅಕ್ರಮ ಮರಳು ಲೂಟಿಯನ್ನು ತಡೆಗಟ್ಟುವಂತೆ ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಿದ ಪರಿಣಾಮ ಕೇಂದ್ರ ಈ ಬಗ್ಗೆ ಒಂದು ಕಾನೂನನ್ನು ರೂಪಿಸಿದೆ. ಅದರ ಮುಂದುವರೆದ ಭಾಗವಾಗಿ ರಾಜ್ಯ ಸರ್ಕಾರ ಕೂಡ ಹೊಸ ಮರಳು ನೀತಿಯೊಂದನ್ನು ಜಾರಿಗೆ ತಂದಿದೆ.

ಹೊಸ ಮರಳು ನೀತಿಯ ಪ್ರಕಾರ ಪಿ.ಡಬ್ಲ್ಯುಡಿ ಇಲಾಖೆ ಆಯ್ದ ಸ್ಥಳಗಳಲ್ಲಿ ಮರಳು ಸಂಗ್ರಹಿಸಲು ಟೆಂಡರ್ ಕರೆದು ಗುತ್ತಿಗೆ ನೀಡುತ್ತದೆ. ಗುತ್ತಿಗೆದಾರರು ನದಿಗಳಿಂದ ತೆಗೆದ ಮರಳನ್ನು ಇಲಾಖೆ ಗೊತ್ತು ಮಾಡಿದ ಜಾಗದಲ್ಲಿ ದಾಸ್ತಾನು ಮಾಡುತ್ತಾರೆ. ನಂತರ ಪರ್ಮಿಟ್ ಹೊಂದಿರುವ ಲಾರಿ ಮಾಲೀಕರು ನಿಗದಿತ ದರ ಪಾವತಿ ಮಾಡಿ ಮರಳು ಖರೀದಿಸಿ ನಗರ ಪ್ರದೇಶಗಳಿಗೆ ಸಾಗಿಸಿ ಮಾರಾಟ ಮಾಡುತ್ತಾರೆ. ಇದು ಈಗಿನ ಹೊಸ ವ್ಯವಸ್ಥೆ.

ಸರ್ಕಾರದ ನಿಯಮಾವಳಿ ಪ್ರಕಾರ ಮರಳು ಸಾಗಣೆ ಪರ್ಮಿಟ್ ಪಡೆಯಲು ಪ್ರತಿ ಲೋಡ್‌ಗೆ ಸುಮಾರು 6,000 ರೂಪಾಯಿ ಪಾವತಿಸಬೇಕು (ಈ ಮೊತ್ತ ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಾಗುತ್ತದೆ). ಅದರಲ್ಲಿ 4,000 ರೂಪಾಯಿಗಳು ಮರಳು ತೆಗೆದ ಟೆಂಡರ್‌ದಾರರಿಗೂ, ಉಳಿದ 2,000 ರೂ. ಸರ್ಕಾರದ ಬೊಕ್ಕಸಕ್ಕೂ ಸೇರಬೇಕು.

ಈಗಿನ ಅಸಲಿ ಸಮಸ್ಯೆ ಇರುವುದೇ ಇಲ್ಲಿ. ಲಾರಿ ಮಾಲೀಕರು ಸರ್ಕಾರ ನಿಗದಿಪಡಿಸುವ ದಾಯಲ್ಲಿ ಅಥವಾ ಪರ್ಮಿಟ್ ಮೊತ್ತವನ್ನು ಪಾವತಿಸಿ ಮರಳು ಸಾಗಿಸಲು ತಯಾರಿದ್ದಾರೆ. ಆದರೆ ಸರ್ಕಾರವೇ ಅದಕ್ಕೆ ಸಿದ್ಧವಿಲ್ಲ! ಇದೇ ಈ ಬಿಕ್ಕಟ್ಟಿನ ಸಾರಾಂಶ.

ಪ್ರತಿದಿನ ರಾಜ್ಯದಲ್ಲಿ ಸುಮಾರು 10,000 ಲೋಡ್ ಮರಳು ಬೇಕೆಂಬುದು ಒಂದು ಅಂದಾಜು. ಅದರಲ್ಲಿ 3,000 ಲೋಡ್ ಬೆಂಗಳೂರು ನಗರವೊಂದಕ್ಕೇ ಬೇಕಾಗುತ್ತದೆ. ಈ ಮರಳು ಸಾಗಣೆಯನ್ನು ನೆಚ್ಚಿಕೊಂಡು ಸುಮಾರು 22,000 ಲಾರಿಗಳಿವೆ. ಆದರೆ ಸರ್ಕಾರ ಪರ್ಮಿಟ್ ಕೊಟ್ಟಿರುವುದು 1,300 ಲೋಡ್ ಮರಳಿಗೆ ಮಾತ್ರ. ನಿಯಮಾವಳಿ ಪ್ರಕಾರ ಪರ್ಮಿಟ್‌ಗೆ ಅರ್ಜಿ ಹಾಕಿ ತಿಂಗಳು ಕಾಯ್ದರೂ ಮರಳು ಸಿಗುವುದಿಲ್ಲ. ಈ ಬಗ್ಗೆ ಸಂಬಂಧಿಸಿದ ಪಿಡಬ್ಲ್ಯುಡಿ ಅಧಿಕಾರಿಗಳನ್ನು ಪ್ರಶ್ನಿಸಿದರೆ ಸಿಬ್ಬಂದಿ ಕೊರತೆಯಿಂದ ಮರಳು ತೆಗೆದಿಲ್ಲ ಎಂಬ ಮಾಮೂಲಿ ಉತ್ತರ ಕೊಟ್ಟು ಕೈತೊಳೆದುಕೊಳ್ಳುತ್ತಾರೆ.

ಹೀಗಾಗಿ ಬಹುತೇಕ ಮರಳು ಅಕ್ರಮ ಮಾರ್ಗಗಳಲ್ಲೇ ಸಾಗಾಣಿಕೆಯಾಗುವಂಥಾ ಅನಿವಾರ್ಯತೆ ಸೃಷ್ಟಿಯಾಗಿದೆ ಎಂಬುದು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಜೆ.ಆರ್.ಷಣ್ಮುಗಪ್ಪನವರ ವಾದ. ಕಾನೂನು ಪ್ರಕಾರ ಅಗತ್ಯವಿರುವ ಪರ್ಮಿಟ್ ಪಡೆದು ಮರಳು ಸಾಗಿಸಲು ಸಿದ್ಧರಿದ್ದೇವೆ, ಮರಳು ಕೊಡಿ; ಇಲ್ಲವೇ ಮರಳು ಸಾಗಾಣಿಕೆ ಲಾರಿಗಳಿಗೆ ಅಧಿಕಾರಿಗಳ ಕಿರುಕುಳ ತಪ್ಪಿಸಿ ಎಂಬ ಅವರ ವಾದವನ್ನು ಸಾರಾಸಗಟಾಗಿ ತಳ್ಳಿಹಾಕುವ ಧೈರ್ಯ ಸದ್ಯಕ್ಕೆ ಯಾರಿಗೂ ಇದ್ದಂತಿಲ್ಲ.

ಅಕ್ರಮ ಮರಳುಗಾರಿಕೆಯಿಂದ ಪರಿಸರಕ್ಕೆ ಹಾನಿಯಾಗುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ಸರ್ಕಾರಿ ಬೊಕ್ಕಸಕ್ಕೆ ಭಾರಿ ನಷ್ಟವುಂಟಾಗುತ್ತದೆ. ಆದರೆ ಒಂದು ವಿಷಯ; ನಷ್ಟ ಸರ್ಕಾರಕ್ಕೇ ಹೊರತು ಸರ್ಕಾರಿ ಅಧಿಕಾರಿಗಳಿಗಲ್ಲ. ಅಕ್ರಮ ವ್ಯವಹಾರ ಹೆಚ್ಚಾದಷ್ಟೂ ಲೋಕೋಪಯೋಗಿ/ಕಂದಾಯ/ಪರಿಸರ/ಪೊಲೀಸ್ ಅಧಿಕಾರಿಗಳಿಗೆ ಸುಗ್ಗಿಯೋ ಸುಗ್ಗಿ. ಈ ಹಿನ್ನೆಲೆಯಲ್ಲಿ ಒಂದು ಸಮತೋಲಿತ ಮರಳುನೀತಿಯನ್ನು ಜಾರಿಗೆ ತರಲು ಈ ಬ್ಯೂರಾಕ್ರಸಿಯೇ ಅಡ್ಡಿಯಾಗಿದೆ ಎಂಬ ಅನುಮಾನ ಸಾರ್ವಜನಿಕರಲ್ಲಿ ಬಲವಾಗಿದೆ.

ಸಮಸ್ಯೆಯ ಮತ್ತೊಂದು ಆಯಾಮವೇನೆಂದರೆ ಮರಳನ್ನು ಹೊರ ರಾಜ್ಯಗಳಿಗೆ ಅಕ್ರಮವಾಗಿ ಸಾಗಿಸುವ ದಂಧೆಕೋರರ ಜೊತೆ ಅಧಿಕಾರಿಗಳೇ ಶಾಮೀಲಾಗಿರುವುದು. ಉದಾಹರಣೆಗೆ ಕೊಳ್ಳೇಗಾಲ ಮತ್ತು ಚಾಮರಾಜನಗರ ಭಾಗಗಳಲ್ಲಿ ತೆಗೆಯಲಾಗುವ ಮರಳಿನ ಬಹುಪಾಲನ್ನು ಕೇರಳ ರಾಜ್ಯಕ್ಕೆ ಸಾಗಿಸುತ್ತಿದ್ದಾರೆ ಎಂಬುದು ಲಾರಿ ಮಾಲೀಕರ ಸಂಘದ ಆರೋಪ. ಹಾಗೆಯೆ ಕರಾವಳಿ ಜಿಲ್ಲೆಗಳಿಂದಲೂ ಕೇರಳಕ್ಕೆ ಅಕ್ರಮವಾಗಿ ಮರಳು ಸಾಗಾಣಿಕೆಯಾಗುತ್ತಿರುವುದು ರಹಸ್ಯ ಸಂಗತಿಯೇನಲ್ಲ. ಬೆಳಗಾವಿಯ ಖಾನಾಪುರ ತಾಲೂಕಿನಿಂದ ನೆರೆಯ ಗೋವಾಕ್ಕೆ ಅಪಾರ ಪ್ರಮಾಣದ ಮರಳು ಕಳ್ಳಸಾಗಣೆಯಾಗುತ್ತಿದೆ ಎಂಬ ಆರೋಪವೂ ಆಗಾಗ್ಗೆ ಕೇಳಿಬರುತ್ತದೆ.

ಇಗ್ಗಲೂರು ಜಲಾಶಯದಲ್ಲೂ ಮರಳು ಮಾಫಿಯಾ

ಸಣ್ಣಪುಟ್ಟ ತೊರೆಗಳನ್ನೂ ಬಿಡದಂತೆ ಮುಕ್ಕುತ್ತಿರುವ ಮರಳು ಮಾಫಿಯಾಕ್ಕೆ ಕಾವೇರಿ ಕೊಳ್ಳದ ಶಿಂಷಾ ನದಿಯೇನು ಹೊರತಲ್ಲ. 2000ರ ಡಿಸೆಂಬರ್‌ನಲ್ಲೇ ರಾಜ್ಯ ಸರ್ಕಾರ ಕಾವೇರಿ ಕೊಳ್ಳದ ನದಿಗಳಲ್ಲಿ ಮರಳು ಗಣಿಗಾರಿಕೆ ನಡೆಸಬಾರದೆಂದು ನಿಷೇಧಿತ ಪ್ರದೇಶವನ್ನಾಗಿ ಘೋಷಿಸಿದ್ದರೂ ಕರ್ನಾಟಕದ ಜೀವನದಿಯ ಜೀವಸೆಲೆಯನ್ನೇ ಬಸಿದು ಕುಡಿಯಲಾಗುತ್ತಿದೆ. ಶಿಂಷಾ, ಕಣ್ವ, ಅರ್ಕಾವತಿ ನದಿ ಪಾತ್ರಗಳಲ್ಲಿನ ಸುಮಾರು 25 ಸಾವಿರ ಕೋಟಿ ರೂಪಾಯಿಗೂ ಅಧಿಕ ಬೆಲೆಯ ಮರಳು ಮಾಫಿಯಾದವರ ಪಾಲಾಗಿದೆ. ಈಗಾಗಲೇ ಕಾವೇರಿ ನೀರಾವರಿ ನಿಗಮದ ಇಗ್ಗಲೂರು ಜಲಾಶಯದ ಸಹಾಯಕ ಕಾರ್ಯಪಾಲಕ ಇಂಜಿನಿಯರರು ಸಂಬಂಧಪಟ್ಟ ಇಲಾಖೆಗಳಿಗೆ ಕ್ರಮಕೈಗೊಳ್ಳುವಂತೆ ದೂರು ನೀಡಿದ್ದರೂ ಯಾವ ಪ್ರಯೋಜನವೂ ಆಗಿಲ್ಲ.

ಮಳವಳ್ಳಿ, ಮದ್ದೂರು, ಚನ್ನಪಟ್ಟಣಗಳಲ್ಲಿ ಹರಿಯುತ್ತಿರುವ ಶಿಂಷಾ ನದಿ ಮತ್ತು ಇಗ್ಗಲೂರು ಜಲಾಶಯದಲ್ಲಿ ಅಕ್ರಮ ಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ಆದರೂ ಸರ್ಕಾರವಾಗಲಿ ಅಥವಾ ಅಧಿಕಾರಿ ವರ್ಗಗಳಾಗಲಿ ಇಲ್ಲಿಯ ಅಕ್ರಮವನ್ನು ಪ್ರಶ್ನಿಸುವ ಗೋಜಿಗೇ ಹೋಗಿಲ್ಲ. ಒಂದೊಮ್ಮೆ ಮರಳು ನೀತಿಯನ್ನು ಜಾರಿಗೆ ತಂದು ಸರ್ಕಾರವೇ ವೈಜ್ಞಾನಿಕವಾಗಿ ಮರಳು ಗಣಿಗಾರಿಕೆ ನಡೆಸುವುದಾದರೆ ಕರ್ನಾಟಕ ಸರ್ಕಾರದ ವಾರ್ಷಿಕ ಆಯವ್ಯಯದ ಅರ್ಧದಷ್ಟು ಆದಾಯವನ್ನು ಮರಳಿನಿಂದಲೇ ಪಡೆಯಬಹುದೆನ್ನುವ ಲೆಕ್ಕಾಚಾರಗಳೂ ಇವೆ. ಅಲ್ಲದೆ ಗ್ರಾಹಕರಿಗೂ ಅಗ್ಗದ ದರದಲ್ಲಿ ಮರಳನ್ನು ತಲುಪಿಸಬಹುದು. ಆದರೆ ಇದ್ಯಾವುದಕ್ಕೂ ಸರ್ಕಾರ ಮನಸ್ಸು ಮಾಡುವ ಲಕ್ಷಣವೇ ಕಂಡುಬರುತ್ತಿಲ್ಲ. ಹಾಗಂತ ಪರಿಸರವಾದಿಗಳು, ಚಿಂತಕರು ಕೈಕಟ್ಟಿಯೇನು ಕೂತಿಲ್ಲ. ಮರಳು ಮಾಫಿಯಾದ ವಿರುದ್ಧ ನಿರಂತರವಾಗಿ ಹೋರಾಡುತ್ತಲೇ ಬಂದಿದ್ದಾರೆ.


ತೀರಾ ಇತ್ತೀಚೆಗೆ, ಅಂದರೆ ಜನವರಿ 20 ರಂದು ಚನ್ನಪಟ್ಟಣದ ತಾಲ್ಲೂಕು ಕಚೇರಿ ಆವರಣದಲ್ಲಿ ತಾಲ್ಲೂಕು ಪಂಚಾಯತಿಯ ಮಾಜಿ ಅಧ್ಯಕ್ಷ ಎಸ್. ಸಿದ್ದರಾಮಯ್ಯ ಹೆಗ್ಗಡೆಯವರ ನೇತೃತ್ವದಲ್ಲಿ ಅನೇಕ ಸಂಘಟನೆಗಳು ಸೇರಿ ಬೃಹತ್ ಪ್ರತಿಭಟನೆಯನ್ನೂ ನಡೆಸಿದ್ದವು. ಸರ್ಕಾರ ಆ ಹೋರಾಟಕ್ಕೆ ಸೂಕ್ತವಾಗಿ ಸ್ಪಂದಿಸದಿರುವುದು ಪ್ರಜಾತಾಂತ್ರಿಕತೆಯ ದೊಡ್ಡ ದುರಂತವೇ ಸರಿ. ಆದರೆ ಇದನ್ನು ಇಷ್ಟಕ್ಕೇ ನಿಲ್ಲಿಸದೆ ಸಂಬಂಧಪಟ್ಟ ಎಲ್ಲಾ ಕಚೇರಿಗಳ ಮುಂದೆ ಮತ್ತು ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ಶಿಂಷಾ ನದಿ ಬಯಲು ಮತ್ತು ಇಗ್ಗಲೂರು ಜಲಾಶಯದ ಮುಂದೆಯೂ ಪ್ರತಿಭಟನೆಗಳನ್ನು ನಡೆಸಿ ಘೇರಾವ್ ಮಾಡುವುದಾಗಿ ಪ್ರತಿಭಟನೆಕಾರರು ಎಚ್ಚರಿಕೆ ರವಾನಿಸಿದ್ದಾರೆ. ಸರ್ಕಾರಕ್ಕೆ ಕಿಂಚಿತ್ತಾದರು ಪರಿಸರ ಕಾಳಜಿ ಅಂತನ್ನುವುದು ಇದ್ದರೆ ಕೂಡಲೇ ಮರಳು ಸಮಸ್ಯೆಯತ್ತ ಗಮನಹರಿಸುತ್ತದೆಂಬ ನಿರೀಕ್ಷೆ ಪರಿಸರ ಪ್ರೇಮಿಗಳದ್ದು.

ಮರಳು ಸ್ಮಗ್ಲಿಂಗ್ ಕೇಳಿದ್ದೀರಾ?

ಈ ಮರಳು ಸಮಸ್ಯೆ ರಾಷ್ಟ್ರೀಯ ಗಡಿಗಳನ್ನು ದಾಟಿ ಅಂತರರಾಷ್ಟ್ರೀಯ ಸ್ವರೂಪ ಪಡೆದುಕೊಂಡಿದೆ. ಕೇರಳದ ...ಚ್ಚಿನ್ ಬಂದರಿನ ಅಧಿಕಾರಿಗಳು ಕಳೆದ ವರ್ಷ ಸುಮಾರು 32,000 ಟನ್‌ಗಳಷ್ಟು ಮರಳಿನ ರಾಶಿಯನ್ನು ...ಟ್ಟುಗೋಲು ಹಾಕಿಕೊಂಡಿದ್ದರು.

ಕೇರಳದ ರಾಜ ಸ್ಟೀಲ್ ಪ್ರೈ ಲಿ. ಎಂಬ ಕಂಪನಿ ಈ ಮರಳನ್ನು ಕಾಂಬೋಡಿಯಾ ದೇಶದಿಂದ ಹಡಗಿನಲ್ಲಿ ...ಸಿಕೊಂಡಿತ್ತು. ಆದರೆ ಅದು ಅಕ್ರಮ ಸಾಗಾಣಿಕೆಯಾಗಿದ್ದು ಸೂಕ್ತ ದಾಖಲೆಪತ್ರಗಳು ಇಲ್ಲದುದರಿಂದ ಕಸ್ಟಮ್ಸ್ ...ಧಿಕಾರಿಗಳು ಮರಳನ್ನು ವಶಪಡಿಸಿಕೊಂಡಿದ್ದರು. ಬಿಲ್ಡರ್‌ಗಳ ಯಾವುದೇ ತಂತ್ರಕ್ಕೆ ಅಧಿಕಾರಿಗಳು ಜಪ್ಪಯ್ಯ ...ನ್ನಲಿಲ್ಲವಾಗಿ ಈಗ ಈ ಕೇಸು ಕೇರಳ ಹೈಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ.

ಕೆಲವು ಪತ್ರಿಕೆಗಳಲ್ಲಿ ಹಾಗೂ ಯೂಟ್ಯೂಬ್‌ನಲ್ಲಿ ಈ ಸುದ್ದಿ ಪ್ರಕಟವಾಗುತ್ತಿದ್ದಂತೆ ಅತ್ತ ಕಾಂಬೋಡಿಯಾ ...ರ್ಕಾರ ಈ ಅಕ್ರಮದ ಬಗ್ಗೆ ತನಿಖೆಗೆ ಆದೇಶಿಸಿದೆ. ಕಾಂಬೋಡಿಯಾದ ಪರಿಸರವಾದಿಗಳು ಹಾಗೂ ಸಂಘ ...ಸ್ಥೆಗಳು ಈ ಅಕ್ರಮ ಮರಳು ಸ್ಮಗ್ಲಿಂಗ್ ವಿರುದ್ಧ ನಿರಂತರವಾಗಿ ಹೋರಾಡುತ್ತಿದ್ದಾರೆ.



...ಹೊಸ ನೀತಿಯನುಸಾರ ಮರಳು ಗಣಿಗಾರಿಕೆಗೆ ...ವಾನಗಿ ನೀಡುವುದು ಮತ್ತು ಅಕ್ರಮ ತಡೆಯುವ ...ವಾಬ್ದಾರಿಯನ್ನು ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾ ...ಮಿತಿಗೆ ನೀಡಲಾಗಿದೆ. ಈ ಸಮಿತಿಯಲ್ಲಿ ಕಂದಾಯ, ... ಮತ್ತು ಭೂವಿಜ್ಞಾನ, ಲೋಕೋಪಯೋಗಿ, ಪೊಲೀಸ್, ...ರಣ್ಯ ಮತ್ತು ಪರಿಸರ ಇಲಾಖೆ ಅಧಿಕಾರಿಗಳು ...ಸ್ಯರಾಗಿರುತ್ತಾರೆ. ಈ ಎಲ್ಲಾ ಇಲಾಖೆಯ ಅಧಿಕಾರಿಗಳಿಗೂ ...ಕ್ರಮ ಮರಳು ಗಣಿಗಾರಿಕೆ ವಿರುದ್ಧ ದೂರು ದಾಖಲಿಸುವ ...ಧಿಕಾರವಿರುತ್ತದೆ.

ಹೊಸ ಮರಳು ನೀತಿಯನ್ವಯ ಮೂರು ಅಡಿಗೂ ...ಚ್ಚು ಆಳದ ಮರಳುಗಾರಿಕೆ ನಡೆಸುವಂತಿಲ್ಲ. ಟ್ರಕ್‌ಗಳಲ್ಲಿ ... ಟನ್‌ಗಳಿಗಿಂತ ಹೆಚ್ಚು ತೂಕದ ಮರಳು ಸಾಗಿಸುವಂತಿಲ್ಲ ...ಗೂ ಹೊರ ರಾಜ್ಯಗಳಿಗೆ ಮರಳು ಸಾಗಣೆಯನ್ನು ...ಪೂರ್ಣ ನಿಷೇಧಿಸಲಾಗಿದೆ. ಪಕ್ಕದ ಜಿಲ್ಲೆಗಳಿಗೆ ಸಾಗಣೆ ...ಡಬೇಕೆಂದರೂ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ...ನ್ಮತಿ ಪಡೆಯಲೇಬೇಕು. ಈ ನಿಯಮಾವಳಿಗಳನ್ನು ...ಲ್ಲಂಘನೆ ಮಾಡಿದರೆ ಎರಡು ವರ್ಷ ಜೈಲು ಶಿಕ್ಷೆ, ...,000 ರೂ. ದಂಡ ವಿಧಿಸಲಾಗುವುದು ಎಂದು ಸಚಿವ ...ಹದೇವಪ್ಪ ಅಪ್ಪಣೆ ಕೊಡಿಸಿದ್ದಾರೆ.

ಮರಳು ವ್ಯವಹಾರದ ಸ್ವರೂಪವೇ ತೀರಾ ...ಸಂಘಟಿತವಾದುದು. ಸರ್ಕಾರದ ಆಯಕಟ್ಟಿನ ...ಗದಲ್ಲಿರುವ ಮಂದಿಯ ಕೈಯಲ್ಲಿ ಒಂದಷ್ಟು ವ್ಯವಹಾರ ...ೇಂದ್ರೀಕೃತಗೊಂಡಿರುವುದು ನಿಜವಾದರೂ ಒಂದು ಅಥವಾ ...ರಡು ಲಾರಿಗಳನ್ನಿಟ್ಟುಕೊಂಡು ಮರಳು ತುಂಬಿ ಸಾಗಿಸುವ ...ಣ್ಣಪುಟ್ಟ ವ್ಯವಹಾರಸ್ಥರೇ ಇಲ್ಲಿ ಹೆಚ್ಚಾಗಿದ್ದಾರೆ. ಬೆಂಗಳೂರಿನ ...ೊರವಲಯದಲ್ಲಿ ನಾನಾ ಯೋಜನೆಗಳಿಂದ ಭೂಮಿ ...ದುಕೊಂಡ ರೈತರು ಕೂಡ ತಮ್ಮ ಕೈಗೆ ಸಿಕ್ಕ ಹಣದಲ್ಲಿ ...ಂದೋ ಎರಡೋ ಲಾರಿ ಖರೀದಿಸಿ ಮರಳು ಸಾಗಾಣಿಕೆ ...ಲ್ಲಿ ತೊಡಗಿರುವ ಉದಾಹರಣೆಗಳಿವೆ.

ಈ ದಂಧೆಯಲ್ಲಿ ತೊಡಗಿರುವ ದೊಡ್ಡ ದೊಡ್ಡ ...ಮಿಂಗಿಲಗಳನ್ನು ಮುಟ್ಟುವ ಗೋಜಿಗೂ ಹೋಗದ ...ಧಿಕಾರಿಗಳು ಸಣ್ಣಪುಟ್ಟವರ ಮೇಲೆ ಮುಗಿಬಿದ್ದು ಕೇಸು ...ಡಿಯುತ್ತಾರೆ. ಸಾವಿರದಿಂದ ಹಿಡಿದು ಲಕ್ಷಗಳವರೆಗೆ ದಂಡ ...ಧಿಸಿದ್ದಾರೆ. ಪ್ರತಿನಿತ್ಯ ಸಾವಿರಗಟ್ಟಲೆ ಮಾಮೂಲಿಯಂತೂ ...ದ್ದೇ ಇರುತ್ತದೆ. ಅಧಿಕಾರಿಗಳ ಕಿರುಕುಳ, ಮಾಮೂಲಿ ದಂಧೆಯ ...ರಿಣಾಮವಾಗಿ ಸಾಲಸೋಲಕ್ಕೆ ಸಿಲುಕಿ ಲಾರಿಗಳನ್ನು ಅರ್ಧ ...ಲೆಗೆ ಮಾರಿಕೊಂಡು ಬೇರೆಯವರ ಬಳಿ ಚಾಲಕರಾಗಿ ...ಸ ಮಾಡುತ್ತಿರುವವರು ಅಥವಾ ಬೇರೆ ವೃತ್ತಿಗಳಲ್ಲಿ ...ೊಡಗಿಸಿಕೊಂಡಿರುವವರು ದಂಡಿಯಾಗಿ ಸಿಗುತ್ತಾರೆ.

ಅನಾದಿಯಿಂದಲೂ ಮರಳನ್ನೇ ತಿಂದು ತೇಗುತ್ತಿರುವ ...ಧಿಕಾರಿಗಳ ಕೈಯಲ್ಲಿ ಈ ಹೊಸ ಮರಳುನೀತಿ ...ುತ್ತೊಂದು ಪ್ರಬಲ ಅಸ್ತ್ರವಾಗಿದೆ. ಹೀಗಾಗಿ ಲಾರಿ ...ಮಾಲೀಕರು ಪದೇಪದೇ ಮುಷ್ಕರಕ್ಕೆ ಇಳಿಯುತ್ತಿದ್ದಾರೆ. ಈ ...ಾರಿಯಂತೂ ಇಡೀ ತಿಂಗಳು ಕಾಲ ಮುಷ್ಕರ ನಡೆಸಲು ...ದೇ ಬಲವಾದ ಕಾರಣ.

ಮರಳು ಲಾರಿ ಮುಷ್ಕರದಿಂದ ಹೆಚ್ಚಿನ ಹೊಡೆತ ಬೀಳುವುದು ಬಡ ಕೂಲಿ ಕಾರ್ಮಿಕರಿಗೆ. ಮರಳು ಕೊರತೆ ಉಂಟಾದರೆ ಲೋಡಿಂಗ್-ಅನ್‌ಲೋಡಿಂಗ್ ಕಾರ್ಮಿಕರಿಂದ ಹಿಡಿದು ಕಟ್ಟಡ ಕಾರ್ಮಿಕರವರೆಗೆ ಯಾವುದೇ ಭದ್ರತೆಯಿಲ್ಲದ ಹತ್ತಾರು ಲಕ್ಷ ದಿನಗೂಲಿ ಕಾರ್ಮಿಕರ ಹೊಟ್ಟೆಪಾಡಿಗೆ ಹೊಡೆತ ಬೀಳುವುದಂತೂ ಸತ್ಯ.

ಮತ್ತೊಂದು ಕಡೆ ಮರಳು ಬಿಕ್ಕಟ್ಟು ತೀವ್ರಗೊಂಡಂತೆ ತಮ್ಮ ಕನಸಿನ ಸೂರು ಕಟ್ಟಿಕೊಳ್ಳಲು ಹೆಣಗುತ್ತಿರುವ ಬಡಬಗ್ಗರು ಹಾಗೂ ಮಧ್ಯಮ ವರ್ಗದವರ ಮೇಲೆ ಮತ್ತಷ್ಟು ಹೊರೆ ಹೆಚ್ಚಾಗುತ್ತಿದೆ..

ಖಾಸಗಿ ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ ವೇತನದಾರರಾಗಿ ದುಡಿಯುತ್ತಿರುವವರು ಹಾಗೂ ಸಣ್ಣಪುಟ್ಟ ವ್ಯಾಪಾರದಲ್ಲಿ ತೊಡಗಿರುವವರು ಸಾಮಾನ್ಯವಾಗಿ ಬ್ಯಾಂಕುಗಳಿಂದ ಸಾಲ ಪಡೆದು ಮನೆ ಕಟ್ಟಲು ತೊಡಗುತ್ತಾರೆ. ಮರಳು ಬಿಕ್ಕಟ್ಟು ಈ ವರ್ಗದ ಮೇಲೆ ಮತ್ತಷ್ಟು ಹೊಡೆತ ನೀಡದಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ ಮೇಲಿದೆ.

ಈ ಮುಷ್ಕರ, ರಾಜೀ ಸಂಧಾನ ಏನೇ ಇದ್ದರೂ ಮರಳಿನ ಸಮಸ್ಯೆಗೆ ಇದಾವುದೂ ಶಾಶ್ವತ ಪರಿಹಾರವಲ್ಲ. ಯಾಕೆಂದರೆ ಒಟ್ಟಾರೆ ಲಭ್ಯವಿರುವ ಮರಳಿನ ಪ್ರಮಾಣ ಇಂದಿನ ಬೇಡಿಕೆಗೆ ಎಷ್ಟು ಮಾತ್ರಕ್ಕೂ ಸರಿಹೊಂದುವುದಿಲ್ಲ.

ಒಟ್ಟು ರಾಜ್ಯದಲ್ಲಿ ಈಗ 1,864 ಮರಳು ಬ್ಲಾಕ್‌ಗಳನ್ನು ಗುರುತಿಸಲಾಗಿದೆ. ಒಟ್ಟಾರೆ ರಾಜ್ಯದಲ್ಲಿ ಲಭ್ಯವಿರುವ ಮರಳು ವಾರ್ಷಿಕ ಒಂಭತ್ತು ದಶಲಕ್ಷ ಟನ್. ಆದರೆ ಬೇಡಿಕೆ ಇರುವುದು 23 ದಶಲಕ್ಷ ಟನ್‌ಗಳಷ್ಟು. ಇದು ಬರೀ ಊಹಾಪೋಹದ ಮಾತಲ್ಲ. ಇತ್ತೀಚೆಗೆ ಸದನದಲ್ಲಿ ಮುಖ್ಯಮಂತ್ರಿ ನೀಡಿರುವ ಹೇಳಿಕೆಯಲ್ಲಿ ದೃಢಪಟ್ಟಿರುವ ಅಂಶವಿದು.

ಇದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಲ್ಲ. ಇಡೀ ದೇಶದ ಸಮಸ್ಯೆ. ಮಹಾರಾಷ್ಟ್ರ, ತಮಿಳುನಾಡು, ಒರಿಸ್ಸಾ, ಕೇರಳ, ಗೋವಾ ಮುಂತಾದ ಹತ್ತಾರು ರಾಜ್ಯಗಳು ಇಂತಹದೇ ಸಮಸ್ಯೆಯನ್ನು ಎದುರಿಸುತ್ತಿವೆ. ಹೀಗಾಗಿ ಮರಳಿಗೆ ಪರಿಣಾಮಕಾರಿ ಪರ್ಯಾಯವನ್ನು ಹುಡುಕಿಕೊಳ್ಳಲು ವಿಜ್ಞಾನಿಗಳು ಕರೆ ಕೊಟ್ಟಿದ್ದಾರೆ. ನಮ್ಮಲ್ಲಿ ಹೇರಳವಾಗಿ ದೊರೆಯುವ ಗ್ರಾನೈಟ್ ಮತ್ತಿತರ ಕಲ್ಲುಗಳನ್ನು ಪುಡಿ ಮಾಡಿ ಮರಳಿನ ಬದಲಿಗೆ ಬಳಸುವ ವಿಧಾನದ ಮೇಲೆ ಹಲವು ಪ್ರಯೋಗಗಳು ನಡೆಯುತ್ತಿವೆ. ನಮ್ಮ ಸರ್ಕಾರಗಳು ಇಂಥಾ ನೂತನ ಪರ್ಯಾಯಗಳನ್ನು ಆವಿಷ್ಕಾರ ಮಾಡಿ, ಅವುಗಳನ್ನು ಜನಪ್ರಿಯಗೊಳಿಸುವತ್ತ ಇಚ್ಛಾಶಕ್ತಿ ತೋರಿದರೆ ಈ ಸಮಸ್ಯೆ ಒಂದು ಮಟ್ಟಿಗಾದರೂ ನಿವಾರಣೆಯಾಗಬಹುದು.

ಬರೀ ಮರಳು ನೀತಿಯನ್ನಷ್ಟೆ ನಂಬಿ ಕೂತಿರುವ ಸರ್ಕಾರ ಹಾವೂ ಸಾಯಲಿಲ್ಲ; ಕೋಲೂ ಮುರಿಯಲಿಲ್ಲ ಎಂಬಂಥ ಸ್ಥಿತಿಯಲ್ಲಿದೆ. ಈ ಸ್ಥಿತಿಯಿಂದ ಹೊರಬರುವುದು ಯಾವಾಗ?

● ದೊಡ್ಡಿಪಾಳ್ಯ ನರಸಿಂಹಮೂರ್ತಿ



ರಸ್ತೆಗಿಂತ ಎತ್ತರವಿರುವ ಮ್ಯಾನ್‌ಹೋಲ್

ಮಂಡ್ಯ

05 ◀◀

ಕಾಮಗಾರಿ ನಡೆಸಿದ ಶ್ರೀನಿವಾಸ್, ಸಂಪತ್, ಕೆ.ಆರ್.ಪೇಟೆ ಮಂಜುನಾಥ್ ಮೊದಲಾದ ಉಪಗುತ್ತಿಗೆದಾರರು ತಲೆ ಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿದೆ. ಮರಳು-ಧೂಳು ಎರಚಿ ಅಧಿಕಾರಿಗಳಿಗೂ ತಿನ್ನಿಸಿ ತಾವೂ ದುಂಡಗಾಗಬಹುದೆಂದು ಲೆಕ್ಕ ಹಾಕಿದ್ದ ಗುತ್ತಿಗೆದಾರರು ಹಣೆಹಣೆ ಚಚ್ಚಿಕೊಳ್ಳುತ್ತಿದ್ದಾರೆ.

ನಗರಪಾಲಿಕೆ ಹೆಗ್ಗಣಗಳು

24 ಕೋಟಿ ವೆಚ್ಚದ ನಗರೋತ್ಥಾನ ಕಾಮಗಾರಿಯಲ್ಲೂ ಭರ್ಜರಿ ರಾಜಕೀಯ ನಡೆದಿದೆ. ಆಯ್ದ ಕೆಲವು ನಗರಸಭಾ ಸದಸ್ಯರ ವಾರ್ಡಿಗೆ ಕೋಟ್ಯಾಂತರ ರೂ. ಪ್ಯಾಕೇಜ್ ನೀಡಲಾಗಿದೆ. ನಗರದ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿಗೆ ಗಮನ ನೀಡಿದ ಕೆಲ ನಗರಸಭಾ ಸದಸ್ಯರೇ ಪರ್ಸೆಂಟೇಜ್‌ಗಾಗಿ ಗುತ್ತಿಗೆದಾರನಿಗೆ ಕಾಟ ಕೊಟ್ಟ ನಿದರ್ಶನಗಳೂ ಇವೆ. ಮ್ಯಾನ್‌ಹೋಲ್ ಮುಚ್ಚದಿದ್ದರೂ ಪರವಾಗಿಲ್ಲ, ಜಲ್ಲಿ-ಟಾರು ಹಾಕದಿದ್ದರೂ ಪರವಾಗಿಲ್ಲ ನಮಗೆ ಬರುವ ಕಮಿಷನ್ ಕೊಟ್ಟರೆ ಸಾಕೆನ್ನುವ ಸದಸ್ಯರೇ ಇಷ್ಟೆಲ್ಲಾ ಅವಾಂತರದ ಆಯಸ್ಕಾಂತಗಳು! ಪ್ರತಿ ಸಾಮಾನ್ಯಸಭೆ ಸುಸೂತ್ರವಾಗಿ ನಡೆಯಲು, ಅಧ್ಯಕ್ಷರ ಪರ ವಕಾಲತ್ತು ವಹಿಸಲು ಕೆಲ ಸದಸ್ಯರಿಗೆ ಸಾವಿರಗಟ್ಟಲೆ ಹಣ ಕೊಡಬೇಕಾದ ಕೆಟ್ಟ ಸಂಪ್ರದಾಯವೂ ಇಲ್ಲಿ ಚಾಲ್ತಿಯಲ್ಲಿದೆ. ಇಲ್ಲದಿದ್ದರೆ ಅಂದಿನ ಸಭೆಯಲ್ಲಿ ದಾಂಧಲೆ ನಡೆಸುವುದು ಖಚಿತ. ಸಾಮಾನ್ಯ ಸಭೆಯಲ್ಲಿ ಅಭಿವೃದ್ಧಿ ವಿಚಾರಗಳ ಬಗ್ಗೆ ಏನೊಂದು ಮಾತನಾಡದೆ ಬರೀ ಉಪ್ಪಿಟ್ಟು, ಕಾಫಿ ಬಂದಾಗ ಮಾತ್ರ ಬಾಯಿ ತೆರೆಯುವ ಕೆಲ ಸದಸ್ಯರೂ ಕಾಮಗಾರಿಯ ಕಮಿಷನ್ ವಿಚಾರದಲ್ಲಿ ಬಾಯಿಬಿಟ್ಟು ಪಾಲು ಕೇಳುತ್ತಾರೆ.

ಲೋಕಾಯುಕ್ತ ದೂರಿನ ನಂತರ ಸ್ವಲ್ಪ ಎಚ್ಚೆತ್ತುಕೊಂಡಿರುವ ಜಿಲ್ಲಾಧಿಕಾರಿ ಬಿ.ಎನ್.ಕೃಷ್ಣಯ್ಯ, ಮೂರನೇ ಪಾರ್ಟಿ ಬೆಂಗಳೂರಿನ ಸಿವಿಲ್ ಟೆಕ್ನಾಲಜಿ ಇಂಡಿಯಾ ಕಾಮಗಾರಿ ತೃಪ್ತಿಕರವಾಗಿದೆ ಎಂದು ನೀಡಿದ್ದ ವರದಿಯನ್ನು ಹರಿದು ಮೂಲೆಗೆಸೆದು ಸರಿಯಾಗಿ ತಪಾಸಣೆ ಮಾಡಿ ವರದಿ ನೀಡುವಂತೆ ಆದೇಶಿಸಿದ್ದಾರೆ. ಸದ್ಯಕ್ಕಂತೂ ಎಲ್ಲಾ ಕಡೆ ಕಾಮಗಾರಿ ಸ್ತಬ್ಧವಾಗಿದ್ದು, ಅಷ್ಟರಮಟ್ಟಿಗೆ ಈ ಪ್ರಕರಣ ಸದ್ದು ಮಾಡಿದೆ.


'ರಸ್ತೆ ಕಾಮಗಾರಿ ಬಗ್ಗೆ ಸಾರ್ವಜನಿಕರೇ ಪ್ರಶಂಸೆ ವ್ಯಕ್ತಪಡಿಸಿದ್ದಾರೆ. ಯಾರೋ ಒಬ್ಬರು ಲೋಕಾಯುಕ್ತಕ್ಕೆ ದೂರು ಕೊಟ್ಟರೆಂದು ಮಾತ್ರಕ್ಕೆ ಕಾಮಗಾರಿ ಕಳಪೆ ಎಂದು ಹೇಳುವುದು ಸರಿಯಲ್ಲ' ಎಂದು ಆಯುಕ್ತರಿಗೆ ಬೋಧನೆ ಮಾಡಲು ಎಇಇ ಕರೀಗೌಡ ಮುಂದಾಗಿ ಹಿಗ್ಗಾ-ಮುಗ್ಗಾ ಬೈಸಿಕೊಂಡಿದ್ದೂ ಆಗಿದೆ. ಇದೇ ಮಾರ್ಚ್ ಅಂತ್ಯಕ್ಕೆ ನಿವೃತ್ತನಾಗಿ ಮನೆ ಸೇರಿಕೊಳ್ಳುವ ಕರೀಗೌಡರಿಗೆ ಅಷ್ಟರೊಳಗೆ ಸಿಕ್ಕಷ್ಟು ಬಾಚಿಕೊಳ್ಳುವ ಆತುರ ಹೆಚ್ಚಾದಂತಿದೆ. ಅಷ್ಟಲ್ಲದೆ ನಗರಸಭೆಗೆ ವಾರದ ಹಿಂದಷ್ಟೇ ಬಂದಿರುವ ಆಯುಕ್ತ ಶಶಿಕುಮಾರ್ ತನಗೆ ಗೊತ್ತಿಲ್ಲದೆ ಯಾವ ಕಾಮಗಾರಿಯೂ ನಡೆಯಕೂಡದೆಂದು ಎಚ್ಚರಿಕೆ ಇಂಜಿನಿಯರುಗಳಿಗೆ ರವಾನಿಸಿದ್ದಾರೆ. ನಗರಸಭೆಯಲ್ಲಿ ಕೆಲವು ಹೆಗ್ಗಣಗಳೇ ಸೇರಿಕೊಂಡಿದ್ದು ಆಯುಕ್ತ ಶಶಿಕುಮಾರ್ ಅವರ ಬಗ್ಗೆ ಎಚ್ಚರಿಕೆಯಿಂದ ಇರುವುದು ಸೂಕ್ತ.


ನಗರಾಭಿವೃದ್ಧಿ ಕೋಶದ ಎಇಇ ಬಿ.ನಾಗರಾಜು ಪಾಂಡವಪುರ ಪಟ್ಟಣ ಪಂಚಾಯತಿಯಲ್ಲಿ ಆಶ್ರಯ ಮನೆ ಯೋಜನೆ ಗೋಲ್‌ಮಾಲ್‌ನಲ್ಲಿ ರೆಡ್‌ಹ್ಯಾಂಡಾಗಿ ತಗುಲಿಕೊಂಡ ಆಸಾಮಿ. ಕೆಲಸದಿಂದಲೇ ವಜಾ ಆಗುವ ಸಂದರ್ಭದಲ್ಲಿ ಎಸ್.ಎಂ.ಕೃಷ್ಣರ ಕೃಪೆಯಿಂದ ಹಿಂಬಡ್ತಿ ಪಡೆದು ಕೆಲಸ ಉಳಿಸಿಕೊಂಡಂತವನು. ಶಾಸಕ ಪುಟ್ಟಣ್ಣಯ್ಯನವರ ಆಶೀರ್ವಾದವೇ ಬಿ.ನಾಗರಾಜನನ್ನು ನಗರಾಭಿವೃದ್ಧಿ ಕೋಶಕ್ಕೆ ಕರೆತಂದಿರುವುದು ಎಂಬ ಗುಸುಗುಸು ಹಬ್ಬಿದೆ. ಯೋಜನಾ ನಿರ್ದೇಶಕ ವೆಂಕಟರವಣರೆಡ್ಡಿಗೆ ನಗರೋತ್ಥಾನ ಕಾಮಗಾರಿಯ ಅವ್ಯವಹಾರಗಳ ಬಗ್ಗೆ ಗಮನವನ್ನೇ ಹರಿಸಿದಂತಿಲ್ಲ. ಗುತ್ತಿಗೆದಾರನ ಪರ ವಕಾಲತ್ತು ವಹಿಸಿರುವ ಎಇಇ ನಾಗರಾಜು ಬಗ್ಗೆ ಜಿಲ್ಲಾಧಿಕಾರಿಗಳು ಎಚ್ಚರ ವಹಿಸಬೇಕಿದೆ.


ಡಿಸಿ ಕೃಷ್ಣಯ್ಯ ಕ್ರಮ ಕೈಗೊಳ್ಳಲಿ


ಜಿಲ್ಲಾ ಪಂಚಾಯತ್, ಕಾವೇರಿ ನೀರಾವರಿ ನಿಗಮ, ಕೆಹೆಚ್‌ಬಿ, ಲೋಕೋಪಯೋಗಿ ಇಲಾಖೆ, ಪಂಚಾಯತ್‌ರಾಜ್ ಸೇರಿದಂತೆ ವಿವಿಧ ಇಲಾಖೆಗಳ ಮೂಲಕ ಮಾರ್ಚ್ ಅಂತ್ಯದ ವೇಳೆಗೆ ಬರೋಬ್ಬರಿ 400 ಕೋಟಿಗೂ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. ನಗರೋತ್ಥಾನ ಹಗರಣ ಬೆಳಕಿಗೆ ಬಂದನಂತರವಾದರೂ ಉಳಿದ ಕಾಮಗಾರಿಗಳು ಗುಣಮಟ್ಟದಿಂದ ನಡೆಯುವಂತಾಗಲಿ ಎಂಬುದು ಸಾರ್ವಜನಿಕರ ಅಪೇಕ್ಷೆ. ನಗರಸಭೆ ವ್ಯಾಪ್ತಿಯಲ್ಲಿ ನಡೆದಿರುವ ಕಳಪೆ ಕಾಮಗಾರಿಗಳ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಸಂಪೂರ್ಣ ಅಧಿಕಾರ ಜಿಲ್ಲಾಧಿಕಾರಿ ಕೃಷ್ಣಯ್ಯನವರಿಗಿದೆ. ಹಾಗಾಗಿ ಕಳಪೆ ಕಾಮಗಾರಿ ನಡೆಸಿರುವ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಮತ್ತೆ ಹೊಸದಾಗಿ ಕಾಮಗಾರಿ ನಡೆಸುವಂತೆ ಆದೇಶ ನೀಡಲಿ. ಇಲ್ಲವಾದರೆ ಈ ಹಗರಣದಲ್ಲಿ ಅವರ ಪಾತ್ರವೂ ಇದೆಯೆಂಬ ಸಂದೇಶ ಜನರಿಗೆ ರವಾನೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಇನ್ನು ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಕೃಪೆಯಿಂದ ನಗರಸಭೆ ಅಧ್ಯಕ್ಷನಾಗಿರುವ ಬಿ.ಸಿದ್ದರಾಜು 'ನಗರವನ್ನು ಹಂಗ್ ಮಾಡ್ತೀನಿ, ಹಿಂಗ್ ಮಾಡ್ತೀನಿ' ಎಂಬಿತ್ಯಾದಿ ಶಪಥ ಗೈದಿದ್ದರು. ಆದರೆ ಅವರೂ ಈ ಹಗರಣದ ಬಗ್ಗೆ ಕಿಮ್ಮತ್ತಿಲ್ಲ. ಮಂಡ್ಯ ನಗರದ ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಈ ಗೋಲ್‌ಮಾಲ್ ಕಾಮಗಾರಿಯನ್ನು ನೋಡಿಯೂ ನೋಡದಂತಿರುವ ಅಧ್ಯಕ್ಷ ಸಿದ್ದರಾಜು ಬಗ್ಗೆಯೂ ಜನ ಅನುಮಾನಿಸುವಂತಾಗಿದೆ. ●


ಪಾಪಣ್ಣ


ಮುನಿವೆಂಕಟಪ್ಪ


ಮುನಿಸ್ವಾಮಿ


ಕೃಷ್ಣಪ್ಪ


ರಾಧಮ್ಮ

ಕೋಲಾರದಲ್ಲಿ ಜಾತಿಯ ಭೂತ ನರ್ತನ

ಭಾರತ ದೇಶ ಸ್ವತಂತ್ರ ಸಂವಿಧಾನವನ್ನು ಅಳವಡಿಸಿಕೊಂಡ ದಿನವಾದ ಜನವರಿ 26ರಂದು ಗಣರಾಜ್ಯೋತ್ಸವದ ಆಚರಣೆ ಸುದ್ದಿಯ ಜೊತೆಗೆ, ಕೋಲಾರ ಜಿಲ್ಲೆಯ ಕಗ್ಗನಹಳ್ಳಿಯಲ್ಲಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ ಹಾಕಿದ ಸುದ್ದಿಯೂ ವರದಿಯಾಗಿದೆ. ಸ್ವತಂತ್ರ ಕಾನೂನು, ಸಂವಿಧಾನಗಳನ್ನು ಅಳವಡಿಸಿಕೊಂಡ 64 ವರ್ಷಗಳ ನಂತರವೂ ಜಾತಿ ಸಮಸ್ಯೆ ನಮ್ಮ ಸಮಾಜವನ್ನು ಭೂತದಂತೆ ಕಾಡುತ್ತಿದೆ ಎಂಬ ಸತ್ಯ ಮತ್ತೊಮ್ಮೆ ಜಾಹೀರಾಗಿದೆ.

ಈ ಕಗ್ಗನಹಳ್ಳಿಯ ದಲಿತರ ಬಹಿಷ್ಕಾರಕ್ಕೆ ಕಾರಣವಾದ ಘಟನಾವಳಿಗಳನ್ನು ನೋಡೋಣ.

ಕಗ್ಗನಹಳ್ಳಿ ಎಂಬ ಊರು ಮುಳಬಾಗಲು ತಾಲೂಕಿನ ಗಡ್ಡೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 4ರಿಂದ ಕೇವಲ ಎರಡು ಕಿ.ಮೀ ಅಂತರದಲ್ಲಿದೆ. ಇಲ್ಲಿ ಸುಮಾರು 120 ಮನೆಗಳಿವೆ. ಅದರಲ್ಲಿ ರೆಡ್ಡಿ ಜಾತಿಗೆ ಸೇರಿದ 30 ಕುಟುಂಬಗಳಿವೆ. ಅನಾದಿ ಕಾಲದಿಂದಲೂ ಇಲ್ಲಿ ಗೌಡಿಕೆ ಮಾಡಿಕೊಂಡು ಬಂದವರು ರೆಡ್ಡಿಗಳೇ. ಇದು ಬಿಟ್ಟರೆ ಎಸ್‌ಟಿ ಕೆಟಗರಿಗೆ ಸೇರುವ ನಾಯಕ ಜಾತಿಯ ಸುಮಾರು 60 ಕುಟುಂಬಗಳಿವೆ. ಸಂಖ್ಯಾಬಲ ಹೆಚ್ಚಾಗಿರುವುದರಿಂದ ನಾಯಕ ಜಾತಿಯವರಿಗೆ ಊರಿನ ರಾಜಕೀಯದಲ್ಲಿ ಮುಖ್ಯಪಾತ್ರವಿದೆ. ಮೂರನೇ ದೊಡ್ಡಜಾತಿ ಪರಿಶಿಷ್ಟ ಜಾತಿ. ತೆಲುಗಿನಲ್ಲಿ ಮಾಲ ಎಂದು ಕರೆಯಲಾಗುವ ಈ ಜಾತಿಯ 16 ಕುಟುಂಬಗಳಿವೆ. ಈ ಮೂರು ಜಾತಿಗಳನ್ನು ಹೊರತುಪಡಿಸಿದರೆ ಇತರೆ ಹಿಂದುಳಿದ ಜಾತಿಗಳಿಗೆ ಸೇರಿದ ಕೆಲವು ಕುಟುಂಬಗಳಿವೆ.

ಕಗ್ಗನಹಳ್ಳಿ ಊರಿನಲ್ಲಿ ಸರ್ಕಾರಿ ಶಾಲೆಯಿದೆ. ಇಲ್ಲಿ ಮಕ್ಕಳಿಗೆ ಬಿಸಿಯೂಟ ತಯಾರಿಸುವ ಅಡುಗೆ ಸಹಾಯಕರ ಹುದ್ದೆಯೊಂದು ಖಾಲಿಯಾಗಿತ್ತು. ನಿಯಮಾವಳಿಯಂತೆ ಈ ಹುದ್ದೆ ಪರಿಶಿಷ್ಟ ಜಾತಿಯವರಿಗೆ ಮೀಸಲಾಗಿತ್ತು. ಶಾಲಾಭಿವೃದ್ಧಿ ಸಮಿತಿಯ ಸದಸ್ಯರಾಗಿರುವ ದಲಿತ ಮುನಿವೆಂಕಟಪ್ಪನ ಮೂಲಕ ವಿಷಯ ತಿಳಿದ ರಾಧಮ್ಮ ಎಂಬ ಎಸ್‌ಸಿ ಮಹಿಳೆ ಈ ಕೆಲಸಕ್ಕೆ ಅರ್ಜಿ ಹಾಕಿದಳು.





ಕಾನೂನು, ಸಂವಿಧಾನ ಏನು ಹೇಳಿದರೇನು? ಕಗ್ಗನಹಳ್ಳಿಯ ಜಾತಿವಾದಿ ಕಾನೂನೇ ಬೇರೆ. ಒಬ್ಬ ದಲಿತ ಮಹಿಳೆ ಮಾಡಿದ ಅಡುಗೆಯನ್ನು ತಮ್ಮ ಮಕ್ಕಳು ಊಟ ಮಾಡುವುದನ್ನು ಮೇಲ್ಜಾತಿಯವರಿಗೆ ಸಹಿಸಲು ಆಗಲಿಲ್ಲ. ಹಾಗಾಗಿ ಊರಿನ ಮುಖಂಡ ಶಂಕರ ರೆಡ್ಡಿ, ಎಸ್‌ಡಿಎಂಸಿ ಅಧ್ಯಕ್ಷ ಸುರೇಶ್‌ಬಾಬು ಮುಂತಾದ ಕೆಲವು ಪಟ್ಟಭದ್ರ ಶಕ್ತಿಗಳು ಚಿತಾವಣೆ ನಡೆಸಿ, ಬಲಾಢ್ಯ ಜಾತಿಯವರನ್ನೆಲ್ಲಾ ಸಭೆ ಸೇರಿಸಿ ಯಾವ ಕಾರಣಕ್ಕೂ ದಲಿತ ರಾಧಮ್ಮಳನ್ನು ಕೆಲಸಕ್ಕೆ ತೆಗೆದುಕೊಳ್ಳಬಾರದೆಂದು ತೀರ್ಮಾನಿಸಿದರು. ರಾಧಮ್ಮ ತನ್ನ ಅರ್ಜಿಯನ್ನು ವಾಪಸ್ ಪಡೆಯಬೇಕೆಂದು ಕಟ್ಟಪ್ಪಣೆ ಹೊರಡಿಸಿದರು.

ಆದರೆ ಊರಿನ ಗ್ರಾಮ ಪಂಚಾಯ್ತಿ ಸದಸ್ಯರಾದ ಮುನಿಸ್ವಾಮಿ ಎಂಬುವವರು ರಾಧಮ್ಮನ ಬೆಂಬಲಕ್ಕೆ ನಿಂತರು. ಮುನಿಸ್ವಾಮಿ ಕೂಡ ದಲಿತರಾಗಿದ್ದು ಸ್ವಾಭಿಮಾನದಿಂದ ಬದುಕುತ್ತಿರುವ ವ್ಯಕ್ತಿ. ದೂರು ಮೇಲಧಿಕಾರಿಗಳವರೆಗೂ ಹೋಯ್ತು. ಜನವರಿ ಎರಡನೆ ವಾರದಲ್ಲಿ ಶಾಲೆಯಲ್ಲಿ ಎಸ್‌ಡಿಎಂಸಿ ಸಭೆ ನಡೆಯಿತು. ಆ ಸಭೆಯಲ್ಲಿ ಪಂಚಾಯ್ತಿ ಪಿಡಿಒ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಲಕ್ಷ್ಮಯ್ಯ ಮತ್ತು ಪಂಚಾಯತಿ ಕಾರ್ಯದರ್ಶಿ ಮುಂತಾದವರು ಇದ್ದರು. ಆ ಸಭೆಗೆ ರಾಧಮ್ಮ ಮತ್ತು ಆಕೆಯ ಜೊತೆಗೆ ಇನ್ನು ಇಬ್ಬರು ಹೋಗಿದ್ದರು. ಮೇಲ್ಜಾತಿಯ ಸುಮಾರು 50 ಜನ ಬಂದು ಅಡುಗೆ ಕೆಲಸಕ್ಕೆ ದಲಿತ ಮಹಿಳೆಯನ್ನು ಕೆಲಸಕ್ಕೆ ಸೇರಿಸಿಕೊಳ್ಳಬಾರದೆಂದು ಗದ್ದಲವೆಬ್ಬಿಸಿದರು. "ಮಾಲೋಳ್ಳು ವಂಟ ಚೇಸ್ತೇ ಮಾ ಪಿಲ್ಲಲು ತಿನಾಲಾ?" (ಹೊಲೆಯರು ಮಾಡಿದ ಅಡುಗೆಯನ್ನು ನಮ್ಮ ಹುಡುಗರು ತಿನ್ನಬೇಕೆ?) ಎಂದು ಅರ್ಜಿ ಹಾಕಿರುವ ರಾಧಮ್ಮಳ ವಿರುದ್ಧ ಮುಗಿಬಿದ್ದು ವಾಚಾಮಗೋಚರ ನಿಂದಿಸಿದರು. ಅರ್ಜಿ ವಾಪಸ್ ತೆಗೆದುಕೊಳ್ಳದಿದ್ದರೆ ಪರಿಣಾಮ ನೆಟ್ಟಗಿರೋದಿಲ್ಲ ಅಂತಾ ಬೆದರಿಕೆ ಹಾಕಿದರು. ಇದೆಲ್ಲಾ ನಡೆದದ್ದು ಸರ್ಕಾರಿ ಅಧಿಕಾರಿಗಳ ಸಮ್ಮುಖದಲ್ಲೇ.


ಶಾಲೆಯಲ್ಲಿ ನಡೆದ ಘಟನೆಯಿಂದ ಕಂಗಾಲಾದ ರಾಧಮ್ಮರವರ ಕುಟುಂಬದವರು ಜನವರಿ 20 ರಂದು ಹತ್ತಿರದ ನಂಗಲಿ ಪೊಲೀಸ್ ಠಾಣೆಗೆ ಕಂಪ್ಲೈಂಟ್ ಕೊಟ್ಟು ತಮಗೆ ರಕ್ಷಣೆ ನೀಡಬೇಕೆಂದು ದೂರು ನೀಡಿದರು.

ಈ ವಿವಾದದಲ್ಲಿ ಮತ್ತೊಂದು ಗಮನಾರ್ಹ ಸಂಗತಿಯೂ ಇದೆ. ಈ ಶಾಲೆಯ ಮುಖ್ಯೋಪಾಧ್ಯಾಯ ಸುಬ್ರಮಣ್ಯರೆಡ್ಡಿ ಎಂಬಾತನೂ ರೆಡ್ಡಿ ಜಾತಿಗೆ ಸೇರಿದವರೆ. ಈ ಮಹಾನುಭಾವ ಮೊದಲಿಗೆ ರಾಧಮ್ಮಳ ಅರ್ಜಿಯನ್ನು ತೆಗೆದುಕೊಳ್ಳಲು ನಿರಾಕರಿಸಿದ್ದ, ರಾಧಮ್ಮ ಹಠ ಬಿಡದೇ ಒತ್ತಾಯ ಮಾಡಿ ಅರ್ಜಿ ಕೊಟ್ಟು ಬರಬೇಕಾಯ್ತು. ಈ





ಮುಚ್ಚಳಿಕೆ ಪತ್ರ


2nd Addl. Dist. & Sessions Judge, Kolar, Kolar Dist.
1. Kolar — Mulbagal Circle — Nangli PS
0008/2014 — 26/01/2014
3. (a) Tuesday — 21/01/2014 — 21/01/2014
00:00:00 — 00:00:00
(b) 26/01/2014 16:15:00 — Written
(d) 16:15:00
4. (a) KAGGANAHALLI VILLAGE, MULBAGAL TALUK, Kolar, Karnataka.
(b) 6 KM EAST TO PS
(c) Kagganahally — 02
5.
(a) NAGABUSHANA — MUNISWAMY
(b) 30
(d) Hindu — (e) ADI KARNATAKA
(i) India
(k) KAGGANAHALLI VILLAGE, MULBAGAL TALUK, Kolar, Karnataka

1

ದಲಿತರ ಮೇಲಿನ ದೌರ್ಜನ್ಯಕ್ಕೆ ಶೇಕಡ ಒಂದರಷ್ಟೂ ಶಿಕ್ಷೆಯಿಲ್ಲ

ದಲಿತರ ಮೇಲಿನ ದೌರ್ಜನ್ಯಗಳಿಗೆ ಸಂಬಂಧಿಸಿದ ಆಘಾತಕಾರಿ ಅಂಶವೊಂದು ಇತ್ತೀಚಿನ ವಿಧಾನಸಭೆ ಚರ್ಚೆಯಲ್ಲಿ ಹೊರಬಿದ್ದಿದೆ. ಅದೇನೆಂದರೆ 2013ನೇ ಸಾಲಿನಲ್ಲಿ ದಾಖಲಾದ ಪರಿಶಿಷ್ಟ ಜಾತಿ/ಪಂಗಡದ ಮೇಲೆ ನಡೆದ ದೌರ್ಜನ್ಯಗಳ ಸಂಖ್ಯೆ 1947. ಅದರಲ್ಲಿ ಶಿಕ್ಷೆಯಾಗಿದ್ದು ಕೇವಲ 14 ಪ್ರಕರಣಗಳಲ್ಲಿ ಮಾತ್ರ. ಗೃಹ ಸಚಿವ ಕೆ.ಜೆ. ಜಾರ್ಜ್ ಸದನದಲ್ಲಿ ಪ್ರಶ್ನೆಯೊಂದಕ್ಕೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಅಂಶ ಬಹಿರಂಗಗೊಂಡಿದೆ.

ಜಿಲ್ಲಾವಾರು ಪ್ರಕರಣಗಳ ವಿವರ ಹೀಗಿದೆ.

ಬೆಂಗಳೂರು ನಗರ - 125, ಕೋಲಾರ - 110, ತುಮಕೂರು - 105, ಬೆಂಗಳೂರು ಜಿಲ್ಲೆ - 95, ಗುಲ್ಬರ್ಗ - 94, ರಾಯಚೂರು - 93, ಯಾದಗಿರಿ - 83, ರಾಮನಗರ - 80 ಹೀಗೇ ಪಟ್ಟಿ ಮುಂದುವರೆಯುತ್ತದೆ.

ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಟ್ಟು 46 ಪ್ರಕರಣಗಳು ದಾಖಲಾಗಿದ್ದು ಅವುಗಳ ಪೈಕಿ 14 ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಯಾಗಿದೆ. ಉಳಿದ ಯಾವುದೇ ಜಿಲ್ಲೆಯಲ್ಲಿ ಶಿಕ್ಷೆಯಾಗಿಲ್ಲ.

ಪರಿಸ್ಥಿತಿ ಹೀಗೆ ಮುಂದುವರೆದರೆ ದಲಿತರ ಮೇಲಿನ ದೌರ್ಜನ್ಯಗಳಿಗೆ ಕಡಿವಾಣ ಬೀಳುವುದಾದರೂ ಹೇಗೆ?

...ವಲ್ಲಿ ಶಾಲೆಯ ಎಚ್‌ಎಂ ಸುಬ್ರಮಣ್ಯರೆಡ್ಡಿಯದೂ ...ವಿದೆ ಎಂಬ ಗುಮಾನಿ ದಲಿತರಲ್ಲಿ ಮೂಡಿದೆ.

ಊರಿನಲ್ಲಿ ಸಂಕ್ರಾಂತಿ ಹಬ್ಬವನ್ನು ಆಚರಿಸುವಾಗ ...ಡರೆಲ್ಲಾ ಸೇರಿ ದಿನವನ್ನು ಗೊತ್ತು ಮಾಡುವುದು ... ಅದರಂತೆ ಜನವರಿ 21 ರಂದು ಸಂಕ್ರಾಂತಿ ...ಗದಿಯಾಗಿತ್ತು. ಈ ಹಬ್ಬದ ಆಚರಣೆಗೆ ಗ್ರಾಮ ...ಯ್ತಿ ಸದಸ್ಯ ಮುನಿಸ್ವಾಮಿ, ರಾಧಮ್ಮಳ ತಂದೆ ಕೃಷ್ಣಪ್ಪ ...ಎಂಪಿ ಸದಸ್ಯರಾಗಿದ್ದ ಮುನಿವೆಂಕಟಪ್ಪ ಮತ್ತು ...ರಿಗೂ ಬೆಂಬಲವಾಗಿ ನಿಂತ ಪಾಪಣ್ಣ ಎಂಬ ... ಮಂದಿಯ ದಲಿತ ಕುಟುಂಬಗಳನ್ನು ...ಕೊಳ್ಳಬಾರದೆಂದು ಪುಢಾರಿ ಶಂಕರ ರೆಡ್ಡಿ ಅಂಡ್ ... ತೀರ್ಮಾನಿಸಿಬಿಟ್ಟಿತು.

ವಿಷಯ ತಿಳಿದ ಈ ನಾಲ್ಕು ಕುಟುಂಬಗಳು ಮಧ್ಯಾಹ್ನ 3 ಗಂಟೆಗೆ ತಮ್ಮ ದನಗಳನ್ನು ...ದಾಚೆಯಿರುವ ಗಂಗಮ್ಮನ ಗುಡಿಗೆ ಒಯ್ದು ...ವಾಗಿ ಪೂಜೆ ಮಾಡಿಕೊಂಡು ಬಂದರು.

...ವರೆ ಜಾತಿಯ ಮಲವನ್ನೆ ತಲೆಯ ತುಂಬಾ ...ಕೊಂಡಿರುವ ಶಂಕರ ರೆಡ್ಡಿಯ ದುಷ್ಟಕೂಟ ಅಲ್ಲಿಗೆ ...ವಾಗಲಿಲ್ಲ. ಮೇಲುಜಾತಿಯವರ ಹಸುಗಳಿಗಿಂತ ...ು ದಲಿತರ ಹಸುಗಳಿಗೆ ಪೂಜೆ ಮಾಡಿ ತೋರಣ ...ದ್ದಾರೆಂದು ಹೊಸ ಖ್ಯಾತೆ ತೆಗೆದು, ಅದಕ್ಕೆ ...ಾದವರಿಗೆ ತಮ್ಮದೇ ಖಾಪ್ ಪಂಚಾಯ್ತಿಯಲ್ಲಿ ಹೊರಡಿಸಿಬಿಟ್ಟರು.

...ಕ್ರಾಂತಿ ಹಬ್ಬಕ್ಕೆಂದು ಕಟ್ಟಲಾಗಿದ್ದ ಧ್ವನಿವರ್ಧಕದಲ್ಲಿ ...7 ಗಂಟೆಗೆ ಶಂಕರರೆಡ್ಡಿಯ ಖಾಪ್ ಪಂಚಾಯ್ತಿ ...ನವನ್ನು ಬಹಿರಂಗವಾಗಿ ಸಾರಲಾಯ್ತು. ಈ ನಾಲ್ಕು ...ಟುಂಬಗಳಿಗೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ ...ಅನೌನ್ಸ್ ಮಾಡಿದರು. ಈ ಕುಟುಂಬಗಳ ಜೊತೆ ... ಮಾತನಾಡಬಾರದು. ಮಾತನಾಡಿದ್ರೆ 501ರೂ ...ಈ ನಾಲ್ಕು ದಲಿತ ಕುಟುಂಬಗಳಿಗೆ ಅಂಗಡಿಯಲ್ಲಿ ...ದೇ ವಸ್ತು ಕೊಡಬಾರದು. ಹಾಗೇನಾದರೂ ಕೊಟ್ಟರೆ ...ರೂ. ದಂಡ. ಈ ಕುಟುಂಬಗಳಿಗೆ ಊರಿನಲ್ಲಿ ...ಕೊಡಬಾರದು, ಕೊಟ್ಟವರಿಗೆ 1001 ರೂ. ದಂಡ ... ಅನೌನ್ಸ್ ಮಾಡಲಾಯ್ತು.

ಸಾಮಾಜಿಕ ಬಹಿಷ್ಕಾರ ಸಂಕ್ರಾಂತಿ ಹಬ್ಬದಂದು ...ಿಂದ ಜಾರಿಯಾಯಿತು. ಇದರ ಅತ್ಯಂತ ...ಾಮ ಉಂಟಾಗಿದ್ದು ಕುಡಿಯುವ ನೀರಿಗಾಗಿ. ... ಬೀದಿಯಲ್ಲಿ ಒಂದು ಸಾರ್ವಜನಿಕ ನಲ್ಲಿಯಿದೆ. ... ವಾರಕ್ಕೊಮ್ಮೆ ನೀರು ಬಂದರೆ ಹೆಚ್ಚು. ಹಾಗಾಗಿ ...ಲಿತ ಕುಟುಂಬಗಳು ಊರಿನ ಪಕ್ಕದ ತೋಟದ ...ವೆಲ್‌ಗಳನ್ನು ಆಶ್ರಯಿಸಿದ್ದರು. ಶಂಕರ್ ರೆಡ್ಡಿ ...ಕೂಟವನ್ನು ಎದುರು ಹಾಕಿಕೊಳ್ಳಲು ಇಷ್ಟವಿಲ್ಲದ ...ತರು ಈ ಕುಟುಂಬಗಳಿಗೆ ನೀರು ಕೊಡಲು ...ಿಸಿದರು. ಈ ನತದೃಷ್ಟ ಕುಟುಂಬಗಳು ನೀರಿಲ್ಲದೆ ...ದ ನಂಗಲಿ ಪಟ್ಟಣದಿಂದ ಅನ್ನ, ನೀರು ...ಕೊಳ್ಳಬೇಕಾದ ದುಸ್ಥಿತಿ ಎದುರಾಯಿತು.

...ಗೆ 3-4 ದಿನ ಕಳೆಯಿತು. ಈ ವಿಷಯ ಹೇಗೋ ...ಿಳಿಗೆ ಮುಟ್ಟಿ ಜನವರಿ 26ರ ಪತ್ರಿಕೆಗಳಲ್ಲಿ ದೊಡ್ಡ ...ಾಯಿತು. ಪತ್ರಿಕೆಗಳಲ್ಲಿ ಸುದ್ದಿಯಾದ ನಂತರವಷ್ಟೇ ...ಗೆ ಪೋಲೀಸ್ ಕಂಪ್ಲೈಂಟ್ ಕೊಡಲು ಈ ದಲಿತರು ...ಾದದ್ದು. ಅಂದರೆ ನಮ್ಮ ಪೋಲೀಸ್ ವ್ಯವಸ್ಥೆಯ ಮೇಲೆ ದೀನದಲಿತರು ಎಷ್ಟೊಂದು ವಿಶ್ವಾಸ ಇಟ್ಟಿದ್ದಾರೆಂಬುದು ಅರ್ಥವಾಗುತ್ತದೆ. ನಂತರ ಜಿಲ್ಲಾಡಳಿತ ಊರಿಗೆ ಭೇಟಿ ನೀಡಿ ಅಲ್ಲಿ ಒಂದು **Reserve van** ಹಾಕಿದೆ. ಸದ್ಯ ಪೋಲಿಸರು ಅಲ್ಲೇ ತಳವೂರಿದ್ದಾರೆ.

ಶಂಕರರೆಡ್ಡಿ, ಅಂಜನೇಯರೆಡ್ಡಿ, ನಾರಾಯಣಸ್ವಾಮಿ, ಶ್ರೀನಿವಾಸ, ಕೇಶವಪ್ಪ, ಸುರೇಶ, ಕೃಷ್ಣರೆಡ್ಡಿ ಮತ್ತು ಮುನಿವೆಂಕಟರೆಡ್ಡಿ ಎಂಬ 8 ಜನರ ಮೇಲೆ ಕೇಸು ದಾಖಲಾಗಿದೆ. ಇದರಲ್ಲಿ ಶಂಕರರೆಡ್ಡಿ ಮತ್ತು ಅಂಜನೇಯರೆಡ್ಡಿ ಅಪ್ಪ-ಮಗ. ನಾಯಕ ಜಾತಿಗೆ ಸೇರಿದ ನಾರಾಯಣಸ್ವಾಮಿ ಮತ್ತು ಶ್ರೀನಿವಾಸ್ ಅಣ್ಣ-ತಮ್ಮಂದಿರು. ಈ ಎಂಟು ಜನ ಆರೋಪಿಗಳು ಮೂರು ದಿನಗಳ ಕಾಲ ತಲೆ ಮರೆಸಿಕೊಳ್ಳುವ ನಾಟಕವಾಡಿ ಕೊನೆಗೆ ಕೋರ್ಟಿಗೆ ಶರಣಾಗಿದ್ದಾರೆ.

ಜಾತಿವಾದ ಕ್ರಿಮಿನಲ್ ಹಿನ್ನೆಲೆ

ಶಂಕರರೆಡ್ಡಿ ಎಂಬುವವನೇ ಈ ಇಡೀ ಪ್ರಕರಣದಲ್ಲಿ ನಂಬರ್ ಒನ್ ಆರೋಪಿ. ಸುಮಾರು 15 ವರ್ಷಗಳಿಂದ ಊರಿನ ರಾಜಕೀಯವನ್ನು ನಿಯಂತ್ರಣದಲ್ಲಿಟ್ಟು ಕೊಂಡಿರುವುದು ಇದೇ ಆಸಾಮಿ. ಎಂಎಲ್‌ಎ, ಎಂಪಿಗಳ ಬಾಲಂಗೋಚಿಯಂತೆ ಸುತ್ತುವ ವ್ಯಕ್ತಿಯೂ ಈತನೇ. ಸರ್ಕಾರದ ಯಾವುದೇ ಕಾಮಗಾರಿ ಬಂದರೂ ಅದರಲ್ಲಿ ತಾನು ಹೇಗೆ ಲಾಭ ಮಾಡಿಕೊಳ್ಳಬೇಕೆಂಬ ವಿದ್ಯೆ ಈತನಿಗೆ ಕರಗತವಾಗಿದೆ.

ದೀನದಲಿತರನ್ನು ನಂಬಿಸಿ ಯಾಮಾರಿಸುವುದರಲ್ಲಿ ಈತ ಎತ್ತಿದ ಕೈ. ಒಂದು ಉದಾಹರಣೆ ನೋಡಿ. ಇಲ್ಲಿಗೆ 7-8 ವರ್ಷಗಳ ಹಿಂದೆ ಊರಿನ ದಲಿತರಿಗೆ ನೀರಾವರಿ ಸೌಲಭ್ಯ ಮಾಡಿಸಿಕೊಡುವುದಾಗಿ ನಂಬಿಸಿ, ಸುಮಾರು ಹತ್ತು ಜನರನ್ನು ನಂಗಲಿಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿಗೆ ಕರೆದುಕೊಂಡು ಹೋದ. ಆಗ ಅಲ್ಲಿನ ಬ್ಯಾಂಕ್ ಮ್ಯಾನೇಜರ್ ಆಗಿದ್ದವರು ಶಂಕರ್ ರೆಡ್ಡಿಯ ಸ್ವಜಾತಿ ಬಂಧು. ಆ ಮ್ಯಾನೇಜರ್‌ನನ್ನು ಬುಟ್ಟಿಗೆ ಹಾಕಿಕೊಂಡು ದಲಿತರ ಜಮೀನುಗಳನ್ನು ಅಡಮಾನ ಇಟ್ಟು ಲಕ್ಷಾಂತರ ರೂಪಾಯಿ ಸಾಲ ಎತ್ತಿಬಿಟ್ಟ. ಆ ರೆಡ್ಡಿ ಮ್ಯಾನೇಜರ್ ಮತ್ತು ಈತ ಇಬ್ಬರೂ ಸೇರಿ ಅಮಾಯಕ ದಲಿತರಿಗೆ ಅದರ ಸುಳಿವೂ ಗೊತ್ತಾಗದಂತೆ ಯಾಮಾರಿಸಿದ್ದರು.

ಆದರೆ ಕಳೆದ ವರ್ಷ ಬ್ಯಾಂಕ್ ಸಾಲ ಪಾವತಿ ಮಾಡುವಂತೆ ಅಮಾಯಕ ದಲಿತರಿಗೆ ನೋಟಿಸ್ ಮೇಲೆ ನೋಟಿಸ್ ಜಾರಿಯಾದಾಗಲೇ ಈತನ ಪಂಚರಂಗಿ ಮೋಸ ಬಯಲಾದದ್ದು. ಆಗಲೂ ತಪ್ಪಿಸಿಕೊಳ್ಳಲು ಹೆಣಗಾಡಿದ ಈ ಪಾಖಂಡಿ ಶಂಕರರೆಡ್ಡಿ ಕೊನೆಗೆ ವಿಧಿಯಿಲ್ಲದೆ ಸಾಲ ವಾಪಸ್ ಕಟ್ಟಲು ಒಪ್ಪಿಕೊಂಡಿದ್ದ. ಹೀಗೆ ದಲಿತರಿಗೆ ಮಾತ್ರವಲ್ಲದೆ ತನ್ನ ಸ್ವಜಾತಿಯವರಿಗೂ ಯಾಮಾರಿಸಿರುವ ಉದಾಹರಣೆಗಳೂ ಸಿಗುತ್ತವೆ. ಈತನ ದುಷ್ಟ ಕೃತ್ಯಕ್ಕೆ ಈತನ ಮಗ ಆಂಜನೇಯ ರೆಡ್ಡಿ ಸದಾ ಬೆಂಗಾವಲಾಗಿ ನಿಲ್ಲುತ್ತಿದ್ದಾನೆ.

ಈ ಪ್ರಕರಣದ ಇನ್ನಿಬ್ಬರು ಪ್ರಮುಖ ಆರೋಪಿಗಳು ನಾಯಕ ಜಾತಿಯ ಶ್ರೀನಿವಾಸ ಮತ್ತು ನಾರಾಯಣಸ್ವಾಮಿ ಎಂಬ ಅಣ್ಣತಮ್ಮಂದಿರು. ಇವರಿಗೆ ಒಟ್ಟು ಐದು ಮಂದಿ ಅಣ್ಣತಮ್ಮಂದಿರಿದ್ದಾರೆ. ಇವರದು ಊರಿನಲ್ಲಿ ಬಲಾಢ್ಯ ಗುಂಪು. ಸಣ್ಣಪುಟ್ಟ ವಿಚಾರಗಳಿಗೂ ತಮ್ಮ ಮೇಲಾಧಿಪತ್ಯ ಸ್ಥಾಪನೆಗಾಗಿ ಊರಿನವರ ಮೇಲೆ ಇವರ ದೌರ್ಜನ್ಯ ಮಾಮೂಲಿ ಸಂಗತಿ. ಅದರಲ್ಲೂ ತಮ್ಮದೇ ನಾಯಕ ಜಾತಿಯ ಅಸಹಾಯಕ ಮಂದಿಯ ಮೇಲೆ ದೌರ್ಜನ್ಯ ಮಾಡಿದ ಪ್ರಕರಣಗಳು ಕೋರ್ಟು ಮೆಟ್ಟಲೇರಿವೆ.

ಈ ಸೋದರರು ಎಂಥಾ ಖತರ್‌ನಾಕ್ ಆಸಾಮಿಗಳು ಎಂಬುದನ್ನು ಅರ್ಥ ಮಾಡಿಕೊಳ್ಳಲು ಸುಮಾರು ಒಂದೂವರೆ ವರ್ಷದ ಹಿಂದೆ ನಡೆದ ಘಟನೆ ನೋಡೋಣ. ಈ ಕುಟುಂಬಕ್ಕೆ ಒಟ್ಟು ಸುಮಾರು 25-30 ಎಕರೆ ಜಮೀನಿದೆ. ಇತ್ತೀಚೆಗೆ ತಮ್ಮ ಜಮೀನಿಗೆ ನೀರಾವರಿ ಸೌಲಭ್ಯ ಮಾಡಿಕೊಂಡಿದ್ದಾರೆ. ಇವರ ಜಮೀನಿನ ಪಕ್ಕದಲ್ಲಿ ಪಕ್ಕದ ಜಿ.ಮಾರಂಡಹಳ್ಳಿ ಎಂಬ ಊರಿನ ದಲಿತ ನಾರಾಯಣಪ್ಪ ಎಂಬುವವರ ಎರಡು ಎಕರೆ ಭೂಮಿಯಿತ್ತು. ಈ ಭೂಮಿಯ ಮೇಲೆ ಮೊದಲಿನಿಂದಲೂ ಕಣ್ಣು ಹಾಕಿದ್ದ ಈ ಕಿರಾತಕರು ಇದ್ದಕ್ಕಿದ್ದಂತೆ ಒಂದು ದಿನ ಜೆಸಿಬಿ ಯಂತ್ರಗಳಿಂದ ಆ ಹೊಲವನ್ನು ಮಟ್ಟ ಮಾಡಿಸಿ ತಮ್ಮ ವಶಕ್ಕೆ ತೆಗೆದುಕೊಂಡುಬಿಟ್ಟರು.

ವಿಷಯ ತಿಳಿದ ನಾರಾಯಣಪ್ಪ ಮತ್ತು ಬಂಧುಗಳು ಸದರಿ ಶ್ರೀನಿವಾಸನ ಮನೆಗೆ ವಿಚಾರಿಸಲೆಂದು ಬಂದಾಗ, ಮೊದಲೇ ಪೂರ್ವ ತಯಾರಿ ನಡೆಸಿದ್ದ ಪುಂಡರು ಕತ್ತಿ ಕಠಾರಿಗಳನ್ನು ಕೈಯಲ್ಲಿ ಹಿಡಿದು ಝಳಪಿಸುತ್ತಾ ಇನ್ನು ಮುಂದೆ ಆ ಜಮೀನಿನ ಸಹವಾಸಕ್ಕೆ ಬರಕೂಡದೆಂದು ಬೆದರಿಕೆ ಹಾಕಿದರು. ದಲಿತ ನಾರಾಯಣಪ್ಪನವರ ಮಗ ಮಂಜುನಾಥ್ ಎಂಬುವವರು ತಕ್ಕಮಟ್ಟಿಗೆ ವಿದ್ಯಾವಂತ, ಮಾತ್ರವಲ್ಲ ಡಿಎಸ್‌ಎಸ್ ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದವರು. ಅವರು ತಮ್ಮ ಮೊಬೈಲ್ ಫೋನ್‌ನಲ್ಲಿ ಈ ಪುಂಡರ ಅಟ್ಟಹಾಸವನ್ನು, ಕೊಲೆ ಬೆದರಿಕೆಯನ್ನು ಚಿತ್ರೀಕರಣ ಮಾಡಿಕೊಂಡು ಸೀದಾ ಜಿಲ್ಲಾ ಎಸ್‌ಪಿ ಕಚೇರಿಗೆ ಹೋಗಿ ಮೊಕದ್ದಮೆ ದಾಖಲು ಮಾಡಿದರು.

ಇಡೀ ಮುಳಬಾಗಿಲು ತಾಲೂಕಿನಲ್ಲಿ ಭಾರೀ ಸುದ್ದಿ ಮಾಡಿದ ಈ ಘಟನೆಯಿಂದ ವಿಚಲಿತರಾದ ಜಿಲ್ಲಾಡಳಿತ ಅನಿವಾರ್ಯವಾಗಿ ಈ ಪುಂಡ ಸೋದರರನ್ನು ಬಂಧಿಸಿ ಜೈಲಿಗೆ ಅಟ್ಟಬೇಕಾಯ್ತು, ತಿಂಗಳುಗಟ್ಟಲೆ ಜಾಮೀನು ಸಿಗದೆ ನಂತರ ಜಾಮೀನು ಪಡೆದು ಹೊರಬಂದ ಈ ಸೋದರರು ತಮ್ಮ ಪುಂಡ ಚಾಳಿಯನ್ನು ಇನ್ನೂ ಬಿಡದೆ ಬೇರೆಬೇರೆ ರೀತಿಯಲ್ಲಿ ಮುಂದುವರೆಸಿದ್ದಾರೆ.

ಇದೇ ಗ್ರಾಮದಲ್ಲಿ ಈ ಹಿಂದೆ 1987ರಲ್ಲಿ ಒಮ್ಮೆ ಮತ್ತು 1996ರಲ್ಲಿ ಮತ್ತೊಮ್ಮೆ ದಲಿತರ ಮೇಲೆ ದೌರ್ಜನ್ಯ ನಡೆದು ಕೇಸುಗಳು ದಾಖಲಾಗಿದ್ದವು. ಈ ಹಿಂದೆ ಕೇಸು ದಾಖಲಾದಾಗ ಇನ್ನು ಮುಂದೆ ಯಾವುದೇ ತಗಾದೆ ಬಂದರೂ ಊರಿನಲ್ಲೆ ಬಗೆಹರಿಸಿಕೊಳ್ಳಬೇಕೆಂಬ ತೀರ್ಮಾನ ಮಾಡಿ ಅದರಂತೆ ಒಂದು ಮುಚ್ಚಳಿಕೆ ಪತ್ರವನ್ನೂ ಬರೆಸಲಾಗಿತ್ತು. ಎಂಎಸ್‌ಡಬ್ಲ್ಯೂ ಪದವೀಧರನಾಗಿದ್ದ ಇದೇ ಊರಿನ ನಾಗಭೂಷಣ ಎಂಬ ದಲಿತ ಯುವಕ ಇಲ್ಲಿಗೆ ನಾಲ್ಕು ವರ್ಷಗಳ ಹಿಂದೆ ಪಕ್ಕದ ಊರಿನ ರುಕ್ಮಿಣಿ ಎಂಬ ನಾಯಕ ಜನಾಂಗದ ಯುವತಿಯನ್ನು ಪ್ರೇಮಿಸಿ ಮದುವೆಯಾಗಿದ್ದ. ಆ ಸಂದರ್ಭದಲ್ಲೂ ಜಾತಿ ವೈಷಮ್ಯ ತಲೆದೋರಿತ್ತು. ಹೀಗೆ ಈ ಕಗ್ಗನಹಳ್ಳಿ ಗ್ರಾಮದಲ್ಲಿ ಆಗಾಗ್ಗೆ ದಲಿತರ ಮೇಲೆ ದೌರ್ಜನ್ಯ ನಡೆಯುವುದು ಮಾಮೂಲಿ ಎಂಬಂತಾಗಿಬಿಟ್ಟಿದೆ.

ಕಗ್ಗನಹಳ್ಳಿ ಗ್ರಾಮದ ರಾಜಕೀಯವನ್ನು ಹಾಲಿ ಶಂಕರರೆಡ್ಡಿಯ ಕುಟುಂಬ ಮತ್ತು ಈ ಪುಂಡ ಸೋದರರ ಕುಟುಂಬವೇ ನಿಯಂತ್ರಣಕ್ಕೆ ತೆಗೆದುಕೊಂಡಿದೆ. ಈ ಪುಂಡರ ಗುಂಪನ್ನು ಮುಂದಿಟ್ಟುಕೊಂಡೇ ಶಂಕರರೆಡ್ಡಿ ತನ್ನ ಬೇಳೆ ಬೇಯಿಸಿಕೊಳ್ಳುತ್ತಿದ್ದಾನೆ.

ಬಹಳ ತಡವಾಗಿಯಾದರೂ ಎಚ್ಚೆತ್ತುಕೊಂಡಿರುವ ಆ ಕ್ಷೇತ್ರದ ಶಾಸಕ ಕೊತ್ತೂರು ಜಿ.ಮಂಜುನಾಥ್ ಮತ್ತು ಸಮಾಜ ಕಲ್ಯಾಣ ಸಚಿವ ಹೆಚ್.ಆಂಜನೇಯ ಗ್ರಾಮಕ್ಕೆ ಭೇಟಿ ನೀಡಿದ್ದಾರೆ. ಇದೆಲ್ಲದರ ಪರಿಣಾಮವಾಗಿ 4 ದಲಿತ ಕುಟುಂಬಗಳಿಗೆ ಪೋಲಿಸ್ ರಕ್ಷಣೆಯಲ್ಲಿ ನೀರು ಮತ್ತು ಅಂಗಡಿಯಲ್ಲಿ ದಿನಸಿ ಸಿಗುತ್ತಿದೆ. ಆದರೆ ಮುಂದಿನ ದಿನಗಳಲ್ಲಿ ಇದು ಯಾವ ರೂಪ ಪಡೆದುಕೊಳ್ಳುತ್ತದೋ ಯಾರು ಬಲ್ಲರು?

ಆಂಧ್ರದ ಗಡಿಭಾಗದಲ್ಲಿರುವ ಕೋಲಾರ ಜಿಲ್ಲೆ ದಲಿತರ ಮೇಲಿನ ದೌರ್ಜನ್ಯಗಳಿಗೆ ಮೊದಲಿನಿಂದಲೂ ಕುಖ್ಯಾತಿ. ಕಂಬಾಲಪಲ್ಲಿಯಲ್ಲಿ ದಲಿತರನ್ನು ಜೀವಂತವಾಗಿ ಸುಟ್ಟು ಹಾಕಿದ ಪ್ರಕರಣ ಇಡೀ ದೇಶವನ್ನೇ ಬೆಚ್ಚಿಬೀಳಿಸಿತ್ತು. ಆದರೆ ಈ ಪ್ರಕರಣದ ಬಗ್ಗೆ ಸ್ಥಳೀಯ ನ್ಯಾಯಾಲಯ ಇತ್ತೀಚೆಗೆ ತೀರ್ಪು ಪ್ರಕಟಿಸಿ ಎಲ್ಲಾ ಆರೋಪಿಗಳನ್ನು ಖುಲಾಸೆ ಮಾಡಿದೆ. ಬಂಗಾರಪೇಟೆ ತಾಲ್ಲೂಕಿನ ನಾಗಲಾಪಲ್ಲಿಯಲ್ಲಿ ದಲಿತ ಹೆಣ್ಣುಮಗಳ ಮೇಲೆ ನಡೆದ ಅತ್ಯಾಚಾರ ಪ್ರಕರಣ ಇನ್ನೂ ತಾರ್ಕಿಕ ಅಂತ್ಯ ಕಾಣದೆ ಕುಂಟುತ್ತಿದೆ. ಹೀಗೆ ತೀವ್ರ ಪ್ರತಿಭಟನೆಗಳು ನಡೆದು ಭಾರೀ ಸುದ್ದಿ ಮಾಡಿದ್ದ ಪ್ರಕರಣಗಳ ಕತೆಯೇ ಹೀಗಾದರೆ ಇನ್ನು ಹೊರಜಗತ್ತಿನ ಗಮನಕ್ಕೂ ಬಾರದಂತೆ ಮುಚ್ಚಿ ಹೋಗುವ ಪ್ರಕರಣಗಳಲ್ಲಿ ನ್ಯಾಯ ಸಿಗಬಹುದೆಂದು ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯವೇ?

● ಸಂಜಯ್

2

S.No	[illegible]					
1	SHANKARAREDDY S/O VENKATAREDDY, VOKKALIGA, KAGGANAHALLI VILLAGE MULABAGAL TQ	Accused	Adult	Male		
2	KESHAVAPPA S/O CHINNAPPAIAH, KAGGANAHALLI VILLAGE MULABAGAL	Accused	Adult	Male		
3	SURESH S/O [illegible] KAGGANAHALLI VILLAGE MULABAGAL	Accused	Adult	Male		
4	[illegible]	Accused	Adult	Male		
5	[illegible]	Accused	Adult	Male		
6	[illegible]	Accused	Adult	Male		
7	[illegible]	Accused	Adult	Male		
8	[illegible]	Accused	Adult	Male		

3

Sl.No	Property Type	Item description	Estimated Value (in Rs.)
1			

11 (a) Investigation

Yes

13. 20/01/2014 17:15:00

4

14. DEVARAJ, PC 525

SREEDHAR K.V - PSI
SUB INSPECTOR OF POLICE
Nangali Police Station
Mulbagal Taluk, Kolar Dist

Superintendent of Police/Commissioner of Police

ಡಬ್ಬಿಂಗ್
ಶಿವಣ್ಣ V/s ಅಂಬಿ



ಜನವರಿ 27ರ ಸೋಮವಾರಕ್ಕೆ ಡಬ್ಬಿಂಗ್ ಕುರಿತಂತೆ ತನ್ನ ಅಭಿಪ್ರಾಯ ಪ್ರಕಟಿಸುತ್ತೇನೆಂದ ಮಹಿ ಸಚಿವ ಅಂಬಿಗೆ ಅದೇನಾಯಿತೋ ಗೊತ್ತಿಲ್ಲ, ಇಡೀ ಕನ್ನಡ ಚಿತ್ರರಂಗ ಮರುದಿನ ಅಂದರೆ ಮಂಗಳವಾರದ ಹೊತ್ತಿಗೆ ಡಬ್ಬಿಂಗ್ ವಿರುದ್ಧ ಬೀದಿಗಿಳಿದಿತ್ತಾದರೂ ಅಂಬಿ ಮಾತ್ರ ಪತ್ತೆಯೇ ಇಲ್ಲ. ಅವರೊಬ್ಬ ಮಂತ್ರಿಯಾಗಿ ಮೆರವಣಿಗೆ ಪ್ರತಿಭಟನೆಯಲ್ಲಿ ಭಾಗವಹಿಸುವುದು ಥರವಲ್ಲ ಎಂದು ಯಾರೇನೇ ಹೇಳಲಿ. ಹಾಗಂತ ನಡೆದದ್ದು ಸರ್ಕಾರದ ವಿರುದ್ಧದ ಹೋರಾಟವಾಗಲಿ ಪ್ರತಿಭಟನೆಯಾಗಲಿ ಆಗಿರಲಿಲ್ಲ. ಅಷ್ಟಕ್ಕೂ ಮಂತ್ರಿಯಾಗಿ ಮೆರವಣಿಗೆಯಲ್ಲಿ ಭಾಗವಹಿಸಲು ಪ್ರೊಟೋಕಾಲ್ ಅರ್ಥಾತ್ ಶಿಷ್ಟಾಚಾರ ಅಡ್ಡ ಬಂತೆಂದುಕೊಂಡರೂ ಕನಿಷ್ಠ ಡಬ್ಬಿಂಗ್ ಕುರಿತಂತೆ ತನ್ನ ಅಭಿಪ್ರಾಯವನ್ನಾದರೂ ತಿಳಿಸಬಹುದಿತ್ತಲ್ಲವೆ?

ಎಂಥವರಿಗೂ ಅರ್ಥವಾಗುವ ಈ ಪ್ರಶ್ನೆ ಅಂಬಿಗೆ ಮಾತ್ರ ಅರ್ಥವಾಗುತ್ತಿಲ್ಲವೆಂದೇನಲ್ಲ, ಹಕೀಕತ್ತೇ ಬೇರೆಯಿದೆ. ಅದು ರಾಜ್ ಕುಟುಂಬದ ಯಜಮಾನಿಕೆ ವಿರುದ್ಧ ಅಂಬಿಗಿರುವ ಕ್ಲುಪ್ತ ಅಸಹನೆ ಮತ್ತು ಹೊಟ್ಟೆಕಿಚ್ಚು ಕೂಡ. ವಿಷ್ಣು ಬದುಕಿದ್ದಷ್ಟೂ ಕಾಲ ಕನ್ನಡ ಚಿತ್ರರಂಗದ ಅನಭಿಷಕ್ತ ಡಾನ್‌ನಂತೆ ಮೆರೆದ ಅಂಬಿಗೆ ಏಕಾಏಕಿ ರಾಜ್ ಫ್ಯಾಮಿಲಿ ಮತ್ತೆ ಮುಂಚೂಣಿಗೆ ಬರುತ್ತದೆಯೆಂದರೆ ಅಷ್ಟು ಸುಲಭಕ್ಕದು ಜೀರ್ಣವಾಗುವುದೂ ಕಷ್ಟವೆ!

ಜನವರಿ 27ರ ಸೋಮವಾರ ಬೆಳಗ್ಗೆ ಇಡೀ ಕನ್ನಡ ಚಿತ್ರರಂಗ ಡಬ್ಬಿಂಗ್ ವಿರುದ್ಧ ಬೀದಿಗಿಳಿದಿತ್ತು. ಸಹಸ್ರಾರು ಮಂದಿ ಕನ್ನಡ ಪರ ಅಭಿಮಾನಿಗಳಲ್ಲದೆ ವಾಟಾಳ್, ಸಾ.ರಾ. ಗೋವಿಂದು, ಪ್ರವೀಣ್ ಶೆಟ್ಟಿ, ಕನ್ನಡ ಸೇನೆ ಕುಮಾರ್, ದಲಿತ ನಾಯಕ ಎನ್. ಮೂರ್ತಿ- ಹೀಗೆ ರಕ್ಷಣಾ ವೇದಿಕೆ ನಾರಾಯಣ ಗೌಡ ಒಬ್ಬನನ್ನು ಬಿಟ್ಟು ಮಿಕ್ಕೆಲ್ಲ ಚಳವಳಿಗಾರರೂ ಡಬ್ಬಿಂಗ್ ವಿರುದ್ಧ ಬೀದಿಗಿಳಿದಿದ್ದರು. ಜೊತೆಗೆ ಸಿನಿಮಾ ರಂಗು. ಶಿವಣ್ಣ ಇದೆಲ್ಲದರ ನಾಯಕರಾಗಿ ಉದ್ಭವಿಸಿದ್ದರೆ ಅವರ ಬೆನ್ನಿಗೆ ನಿಂತದ್ದು ಕ್ರೇಜಿಸ್ಟಾರ್ ರವಿಚಂದ್ರನ್, ಭಾರತಿ, ಲೀಲಾವತಿ, ಮಾಲಾಶ್ರೀ, ಶ್ರುತಿ, ತಾರಾ, ಹೇಮಾಚೌಧುರಿ ಮತ್ತು ಇತರರು. ಜೊತೆಗೆ ಬಹುತೇಕ ಕಿರುತೆರೆ ನಟನಟಿಯರು ಸಾಕ್ಷಾತ್ ಸುದೀಪ್ ಮತ್ತು ದರ್ಶನ್ ವೇದಿಕೆಗೆ ಧಾವಿಸಬೇಕಾಯ್ತು!



ವಾಟಾಳ್ ನೇತೃತ್ವದ ಕನ್ನಡ ಹೋರಾಟಗಾರರು

ಸ್ಫೋಟಿಸಿದ ಆಕ್ರೋಶ

ದುನಿಯಾ ವಿಜಯ್, ಯಶ್, ಜಗ್ಗೇಶ್, ನೆನಪಿರಲಿ ಪ್ರೇಮ್, ಪುನೀತ್, ರಂಗಾಯಣ ರಘು, ಜೋಗಿ ಪ್ರೇಮ್, ನೀನಾಸಂ ಸತೀಶ್ ಆದಿಯಾಗಿ ಬಹುಪಾಲು ಹೀರೋಗಳಿಂದಲೇ ತುಂಬಿಹೋಗಿದ್ದ ಡಬ್ಬಿಂಗ್ ವಿರೋಧಿ ಪ್ರತಿಭಟನೆಯಲ್ಲಿ ಎದ್ದು ಕಂಡ ಒಂದೇ ಒಂದು ಸಂಗತಿಯೆಂದರೆ ಅದು ಅಂಬರೀಶ್ ಗೈರು. ರಾಜ್ ನಂತರ ಇಡೀ ಗಾಂಧಿನಗರದ ಮಟ್ಟಿಗೆ ಏಕಾಧಿಪತಿಯಂತಿದ್ದ ಅಂಬಿ ಇಂಥ ನಿರ್ಣಾಯಕ ಸನ್ನಿವೇಶದಲ್ಲೇಕೆ ತಲೆ ತಪ್ಪಿಸಿಕೊಳ್ಳುತ್ತಿದ್ದಾರೆ?

ತನ್ಮೂಲಕ ರಾಜ್ ಫ್ಯಾಮಿಲಿ ವಿರುದ್ಧದ ಅಂಬಿಯ ಶೀತಲಸಮರ ಕೂಡ ಸ್ಫೋಟಿಸಿದಂತಾಗಿದೆ. ಅಂಬಿಯ ಎಡಗೈ, ಬಲಗೈಯಂತಿರುವ ದರ್ಶನ್ ಮತ್ತು ಸುದೀಪ್ ಅರೆಮನಸ್ಸಿನಿಂದ ಪ್ರತಿಭಟನೆಗೆ ಬಂದದ್ದು, ನೆರೆದ ಕನ್ನಡ ಹೋರಾಟಗಾರರೆಲ್ಲ ಪರೋಕ್ಷವಾಗೇ ಅಂಬಿಯ ವಿರುದ್ಧ ಕಿಡಿಕಾರಿದ್ದು, ಶಿವಣ್ಣನ ಪರಮಾಪ್ತ ನಟರನೇಕರು ಹೆಸರೇಳದೆಯೇ ಅಂಬಿಯನ್ನು ಕೆಣಕಿದ್ದು, ಟಿವಿ ಮೀಡಿಯಾಗಳೆಲ್ಲ ಅಂಬಿಯ ಆ ವಿಚಾರವನ್ನೇ ದೊಡ್ಡದಾಗಿಸಿದ್ದು ಮತ್ತು ಇಡೀ ಚಿತ್ರರಂಗ ಅಂಬಿಯನ್ನು ಬದಿಗೊತ್ತಿ ಆ ಜಾಗಕ್ಕೆ ಶಿವಣ್ಣನನ್ನು ಹೊಸ ನಾಯಕನನ್ನಾಗಿಸಿಕೊಂಡದ್ದು ಮೇಲು ನೋಟಕ್ಕೆ ಬೂದಿ ಮುಚ್ಚಿದ ಕೆಂಡದಂತೆ ಕಾಣಬಹುದು. ಆದರೆ ಬೆಂಕಿಯ ಕಾವು ಮಾತ್ರ ಕಮ್ಮಿಯಾಗುತ್ತಿಲ್ಲ.

, ತಿಂಗಳ ಹಿಂದಷ್ಟೇ Competition Committe of India ಹೃತಿಕ್ ಅಭಿನಯದ ಕ್ರಿಷ್ ಚಿತ್ರದ ಡಬ್ಬಿಂಗ್ ಕುರಿತಂತೆ ಸುಪ್ರೀಂಕೋರ್ಟ್‌ಗೆ ತನ್ನ ವರದಿ ಸಲ್ಲಿಸಿದ್ದೇ ತಡ, ಒಂದೊಂದಾಗಿ ಡಬ್ಬಿಂಗ್ ಪರ ಶಕ್ತಿಗಳು ಬೀದಿಗಿಳಿಯಲಾರಂಭಿಸಿದ್ದವು. ಕೇವಲ ಮೂರು ವರ್ಷದ ಹಿಂದಷ್ಟೇ ತಾನು ಡಬ್ಬಿಂಗ್ ವಿರೋಧಿ, ಡಬ್ಬಿಂಗ್ ಕನ್ನಡಕ್ಕೆ ಮಾರಕ ಎಂದು ಬೊಬ್ಬೆಯಿಟ್ಟಿದ್ದ ರಾಜೇಂದ್ರ ಸಿಂಗ್ ಬಾಬು ಏಕಾಏಕಿ ಜ್ಞಾನೋದಯವಾದವರಂತೆ ತನ್ನ ನಿಲುವು ಬದಲಿಸಿ ಡಬ್ಬಿಂಗ್ ಪರ ವಕಾಲತ್ತಿಗಿಳಿದಾಗಲೇ ಷಡ್ಯಂತ್ರವೊಂದರ ವಾಸನೆ ಹತ್ತಿತ್ತು. ಬೆನ್ನಲ್ಲೇ ರಾಕ್‌ಲೈನ್, ಮುನಿರತ್ನಂ, ಕೆ. ಮಂಜು, ಸೂರಪ್ಪ ಬಾಬು, ಬಾಮಾ ಹರೀಶ್ ಥರದವರೆಲ್ಲ ಡಬ್ಬಿಂಗ್ ಪರ ಅಡ್ಡಗೋಡೆ ಮೇಲೆ ದೀಪವಿಡಲಾರಂಭಿಸಿದ್ದರು.

ಉಲ್ಟಾ ಹೊಡೆದ ಅಂಬಿ

ಬರುಬರುತ್ತ ಡಬ್ಬಿಂಗ್ ಪರ ವಾದವೊಂದು ದಟ್ಟವಾಗೇ ಹೊಗೆಯಾಡತೊಡಗಿದ್ದನ್ನು ಕಂಡು ಹುಷಾರಾದ ರಾಜ್ ಫ್ಯಾಮಿಲಿ ತನ್ನ ಬತ್ತಳಿಕೆಯನ್ನು ಅಣಿಯಾಗಿಸತೊಡಗಿತ್ತು. ಇನ್ನೇನು ಸುದೀಪ್ ಮತ್ತು ದರ್ಶನ್ ಕೂಡ ನಮ್ಮ ಜೊತೆಗಿದ್ದಾರೆಂದೇ ಶಿವಣ್ಣ ಹೇಳಿಕೆ ಕೊಟ್ಟದ್ದು ಕೂಡ ಅವರಿಗಿದ್ದ ಆತಂಕವೊಂದರ ಪರಿಣಾಮವಾಗಿತ್ತು. ಅದು ಸುಧೀಪ್ ಮತ್ತು ದರ್ಶನ್ ಬೆನ್ನಿಗಿರುವ ಅಂಬಿಯ ಅಪಾಯ!

ಹಾಗೆ ಶಿವಣ್ಣ ಅಂಬಿಯನ್ನು ಅಪಾಯವೆಂದು ಭಾವಿಸಲು ಇದ್ದ ಕಾರಣವೇ ಬೇರೆಯಾಗಿತ್ತು. ರಾಜ್ ಬದುಕಿದ್ದಾಗ ತಮ್ಮ ಕೊನೆಗಾಲದಲ್ಲಿ ಪರಭಾಷಾ ಚಿತ್ರಗಳ ವಿರುದ್ಧ ಬೀದಿಗಿಳಿದಾಗ ಇದೇ ಕೆಂಪೇಗೌಡ ರಸ್ತೆಯಲ್ಲಿ ಚಿತ್ರರಂಗದ ಸಮಸ್ತರೆಲ್ಲರೂ ಭಾಗವಹಿಸಿದ್ದರು. ಯಾವತ್ತು ಪರಭಾಷೆ ಸಿನಿಮಾ ಪ್ರದರ್ಶಿಸುವ ಚಿತ್ರಮಂದಿರಗಳೆದುರು ಸಿನಿಮಾ ಹೀರೋಗಳು ಧರಣಿ ಕೂರುವುದೆಂದು ಘೋಷಣೆಯಾಯಿತೋ ಪ್ರತಿಭಟನೆಯಲ್ಲಿ ಜೊತೆಗಿದ್ದವರ ಪೈಕಿ ಅಂಬಿ, ವಿಷ್ಣು, ರಮ್ಯಾ, ಉಪ್ಪಿ ಇತ್ಯಾದಿಗಳೆಲ್ಲ ಇದ್ದಕ್ಕಿದ್ದಂತೆ ಕೈಕೊಟ್ಟರು. ಬಹುಶಃ ರಾಜ್‌ಗಾಗಲೇ ಇದು ಅಂಬಿಯ ಮಸಲತ್ತೆಂದು ಅರ್ಥವಾಗಿರಬೇಕು. ಇದ್ದಕ್ಕಿದ್ದಂತೆ ಪರಭಾಷಾ ಚಿತ್ರಗಳ ವಿರೋಧಿ ಹೋರಾಟವನ್ನೇ ಕೈಬಿಟ್ಟರು. ಯಾವತ್ತು ರಾಜ್ ತಣ್ಣಗಾದರೋ ಗಾಂಧಿನಗರದ ಮತ್ತಾರೂ ಈ ಬಗ್ಗೆ ಚಕಾರವೆತ್ತಲಿಲ್ಲ. ಅಲ್ಲಿಗೆ ಅಂಬಿ ಮನಸ್ಸು ಮಾಡದೆ ಗಾಂಧಿನಗರದಲ್ಲಿ ಯಾರ ಬೇಳೆ ಕೂಡ ಬೇಯುವುದಿಲ್ಲ ಎಂದಂತಾಗಿತ್ತು. ರಾಜ್ ಕಾಳಜಿ, ಹೋರಾಟದ ಹಿಂದಿದ್ದ


ಕ್ರಿಕೆಟ್ ಶೋಕಿಯ ಮುಂದೆ ಸಿನಿಮಾ ಯಾವ ಲೆಕ್ಕ?



ಮಂತ್ರಿಯಾಗಿ ಪ್ರತಿಭಟನೆಯಲ್ಲಿ ಭಾಗವಹಿಸುವುದು ಸರಿಯಲ್ಲ ಎಂಬ ಅಂಬಿಯ ವಾದವನ್ನೇ ಒಪ್ಪುವುದಾದರೆ ವೈಯಕ್ತಿಕವಾಗಿ ತನ್ನ ಅಭಿಪ್ರಾಯ ವ್ಯಕ್ತಪಡಿಸಲು ಸಮಸ್ಯೆಯಿರಲಿಲ್ಲ. ಅಷ್ಟಕ್ಕೂ ಡಬ್ಬಿಂಗ್ ವಿರುದ್ಧ ಇಡೀ ಚಿತ್ರೋದ್ಯಮ ಬೀದಿಗಿಳಿದಿರುವಾಗ ಅಂಬಿ ಮಾಡುತ್ತಿದ್ದದ್ದಾದರೂ ಏನು?

ಅದೇ ಹೊತ್ತಿಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿದ್ದ ಸಿಸಿಎಲ್ ಕ್ರಿಕೆಟ್ ಮ್ಯಾಚಿನ ಉದ್ಘಾಟನಾ ಸಮಾರಂಭದಲ್ಲಿ ನೈಸ್ ಖದೀಮ ಖೇಣಿಯ ಬಂಟರ ಜೊತೆ ಅಂಬಿ ಕೇಕೆ ಹಾಕುತ್ತಿದ್ದರು. ಅವರ ಪಕ್ಕ ಪತ್ನಿ ಸುಮಲತಾ. ಜೊತೆಗೆ ದರ್ಶನ್, ಸುದೀಪ್. ಇಡೀ ಚಿತ್ರೋದ್ಯಮವೇ ಬೀದಿಗಿಳಿದಿರುವಾಗ ಓರ್ವ ಜವಾಬ್ದಾರಿಯುತ ವ್ಯಕ್ತಿಯಾಗಿ ಅಂಬಿ ಕ್ರಿಕೆಟ್ ಶೋಕಿಯಲ್ಲಿ ತೊಡಗಿದ್ದು ಕೂಡ ಅವರ ವ್ಯಕ್ತಿತ್ವಕ್ಕೆ ತಕ್ಕುದ್ದಾಗಿರಲಿಲ್ಲ. ಯಾರೂ ವರದಿಗಾರರೊಬ್ಬರು ಡಬ್ಬಿಂಗ್ ಕುರಿತಂತೆ ನಿಮ್ಮ ಅಭಿಪ್ರಾಯವನ್ನೇ ತಿಳಿಸುತ್ತಿಲ್ಲವಲ್ಲ ಎಂದು ಕೇಳಿದ್ದಕ್ಕೆ ಅಂಬಿ "ನಾನು ಸಿನಿಮಾ ಬಿಟ್ಟೇ ಹತ್ತು ವರ್ಷವಾಗಿದೆ. ಇನ್ನು ಸಿನಿಮಾ ಬಗ್ಗೆ ನಾನ್ಯಾಕೆ ತಲೆ ಕೆಡಿಸಿಕೊಳ್ಳಲಿ....!" ಎಂದದ್ದು ಕೂಡ ಜವಾಬ್ದಾರಿಯ ಮಾತಾಗಿರಲಿಲ್ಲ.





ಹೊಸ ನಾಯಕ ಶಿವಣ್ಣ



ಡಬ್ಬಿಂಗ್ ವಿರೋಧಿ ಜನಸ್ತೋಮ


ಪ್ರಶ್ನೆ ಇತ್ಯಾದಿಗಳೆಲ್ಲ ಮರೆಯಾಗಿ ಅಂಬಿ-ವಿಷ್ಣು ...ಯ ಅಸಹಕಾರದ ಕುಟೀಲವೇ ಮೆರೆಯು...ತ್ತು.

...ಥಾದ್ದೊಂದು ಅವಮಾನ ಬಹುಶಃ ಶಿವಣ್ಣನ ...ಳಗೆ ಹೆಪ್ಪುಗಟ್ಟೇ ಇತ್ತೇನೊ. ಅಂಬಿಯನ್ನು ...ಟ್ಟುಕೊಂಡೇ ಸುದೀಪ್ ಪದೇ ಪದೇ ಶಿವಣ್ಣನ ... ತೊಡೆ ತಟ್ಟಲಾರಂಭಿಸಿದ್ದರು. ಅದಕ್ಕೆ ಸರಿಯಾಗಿ ... ಪತ್ನಿ ಗಂಡನ ಹಿಂಸೆ ತಾಳಲಾರದೆ ಶಿವಣ್ಣನ ...ಯಲ್ಲಿ ಆಶ್ರಯ ಪಡೆದ ಮೇಲಂತೂ ಆತನಕ ರಾಜ್ ...ಬಳ್ಕೆ ನಿಷ್ಠನಾಗಿದ್ದ ದರ್ಶನ್ ಕೂಡ ಸುದೀಪ್ ಜೊತೆ ...ಡಿಸಿಬಿಟ್ಟ. ಅದು ಪುನೀತ್ ವಿರುದ್ಧದ ಎದುರಾಳಿ ...ಟಾಗಿಯೂ ರೂಪ ತಳೆಯಿತು.

...ನ್ನಡ ಹೋರಾಟಗಾರರ ಸಾಥ್

...ಥ ಬೆಳವಣಿಗೆಗಳನ್ನೆಲ್ಲ ಸೂಕ್ಷ್ಮವಾಗೇ ಗಮನಿಸುತ್ತಿದ್ದ ...ಗೆ ಡಬ್ಬಿಂಗ್ ಭೂತ ಎದುರಾದಾಗ ಮೊದಲು ...ದ್ದೇ ಅಸ್ತಿತ್ವದ ಪ್ರಶ್ನೆ. ಈ ಮಧ್ಯೆ ಕೆಲ ...ಗೆಗಳಾದವು. ದುನಿಯಾ ವಿಜಿಗೆ ಒಳಗೊಳಗೇ ...ಪ್-ದರ್ಶನ್ ಕೈಜೋಡಿಸಿದ್ದರ ವಿರುದ್ಧ ಅಸಹನೆಯಿತ್ತು. ...ರೂ ಸರಿಸಾಟಿಯಿಲ್ಲ ಎಂದು ಮೆರೆದ ದರ್ಶನ್ ... ಯಶ್ ಎಂಬ ಚಾಕಲೇಟ್ ಬಾಯ್ ತಲೆ ಎತ್ತಿ ... ಜಗ್ಗೇಶ್ ಅಂತೂ ಆ ಕಾಲದಿಂದಲೂ ಅಂಬಿ ...ಕೆಯನ್ನು ವಿರೋಧಿಸಿಕೊಂಡೇ ಬಂದವರು. ಜೊತೆಗೆ ...ದ್ರನ್ ಮತ್ತು ಶಿವಣ್ಣನ ಅನಾದಿಕಾಲದ ಗೆಳೆತನವೂ ...ಷ್ಟ ಗಟ್ಟಿಗೊಂಡಿತ್ತು.

...ದನ್ನೆಲ್ಲ ಲೆಕ್ಕ ಹಾಕಿಯೇ ಶಿವಣ್ಣ ಡಬ್ಬಿಂಗ್ ವಿರುದ್ಧ ...ಳಿಯುತ್ತೇನೆಂದು ಘೋಷಿಸಿದ್ದು. ಆ ರೀತಿ ಘೋಷಣೆ ...ಸ್ವರಲ್ಲಿ ಇದ್ದ ಇನ್ನೂ ಒಂದು ಕಾರಣವೆಂದರೆ ರಕ್ಷಣಾ ... ನಾರಾಯಣಗೌಡ ಹೊರತಾಗಿ ಮಿಕ್ಕೆಲ್ಲಾ ಕನ್ನಡ ...ಗಾರರೂ ಒಂದಾಗಿ ಡಬ್ಬಿಂಗ್ ವಿರುದ್ಧ ದನಿಯೆತ್ತಿದ್ದು. ...ತಡ ಮಾಡಿದರೆ ಡಬ್ಬಿಂಗ್ ವಿರೋಧಿ ಆರ್ಭಟವೇ ...ಗುವ ಸಾಧ್ಯತೆ ಇದೆಯೆಂಬುದು ರಾಜ್ ಫ್ಯಾಮಿಲಿಗೆ ...ಟ್ಟಾಗಿದ್ದೇ ಜನವರಿ 27ರ ಬೀದಿ ಕಾಳಗಕ್ಕೆ ಸಜ್ಜಾದರು. ...ಸೂರು ಬ್ಯಾಂಕ್ ಚೌಕದಿಂದ ಕೆಂಪೇಗೌಡ ರಸ್ತೆ ...ಬೀರಣ್ಣ ರಂಗಮಂದಿರ ಮೂಲಕ ಸೆಂಟ್ರಲ್ ಕಾಲೇಜ್ ...ನ ಹೊಕ್ಕ ಮೆರವಣಿಗೆಯಲ್ಲಿ ಮೊದಮೊದಲು ...ಯಿದ್ದ ಜನ ಬರುಬರುತ್ತ ಪ್ರವಾಹವಾದರು. ಒಂದೆಡೆ ... ಹೋರಾಟಗಾರರು ಮತ್ತೊಂದೆಡೆ ಸಿನಿಮಾ ...ದಾಗಿ ನೆರೆದವರ ಸಂಖ್ಯೆ ಇಪ್ಪತ್ತು ಸಾವಿರವನ್ನು ...ಟಿದ್ದು ಹೋರಾಟಕ್ಕೆ ಜೀವ ಬಂದಂತಾಗಿತ್ತು. ... ನಟಿಯರಾದ ಭಾರತಿ, ಲೀಲಾವತಿ, ಜಯಂತಿ ಮುಂಚೂಣಿಯಲ್ಲಿದ್ದದ್ದು ಇಡೀ ಪ್ರತಿಭಟನೆಗೆ ಬೇರೆಯದೇ ಅರ್ಥ ಕೊಟ್ಟಿತ್ತು. ಒಬ್ಬೊಬ್ಬರಾಗಿ ಭಾಷಣಕ್ಕೆ ನಿಂತ ನಟಮಣಿಯರೆಲ್ಲರೂ ಶಿವಣ್ಣನ ಕುರಿತಾಗೇ ಹಾಡಿ ಹೊಗಳಿಬಿಟ್ಟರು. ಪುನೀತ್ ಕೂಡ ಅದಕ್ಕೆ ದನಿಗೂಡಿಸುತ್ತಿದ್ದಂತೆಯೇ ಇಡೀ ಜನಸ್ತೋಮ ರೋಮಾಂಚನಗೊಂಡು ಡಬ್ಬಿಂಗ್ ಪರ ವಾದಿಗಳ ಭೂತ ಸುಡಲಾರಂಭಿಸಿದ್ದರು.



ತಾರಾ–ಹೇಮಚೌಧುರಿ–ಶೃತಿ– ವಾಟಾಳ್ ನಾಗರಾಜ್ ಮತ್ತು ಸಾ.ರಾ.ಗೋವಿಂದು

ಯಶ್ ಗೇಲಿ!

ಹಾಗೆ ಸುಟ್ಟ ಮೊದಲ ಭೂತವೇ ರಾಜೇಂದ್ರಸಿಂಗ್ ಬಾಬು. ಬೆನ್ನಲ್ಲೇ ನಿರ್ದೇಶಕ ಗುರುಪ್ರಸಾದ್, ರಾಕ್‌ಲೈನ್, ಸೂರಪ್ಪ ಬಾಬು ಮುಂತಾದವರ ವಿರುದ್ಧ ಧಿಕ್ಕಾರವೂ ಮೊಳಗಿ ಬಂತು. ಟೀವಿಗಳಲ್ಲಾಗಲೇ ಅಂಬಿ ಗೈರು ಎಂಬ ಹೆಡ್ಡಿಂಗುಗಳು ಮೇಲಿಂದ ಮೇಲೆ ಹರಿದುಬರುತ್ತಿದ್ದವು. ಬಹುಶಃ ಸುದೀಪ್ ಮತ್ತು ದರ್ಶನ್ ವೇದಿಕೆಗೆ ಹಾಜರಾಗುವುದು ಹತ್ತೇ ಹತ್ತು ನಿಮಿಷ ತಡವಾಗಿದ್ದರೂ ಪ್ರತಿಭಟನಾಕಾರರು ರೊಚ್ಚಿಗೆದ್ದು ಅವರ ಭೂತ ಸುಡಲಿದ್ದಾರೆಂಬ ಮಾತುಗಳೂ ಕೇಳಿಬಂದವು. ಇದನ್ನು ಸೂಕ್ಷ್ಮವಾಗೇ ಗಮನಿಸುತ್ತಿದ್ದ ಸುದೀಪ್ ಮತ್ತು ದರ್ಶನ್ ಅದೆಲ್ಲಿದ್ದರೋ ಅರ್ಧ ಮುಗಿದಿದ್ದ ಸಭೆಗೆ ಅನಿರೀಕ್ಷಿತವಾಗಿ ಹಾಜರಾದರು.

ವಿಪರ್ಯಾಸವೆಂದರೆ ಮೆರವಣಿಗೆಯಲ್ಲಿ ಭಾಗವಹಿಸದೆ ಅರ್ಧ ಮುಗಿದಿದ್ದ ವೇದಿಕೆಯೇರಿದ ದರ್ಶನ್ ಮತ್ತು ಸುದೀಪ್ ಪರ ಚಪ್ಪಾಳೆಗೆ ಬದಲಾಗಿ ಗೇಲಿ, ಹೀಯಾಳಿಕೆಗಳೇ ಹೆಚ್ಚಾಗಿ ಕೇಳಿಸುತ್ತಿತ್ತು. ಹೀರೋ ಯಶ್ ಭಾಷಣಕ್ಕೆ ನಿಂತವನು ಪರೋಕ್ಷವಾಗಿ ಕುಟುಕಿದ್ದು ಅಂಬಿಯನ್ನೇ ಎಂಬುದು ರಹಸ್ಯವಾಗಿರಲಿಲ್ಲ. ಬಂಗಾರದ ಮನುಷ್ಯ ಚಿತ್ರ ನೋಡಿದ ಎಷ್ಟೋ ಮಂದಿ ರೈತರಾದರು. ಗಂಧದ ಗುಡಿ ಸಿನಿಮಾ ನೋಡಿ ಅದೆಷ್ಟೋ ಜನ ಅರಣ್ಯ ಪ್ರಾಣಿಗಳ ರಕ್ಷಣೆಗೆ ನಿಂತರು. ಬಂಧನ ಸಿನಿಮಾದಲ್ಲಿ ವಿಷ್ಣು ಪಾತ್ರದಿಂದಾಗಿ ಒಂದು ಹೆಣ್ಣಿಗೆ ಯಾವ ರೀತಿ ಗೌರವ ಕೊಟ್ಟು ಮಾತಾಡಬೇಕೆಂಬುದನ್ನು ಜನ ಕಲಿತರು. ಒಬ್ಬ ಪೊಲೀಸ್ ಅಧಿಕಾರಿ ಎಷ್ಟೊಂದು ನಿಷ್ಠಾವಂತನಾಗಿರಬೇಕು ಅನ್ನೋದನ್ನು ಶಂಕರ್‌ನಾಗ್‌ರ ಸಾಂಗ್ಲಿಯಾನಾ ಚಿತ್ರ ನೋಡಿ ಕಲಿಯಬಹುದು. ಇಂಥ ಯಾವುದೇ ಒಳ್ಳೇ ಬುದ್ಧಿಯಿಲ್ಲದವರು ಸಮಾಜಕ್ಕೆ ಬುದ್ಧಿ ಹೇಳೋ ಬದಲು ಮೊದಲು ತಾವು ಬುದ್ಧಿ ಕಲಿಯಬೇಕು.

ಹೀಗೆ ಪರೋಕ್ಷವಾಗಿ ಯಶ್ ಅಂಬಿಯನ್ನು ಹೀಯಾಳಿಸುತ್ತಿದ್ದರೆ ನೆರೆದ ಅಭಿಮಾನಿಗಳೆಲ್ಲ ಶಿಳ್ಳೇ ಹಾಕಿ ಕೇಕೆಯಿಡುತ್ತಿದ್ದರು. ಇದಕ್ಕೆ ದನಿ ಕೊಟ್ಟದ್ದು ಕ್ರೇಜಿಸ್ಟಾರ್ ರವಿಚಂದ್ರನ್. ಕನ್ನಡದಲ್ಲಿ ನಾನು ಹತ್ತು ಸಿನಿಮಾ ಮಾಡಿದ್ದಾಗಲೂ ನನಗೆ ನೆಟ್ಟಗೆ ಕನ್ನಡ ಬರುತ್ತಿರಲಿಲ್ಲ, ಒಬ್ಬ ತಮಿಳನಾಗಿ ನಾನೇ ಕನ್ನಡಕ್ಕಾಗಿ ಇಷ್ಟೊಂದು ಹೋರ್‍ಾಡ್ತಾ ಇದ್ದೀನಿ ಅಂದ್ರೆ, ಇನ್ನು ಕನ್ನಡಿಗರು ಯಾವ ಮಟ್ಟದಲ್ಲಿ ಹೋರಾಡಬೇಕು?

ಜಗ್ಗೇಶ್ ತಿರುಗೇಟು

ರವಿಚಂದ್ರನ್ ಯಾವ ಉದ್ದೇಶಕ್ಕೆ ಹೀಗೆಂದರೋ ಆದರೆ ಸಭಿಕರ ಗುಂಪೊಂದು ಮಾತ್ರ 'ಅಂಬಿ ಶೇಮ್ ಶೇಮ್' ಎಂದು ಕೂಗು ಹಾಕಿತ್ತು, ಶಿವಣ್ಣನ ಜೊತೆ ರವಿಚಂದ್ರನ್ ಕೈಜೋಡಿಸಿದ್ದು ಕೂಡ ಅಂಬಿ ಪಟಾಲಮ್ಮಿಗೆ ಟಾಂಗ್ ಕೊಟ್ಟಂತೆಯೇ ವ್ಯಕ್ತವಾಗಿತ್ತು. ಅದೇ ಹೊತ್ತಿಗೆ ಮಾತಿಗೆ ನಿಂತದ್ದು ಕವಿ ನಾಗೇಂದ್ರ ಪ್ರಸಾದ್. ಕನ್ನಡಿಗರ ಪಾಲಿಗೆ ಇಮ್ಮಡಿ ಪುಲಿಕೇಶಿ ಮಹಾಧೀರ. ಆದರೆ ತಮಿಳರು ಇಮ್ಮಡಿ ಪುಲಿಕೇಶಿಯನ್ನು ಒಬ್ಬ ಜೋಕರ್‌ನಂತೆ ಚಿತ್ರಿಸಿ ಸಿನಿಮಾ ಮಾಡುತ್ತಾರೆ. ಇಂಥ ಚಿತ್ರವೇನಾದರೂ ಕನ್ನಡಕ್ಕೆ ಡಬ್ ಆಯಿತೆಂದರೆ ಅದನ್ನು ನೋಡುವ ನಮ್ಮ ಮಕ್ಕಳು ತಮ್ಮನ್ನೇ ಮೂರ್ಖರು ಎಂದುಕೊಳ್ಳಬೇಕಾ ಅಥವಾ ಪುಲಿಕೇಶಿಯನ್ನು ಆ ರೀತಿ ಚಿತ್ರಿಸಿದವರನ್ನು ಮೂರ್ಖರು ಎಂದುಕೊಳ್ಳಬೇಕಾ ಎಂದದ್ದು ಡಬ್ಬಿಂಗ್ ಪರ ವಾದಿಗಳ ಮರ್ಮಕ್ಕೆ ತಿವಿದಂತಿತ್ತು.

ಆದರೆ ಜಗ್ಗೇಶ್ ಮಾತ್ರ ಅಂಬಿಯನ್ನೇ ಪರೋಕ್ಷವಾಗಿ ಕಿಚಾಯಿಸಿಬಿಟ್ಟರು. ಅಪ್ಪಾಜಿಯವರು ಹೋದ ಮೇಲೆ ಕನ್ನಡ ಚಿತ್ರರಂಗಕ್ಕೊಬ್ಬ ನಾಯಕ ಬೇಕಿತ್ತು, ಆದರೆ ನಾಯಕ ಅಂತ ಹುಟ್ಟಿಕೊಂಡವರೆಲ್ಲ ತಮ್ಮ ಬೇಳೆ ಬೇಯಿಸಿಕೊಂಡರೇ ಹೊರತು ಚಿತ್ರರಂಗಕ್ಕೆ ಏನೂ ಮಾಡಲಿಲ್ಲ. ಕೇವಲ ಮೂವರು ನಿರ್ಮಾಪಕರನ್ನು ಕಟ್ಟಿಕೊಂಡು ಅವರಿಗೆ ಬೇಕಾದ್ದು ಮಾಡಿಕೊಂಡಿದ್ದು ಬಿಟ್ಟರೆ ಉದ್ಧಾರ ಮಾಡಿದ್ದು ಏನೇನೂ ಇಲ್ಲ. ಈಗ ನಾವೆಲ್ಲ ಅಪ್ಪಾಜಿಯವರ ಸ್ಥಾನದಲ್ಲಿ ಶಿವಣ್ಣನನ್ನು ನೋಡಬೇಕು ಎಂದದ್ದೂ ಅಂಬಿಯನ್ನುದ್ದೇಶಿಯೆ. ಶ್ರುತಿ ಕೊಂಚ ಆವೇಶಭರಿತರಾಗೇ ಹೆಸರೆತ್ತದೆ ಅಂಬಿಯನ್ನು ಹೀಯಾಳಿಸಿದ್ದಾರೆ.

ನಮಗೊಬ್ಬ ಸರಿಯಾದ ನಾಯಕನಿಲ್ಲ, ದೊಡ್ಡವರು ಅನ್ನಿಸಿಕೊಂಡವರಿಗೆ ಜವಾಬ್ದಾರಿಯಿಲ್ಲ ಇತ್ಯಾದಿ ವೇದಿಕೆಯಿಂದ ಕೇಳಿಬಂದ ಮಾತುಗಳೆಲ್ಲ ಅಂಬಿಯನ್ನು ಗುರಿಯಾಗಿಟ್ಟುಕೊಂಡೇ ಆಡಿದ ಮಾತುಗಳೆಂಬ ಬಗ್ಗೆ ಯಾರಲ್ಲೂ ಅನುಮಾನಗಳಿಲ್ಲ. ಇದು ಇಷ್ಟಕ್ಕೇ ಮುಗಿಯುವ ಲಕ್ಷಣಗಳೂ ಕಾಣುತ್ತಿಲ್ಲ, ಅಂಬಿ ಚಕ್ಕರ್ ಹಾಕಿದ್ದು ಡಬ್ಬಿಂಗ್ ಕುರಿತಂತೆ ತನ್ನ ಅಭಿಪ್ರಾಯ ತಿಳಿಸುತ್ತೇನೆಂದು ತೆಪ್ಪಗಾಗಿದ್ದು, ಸುದೀಪ್-ದರ್ಶನ್ ಕಾಟಾಚಾರಕ್ಕೆಂಬಂತೆ ಕೊನೆ ಗಳಿಗೆಯಲ್ಲಿ ಪ್ರತ್ಯಕ್ಷರಾಗಿದ್ದೆಲ್ಲವೂ ಗಾಂಧಿನಗರದ ಶೀತಲ ಸಮರವೊಂದರ ಸ್ಯಾಂಪಲ್ಲುಗಳಷ್ಟೆ.

ಅಂಬಿಯ ಅಸಹಕಾರದ ಬಗ್ಗೆ ರಾಜ್ ಫ್ಯಾಮಿಲಿಯಲ್ಲಿ ಏನೇನು ಚರ್ಚೆಗಳಾಗುತ್ತೋ ಗೊತ್ತಿಲ್ಲ, ಆದರೆ ಜಗ್ಗೇಶ್, ಯಶ್, ದುನಿಯಾ ವಿಜಿ, ಶ್ರುತಿ ಮುಂತಾದವರಾಡಿದ ಮಾತುಗಳಂತೂ ಅಂಬಿಯನ್ನು ಕೆಣಕದೇ ಇರಲು ಸಾಧ್ಯವೂ ಇಲ್ಲ.

● ರಾ. ಸೋಮನಾಥ್




ಪ್ರತಿಭಟನೆಯಲ್ಲಿ ಲೀಲಾವತಿ ಮತ್ತು ಇತರೇ ನಟಿಯರು .....



ಟಾಂಗು ಕೊಟ್ಟ ಯಶ್

ಎಕ್ಸ್ ಸಿಎಂ-ಡಿಸಿಎಂ ನಡುವೆ ಢಿಶುಂ ಢಿಶುಂ



ಎಕ್ಸ್ ಸಿಎಂ-ಡಿಸಿಎಂಗಳ ಬೀದಿ ಜಗಳ ಕಂಡು 'ಕಲಹಪ್ರಿಯ' ಬಿಜೆಪಿಗಳೇ ದಂಗಾಗಿಬಿಟ್ಟಿದ್ದಾರೆ. ನರೇಂದ್ರ ಮೋದಿ ಎಂಬ ಗುಜರಾತಿನ ನರಹಂತಕ ಸದ್ಯದಲ್ಲೇ ಭಾರತದ ಸಾಮ್ರಾಟನಾಗಿ ಬಿಡುತ್ತಾನೆ, ಅವನ ಆಸ್ಥಾನದ ಸಾಮಂತರು ತಾವಾಗಿ ಬಿಡುತ್ತೇವೆ ಎಂಬ ಭ್ರಮೆಯಲ್ಲಿ ಮಾಜಿ ಸಿಎಂ-ಡಿಸಿಎಂ ಸ್ಥಾನಗಳ ಘನತೆಯನ್ನೇ ಹರಾಜಿಗಿಟ್ಟುಬಿಟ್ಟಿದ್ದಾರೆ.

ಇದು 'ಕರ್ನಾಟಕದ ಅಡ್ವಾನಿ-ಮೋದಿಗಳ' ಅಣುಕು ಪ್ರದರ್ಶನದಂತಿದೆ.

ಅಶೋಕ್ ತಮ್ಮ ಆಸ್ಥಾನದ ವಿದೂಷಕರೆದುರು "ಯಾರ್ರೀ ಅವರು ಸದಾನಂದಗೌಡ? ಆತನೇನು ನಮ್ಮ ಜಾತಿಯವನಾ? ಕುಲದವನಾ? ಅರೆವಾಸಿ ಗೌಡ ಅಂತೆ ಅರೆವಾಸಿ ಗೌಡ. ಎಲ್ಲಿದ್ದಾರ್ರಿ ಅವನು. ಕರಾವಳಿ ಭಾಗದ ಸುಳ್ಯ, ಪುತ್ತೂರು, ಬೆಳ್ತಂಗಡಿ ಬಿಟ್ಟರೆ ಇನ್ನೆಲ್ಲಿದ್ದಾನ್ರಿ ಅವನು? ಎಲ್ಲಿಂದಲೋ ಬಂದು ಇಲ್ಲಿ ಹೆಂಗೆ ನಿಲ್ತಾನೆ? ಪರವೂರಿನಿಂದ ಬಾಡಿಗೆಗೆ ಬರುತ್ತಾನಂತೆ. ಯಾವೂರಿಂದ್ಲೊ ಬಂದು ಇಲ್ಲಿ ಗಾಂಚಾಲಿ ಮಾಡ್ತಿಯೇನೋ? ಎಲ್ಲಿಂದಲೋ ಬಂದೋನಿಗೆ ಇಷ್ಟು ಗಮ್ಮತ್ತಾದರೆ ಇಲ್ಲೇ ಹುಟ್ಟಿ ಬೆಳೆದೋರಿಗೇ ಎಷ್ಟಿರಬೇಡ?" ಎಂಬಂಥ ಗತ್ತಿನಲ್ಲಿ ಗುಟುರು ಹಾಕಿದ್ದಾರೆ.

ಅಶೋಕ್ ಹೀಗೆ ಗುಟುರು ಹಾಕಿದ್ದನ್ನು ಯಾರು ಸದಾನಂದ ಗೌಡರ ಕಿವಿಗೆ ಊದಿದರೋ ಗೊತ್ತಿಲ್ಲ. ಕಾರಣವಲ್ಲದೆ ಕಾರಣಕ್ಕೆ ತಮ್ಮನ್ನು ಮುಖ್ಯಮಂತ್ರಿ ಸ್ಥಾನದಿಂದ ಕತ್ತು ಹಿಡಿದು ದಬ್ಬಿದಾಗಲೂ ಸುಮ್ಮನಿದ್ದ ಸದಾನಂದ ಗೌಡರ 'ಆತ್ಮನಿರಭಿಮಾನ' ಎಚ್ಚೆತ್ತು ಕೊಂಡುಬಿಟ್ಟಿದೆ. "ಯಾರವರು ಅಶೋಕ್? ಅವರು ಎಕ್ಸ್ ಡಿಸಿಎಂ ಅಷ್ಟೇ. ನಾನು ಎಕ್ಸ್ ಸಿಎಂ. ಅವರು ಬೆಂಗಳೂರಿನ ಒಂದು ಕ್ಷೇತ್ರಕ್ಕಷ್ಟೇ ನಾಯಕರು. ನಾನು ಸಿಎಂ ಆಗಿದ್ದೋನು, ಇಡೀ ರಾಜ್ಯ ನಂದು. ನಾನು ಎಲ್ಲಿಂದ ಬೇಕಾದ್ರೂ ಚುನಾವಣೆಗೆ ನಿಲ್ಲಬಹುದು. ಸಿಎಂ ಹೆಚ್ಚೋ? ಡಿಸಿಎಂ ಹೆಚ್ಚೊ? ಅಷ್ಟೂ ಕಾಮನ್‌ಸೆನ್ಸ್ ಇಲ್ವಾ ಅವನಿಗೆ?" ಎಂದು ಬಹಿರಂಗವಾಗೇ ಮಾಧ್ಯಮಗಳೆದುರು ಹೂಂಕರಿಸಿದ್ದಾರೆ.

'ತಮ್ಮದು ಶಿಸ್ತಿನ ಪಕ್ಷ. ಕೇಡರ್ ಬೇಸಡ್ ಪಾರ್ಟಿ' ಎಂದು ಬಡಾಯಿಕೊಚ್ಚಿಕೊಳ್ಳುವ ಈ ಬಿಜೆಪಿಯ ಈ ಪ್ರಮುಖರ ಬೀದಿರಂಪಾಟಕ್ಕೆ ಮುಖ್ಯ ಪ್ರೇರೇಪಣೆ ಸಂಭವನೀಯ ಮೋದಿ ಸರ್ಕಾರದಲ್ಲಿ ತಾವು ಕೇಂದ್ರ ಸಚಿವರಾಗಿ ಬಿಡಬಹುದು ಎಂಬ ಭ್ರಮೆ. ಹೀಗಾಗಿಯೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಬಿಜೆಪಿ ಟಿಕೆಟ್ಟಿಗಾಗಿ ಈ 'ಟಗರು ಕಾಳಗ.'

ಉಪಜಾತಿಯ ವಿಷಬೀಜ

ಮಾಜಿ ಮುಖ್ಯಮಂತ್ರಿ ಸದಾನಂದಗೌಡರ ಹೆಸರಿನಲ್ಲಿ 'ಗೌಡ' ಎಂಬ ಪದ ಇಲ್ಲದಿದ್ದರೆ ಅವರು ಒಕ್ಕಲಿಗರು ಎಂದು ಸಾಮಾನ್ಯ ಜನರಿಗೂ ಗೊತ್ತಾಗುತ್ತಿರಲಿಲ್ಲವೇನೊ. ಈ ಸದಾನಂದ ಗೌಡರು 'ಅರೆವಾಸಿ ಗೌಡರು' ಎಂಬ ಒಕ್ಕಲಿಗ ಉಪಜಾತಿಗೆ ಸೇರಿದವರು. ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಬೆಳ್ತಂಗಡಿ ಭಾಗಗಳಲ್ಲಿಯಷ್ಟೇ ಈ ಸಮುದಾಯದ ಸಾಂದ್ರತೆ ಹೆಚ್ಚು. ರಾಜ್ಯದ ಹಳೇ ಮೈಸೂರು ಭಾಗದಲ್ಲಿರುವ ಒಕ್ಕಲಿಗರು ಅರೆವಾಸಿ ಗೌಡರನ್ನು ಒಕ್ಕಲಿಗರು ಎಂದೇ ಪರಿಗಣಿಸುವುದಿಲ್ಲ.

ಅಂತೆಯೇ ತಮ್ಮ ಹೆಸರಿನ ಮುಂದೆ 'ಗೌಡ' ಎಂಬ ಸರ್‌ನೇಮ್ ಇಲ್ಲದ ಮಾಜಿ ಮುಖ್ಯಮಂತ್ರಿ ಆರ್.ಅಶೋಕ್ 'ಮರಸು ಒಕ್ಕಲಿಗ' ಎಂಬ ಉಪಜಾತಿಗೆ ಸೇರಿದವರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ, ದೇವನಹಳ್ಳಿ, ಆನೇಕಲ್ ಹಾಗೂ ಬೆಂಗಳೂರು ಹೊರವಲಯದ ಕೆಲವು ಕ್ಷೇತ್ರಗಳಲ್ಲಿ ಈ ಜಾತಿಯವರದ್ದೇ ಕಾರುಬಾರು.

ಅರೆವಾಸಿ ಗೌಡರು ಬುದ್ಧಿಮತ್ತೆಯಲ್ಲಿ ಮುಂದಿದ್ದರೆ, ಮರಸು ಒಕ್ಕಲಿಗರು ಬಾಹುಬಲ-ಹಣಬಲದಲ್ಲಿ ಬಲಾಢ್ಯರು. ಇನ್ನು ಕುಂಚಿಟಿಗರು, ಹೊಸದೇವು, ಗಂಗಾಟಿಗಾರ್ಸ್, ದಾಸ ಒಕ್ಕಲು, ಮುಳ್ಳು ಒಕ್ಕಲು, ಹಾಲಕ್ಕಿ ಗೌಡರು- ಹೀಗೆ ಹಲವಾರು ಉಪಜಾತಿಗಳು ರಾಜ್ಯಾದ್ಯಂತ ಇವೆ. ಇಂತಿರುವಾಗ ಕೇವಲ ಒಂದು ಲೋಕಸಭಾ ಟಿಕೆಟ್ಟಿಗಾಗಿ 'ಮರಸು ಸಾಮ್ರಾಟ' ಅಶೋಕ್, 'ಅರೆವಾಸಿ ಗೌಡರುಗಳ ಗೌಡ' ಸದಾನಂದ ಗೌಡ ನಲ್ಲಿ ನೀರಿಗಾಗಿ ಜುಟ್ಟು ಹಿಡಿದು ಜಗಳವಾಡುವ ನಾರಿಯರಂತೆ ಕಿತ್ತಾಡುತ್ತಿರುವುದನ್ನು ನೋಡಿ ಜನ ನಗಾಡುತ್ತಿದ್ದಾರೆ. ಅಷ್ಟೇ ಅಲ್ಲ, ಪ್ರಜ್ಞಾವಂತ ಒಕ್ಕಲಿಗರು "ಸಮಯ ಬರಲಿ, ಇವರಿಬ್ಬರನ್ನು ಸೋಲಿಸುತ್ತೇವೆ" ಎಂದು ಕಿಡಿಕಾರುತ್ತಿದ್ದಾರೆ. 'ಅಖಂಡ ಒಕ್ಕಲಿಗ' ಜನಾಂಗವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಉಪಜಾತಿ-ಪ್ರದೇಶಗಳ ವಿಷಬೀಜ ಬಿತ್ತುತ್ತಿರುವವರ ಭೂತ ಬಿಡಿಸಲು ಬೆತ್ತ ಹಿಡಿದು ನಿಂತಿದ್ದಾರೆ.

ಯಾರೇನೇ ಹೇಳಲಿ, ಕೆಲವು ಸಮಯ ಸಂದರ್ಭಗಳನ್ನು ಹೊರತುಪಡಿಸಿದರೆ ಒಕ್ಕಲಿಗ ಸಮಾಜ ಜೆಡಿಎಸ್ ಬೆನ್ನಿಗಿದೆ. ಇಂತಹ ಒಕ್ಕಲಿಗ ಜನಾಂಗದ ಕೆಲ ಮತದಾರರನ್ನಾದರೂ ತನ್ನತ್ತ ಸೆಳೆಯಬೇಕಾದರೆ ಸಮರ್ಥ ಒಕ್ಕಲಿಗ ನಾಯಕರನ್ನು ಕಣಕ್ಕಿಳಿಸಬೇಕೆಂಬುದು ರಾಜ್ಯ ಬಿಜೆಪಿ ಲೆಕ್ಕಾಚಾರ.

ಮೊದಲಿಗೆ ಬಿಜೆಪಿಯ ಹಿರಿಯರ ಮನಸ್ಸಿನಲ್ಲಿದ್ದುದು ಅಶೋಕ ಹೆಸರು. ಆದರೆ 'ಭಾವಿ ಮುಖ್ಯಮಂತ್ರಿ'ಯ ಕನಸಿನಲ್ಲಿರುವ ಅಶೋಕ್‌ಗೆ ರಾಷ್ಟ್ರ ರಾಜಕಾರಣ ಬೇಕಿರಲಿಲ್ಲ, ಜೊತೆಗೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದಿಂದ ಈ ಬಾರಿ ಬಿಜೆಪಿ ಜಯಿಸಬಹುದು ಎಂಬ ನಿರೀಕ್ಷೆಯೂ ಅಶೋಕ್‌ಗೆ ಇಲ್ಲ, ಹೀಗಾಗಿ ಅವರು ತಮ್ಮ ದಾಯಾದಿ ದಾಸರಹಳ್ಳಿಯ ಶಾಸಕ ಮುನಿರಾಜು ಅವರನ್ನು ಒತ್ತಾಯವಾಗಿ ಪ್ರೊಜೆಕ್ಟ್ ಮಾಡಲೆತ್ನಿಸಿದರು. ಆದರೆ ಯಾವಾಗ ಬರಬರುತ್ತಾ 'ಮೋದಿ ಎಫೆಕ್ಟ್' ಎಂಬ ವಾಸನೆ ಅವರ ಮೂಗಿಗೆ ಬಡಿಯಿತೊ, ಎಂಪಿಯಾಗಿ ಆಯ್ಕೆಯಾಗಿ, ಮೋದಿ ಸರ್ಕಾರದಲ್ಲಿ ಕೇಂದ್ರ ಸಚಿವನಾಗಿ ಬಿಡಬಹುದಲ್ಲ ಎಂಬ ಆಸೆ ಚಿಗುರೊಡೆಯಿತು.

ಬಿಜೆಪಿ ರಾಜ್ಯದಲ್ಲಿ ಸೋತಿರುವುದರಿಂದ ತಾನು ಇಲ್ಲಿ ಕೇವಲ ಶಾಸಕನಾಗಿ ಇರುವುದಕ್ಕಿಂತ ಕೇಂದ್ರದಲ್ಲಿ ಸಚಿವನಾದರೆ ತಾನು ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಮತ್ತಷ್ಟು ಬಲಾಢ್ಯನಾಗಬಹುದು; ಇದರಿಂದ ಮುಂದಿನ ಸಿಎಂ ರೇಸ್‌ನಲ್ಲಿ ಮುಂಚೂಣಿಯಲ್ಲಿರಬಹುದು ಎಂಬ ದುರಾಸೆ ಶುರುವಾಗಿದೆ.

ನಿರಾಭಿಮಾನಿ-ಸ್ವಾಭಿಮಾನಿಯಾದ್ರು

ಇತ್ತಕಡೆ ತನಗ್ಯಾವ ಅಧಿಕಾರದ ಆಸೆಯೂ ಇಲ್ಲ, ಮುಖ್ಯಮಂತ್ರಿಯಾಗು ಎಂದಿತು ಪಕ್ಷ. ಮುಖ್ಯಮಂತ್ರಿಯಾದೆ. 'ಸಾಕಿನ್ನು, ನೀನಾಗೇ ಜಾಗ ಖಾಲಿ ಮಾಡು' ಎಂದು ಪಕ್ಷ ಹೇಳಿದಾಗ ಬಾಯಿಮುಚ್ಚಿ ಮಾಜಿ ಮುಖ್ಯಮಂತ್ರಿಯಾದೆ ಎಂಬಂತಿದ್ದ ಸದಾನಂದ ಗೌಡರಿಗೂ ಅವ್ಯಕ್ತ 'ಕೇಂದ್ರ ಸಚಿವ' ಕನಸು.

ತಾನು ಮುಖ್ಯಮಂತ್ರಿ ಗಾದಿಯನ್ನು ಕಳೆದುಕೊಳ್ಳುವ ಹಂತದಲ್ಲಿದ್ದಾಗ ಒಕ್ಕಲಿಗ ಸಮಾಜ ತನ್ನ ಬೆಂಬಲಕ್ಕೆ ನಿಂತಿದ್ದನ್ನು ಕಂಡು ಬಿಜೆಪಿಯಲ್ಲಿ ರಾಜ್ಯ ಮಟ್ಟದ ಒಕ್ಕಲಿಗ ನಾಯಕ ತಾನೆ ಎಂಬ ಹಗಲುಗನಸು ಕಾಣಲಾರಂಭಿಸಿದರು ಸದಾನಂದ ಗೌಡರು. ಮೊದಲು ಉಡುಪಿ, ಚಿಕ್ಕಮಗಳೂರು, ಮೈಸೂರು ಎಂದೆಲ್ಲಾ ಸುತ್ತಾಡಿದ ಸದಾನಂದರು ಕೊನೆಗೆ ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರವಾದರೆ ತನಗೆ ಅನುಕೂಲ ಎಂದು ಗ್ರಹಿಸಿದರು. ಆಗ ತಾನೂ ಈ ಕ್ಷೇತ್ರದ ಟಿಕೆಟ್ ಆಕಾಂಕ್ಷಿ ಎಂಬ ಮೆಸೇಜನ್ನು ಬಿಜೆಪಿ ಹೈಕಮಾಂಡಿಗೆ ರವಾನಿಸಿದರು. ಆಗಲೇ ಪ್ರಾರಂಭವಾಗಿದ್ದು ಈ 'ಒಕ್ಕಲಿಗ ಕುಲತಿಲಕ'ರ ಟಗರು ಕಾಳಗ!

ಅನಂತ ಕಥೆ ಫಿನಿಷಂತೆ

ಕೆಲವು ಸಮೀಕ್ಷೆಗಳು ಮತ್ತು ಇವರಿಬ್ಬರೂ ತಮ್ಮ ನಂಬಲರ್ಹ ಮೂಲಗಳಿಂದ ಸಂಗ್ರಹಿಸಿರುವ ಮಾಹಿತಿ ಪ್ರಕಾರ ಬಿಜೆಪಿಯ ಮತ್ತೊಬ್ಬ ನಾಯಕ ಅನಂತಕುಮಾರ್ ಈ ಬಾರಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಗೆಲ್ಲುವ ಸಾಧ್ಯತೆ ಅತ್ಯಂತ ಕಡಿಮೆ.

ಕಾಂಗ್ರೆಸ್ಸಿನಿಂದ ನಂದನ್ ನಿಲೇಕಣಿಗೆ ಟಿಕೆಟ್ ಸಿಕ್ಕರಂತೂ ಅನಂತಕುಮಾರ್‌ಗೆ ಇನ್ನೂ ಕಷ್ಟ. ಒಂದು ವೇಳೆ ಅನಂತಕುಮಾರನ ತಂತ್ರಗಾರಿಕೆ ಫಲನೀಡಿ, ಅದೃಷ್ಟ ಕೈ ಹಿಡಿದು ಗೆಲ್ಲಿಸಿಬಿಟ್ಟರೂ ಭವಿಷ್ಯ ಶೂನ್ಯವೆ. ಯಾಕೆಂದರೆ ಕೇಂದ್ರದಲ್ಲಿ ಬಿಜೆಪಿ ಅಧಿಕಾರದ ಗದ್ದುಗೆ ಹಿಡಿದು ಮೋದಿಯೇ ಪ್ರಧಾನಿಯಾದರೆ ಅನಂತಕುಮಾರ್ ಮೂಲೆಗುಂಪಾಗುತ್ತಾರೆ. 'ಅಡ್ವಾನಿ ಮನುಷ್ಯ' ಎಂದೇ ಬಿಜೆಪಿಯಲ್ಲಿ ಗುರುತಿಸುವ ಅನಂತಕುಮಾರ್ ಮೋದಿ ವಿರುದ್ಧ ಅಡ್ವಾನಿಯನ್ನು ಅವರ ಮಗಳ ಮೂಲಕ ಪ್ರಚೋದಿಸಿದ್ದು ಈತನೇ ಎಂಬ ಆರೋಪವು ಚೆಡ್ಡಿ ವಲಯಗಳಲ್ಲಿ ಇವತ್ತಿಗೂ ಕೇಳಿಬರುತ್ತಿದೆ. ಈ ಹಿನ್ನೆಲೆಯಲ್ಲಿ ಮೋದಿ ಪ್ರಧಾನಿಯಾದರೆ ತಾವು ಮಂತ್ರಿ ಆಗುತ್ತೇವೆ ಎಂಬ ಭ್ರಮೆಗೆ ಅಶೋಕ್ ಮತ್ತು ಸದಾನಂದ ಗೌಡರು ಬಿದ್ದಿದ್ದಾರೆ.


ಅಶೋಕರ ಜನಪ್ರಿಯತೆ ಎಷ್ಟು?

ಉತ್ತರಹಳ್ಳಿಯಂಥ ಬೃಹತ್ ವಿಧಾನಸಭಾ ಕ್ಷೇತ್ರವನ್ನು ಸತತವಾಗಿ ತಮ್ಮದಾಗಿಸಿಕೊಂಡು, ಕುಮಾರಸ್ವಾಮಿ, ಯಡಿಯೂರಪ್ಪ ಸದಾನಂದಗೌಡರ ಸಂಪುಟದಲ್ಲಿ ಪ್ರಭಾವಿ ಸಚಿವರಾಗಿ, ಜಗದೀಶ್ ಶೆಟ್ಟರ್‌ರ ಸಂಪುಟದಲ್ಲಿ ಉಪಮುಖ್ಯಮಂತ್ರಿ ಆಗಿದ್ದ ಅಶೋಕ ವೈಯಕ್ತಿಕವಾಗಿ ಬಲಾಢ್ಯರಾದುದೇನೂ ಸರಿ. ಆದರೆ ಒಕ್ಕಲಿಗ ಜನಾಂಗದ ನಾಯಕ ತಾನೆಂದು ಕ್ಲೈಮು ಮಾಡಿಕೊಂಡು, ಉಪಮುಖ್ಯಮಂತ್ರಿಯಾದ ಅಶೋಕರಿಂದ ಪಕ್ಷಕ್ಕೇನಾದರೂ ಲಾಭವಾಯಿತೆ ಎಂದು ಹುಡುಕಲು ಹೊರಟರೆ ಫಲಿತಾಂಶ ಮಾತ್ರ ಶೂನ್ಯ.

ಬಿಜೆಪಿ ಸರ್ಕಾರದಲ್ಲಿ ಮಂಡ್ಯದ ಉಸ್ತುವಾರಿ ಅಶೋಕರಿಗಿತ್ತು. ಜೊತೆಗೆ ಕಳೆದ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಅಶೋಕ್ ಸೂಚಿಸಿದವರಿಗೇ ಬಿಜೆಪಿ ಟಿಕೆಟ್ ಕೊಟ್ಟಿತ್ತು. ಆದರೆ ಅಶೋಕರ ದುರಾದೃಷ್ಟಕ್ಕೆ ಎಲ್ಲರೂ ಸೋಲುಂಡರು.

ಮಂಡ್ಯ ದೇವೇಗೌಡರ ಪ್ರಭಾವವಿರುವ ಜಿಲ್ಲೆ ಎಂದುಕೊಂಡರೂ ವಿಧಾನ ಪರಿಷತ್ ಸದಸ್ಯ ಅಶ್ವಥ್ ನಾರಾಯಣ ಅವರು ಉಸ್ತುವಾರಿಕೆಯಿದ್ದಾಗ ಮಂಡ್ಯ ನಗರಸಭೆಗೆ ನಾಲ್ವರು ಕಾಂಗ್ರೆಸ್ಸಿಗರು ಆಯ್ಕೆಯಾಗಿದ್ದರು. ಒಬ್ಬ ಪ್ರಭಾವಿ ಸಚಿವ ಸಾಧಿಸಲಾಗದ್ದನ್ನು ಎಂಎಲ್‌ಸಿ ಒಬ್ಬರು ಸ್ವಲ್ಪ ಮಟ್ಟಿಗಾದರೂ ನಿಭಾಯಿಸಿದ್ದರು.

ಇನ್ನು ಬೆಂಗಳೂರಿನ ವಿಷಯಕ್ಕೆ ಬಂದರೆ ಅಶೋಕ್ ಡಿಸಿಎಂ ಆದನಂತರ ಅವರ ಕಟ್ಟಾ ಬೆಂಬಲಿಗರೇ ಆಂತರಿಕವಾಗಿ ಅವರ ವಿರುದ್ಧ ತಿರುಗಿಬಿದ್ದರು. ತಮ್ಮ ನಾಯಕನ ಮನದಿಂಗಿತವನ್ನೂ ಧಿಕ್ಕರಿಸಿ ದಾಸರಹಳ್ಳಿ ಶಾಸಕ ಮುನಿರಾಜು, ಮಲ್ಲೇಶ್ವರಂನ ಶಾಸಕ ಅಶ್ವಥ್ ನಾರಾಯಣ್ ಸ್ವಜಾತಿಬಂಧು ಸದಾನಂದಗೌಡರ ಬೆಂಬಲಕ್ಕೆ ನಿಂತರು. ಒಂದು ಹಂತದಲ್ಲಿ ಬೊಮ್ಮನಹಳ್ಳಿ ಶಾಸಕ, ಅಶೋಕರ ಕಟ್ಟಾ ಅನುಯಾಯಿ ಆಗಿದ್ದ ಸತೀಶ ರೆಡ್ಡಿ ಪಕ್ಷ ತೊರೆದು ಕಾಂಗ್ರೆಸ್ ಸೇರುವ ವಿಫಲ ಯತ್ನ ನಡೆಸಿದ್ದರು. ದಾಸರಹಳ್ಳಿಯ



ಮುನಿರಾಜು, ಯಲಹಂಕದ ಎಸ್.ಆರ್.ವಿಶ್ವನಾಥ್, ಅರವಿಂದ ಲಿಂಬಾವಳಿ ಮುಂತಾದವರು ತಮ್ಮ ಸ್ವಶಕ್ತಿಯಿಂದ ಗೆದ್ದು ಬಂದರು. ಇನ್ನುಳಿದಂತೆ ಮರಸು ಒಕ್ಕಲಿಗರೇ ಹೆಚ್ಚಿರುವ ಹೊಸಕೋಟೆ, ಬ್ಯಾಟರಾಯನಪುರ, ದೇವನಹಳ್ಳಿ, ಆನೇಕಲ್ಲಿನಲ್ಲಿ ಬಿಜೆಪಿ ಹೀನಾಯ ಸೋಲನ್ನು ಅನುಭವಿಸಿತು. ತಮ್ಮ ಸಹೋದರ ರವಿಯವರನ್ನೇ ಬ್ಯಾಟರಾಯನಪುರದಲ್ಲಿ ಗೆಲ್ಲಿಸಿಕೊಳ್ಳಲಾಗದಂಥ ಸ್ಥಿತಿ ತಲುಪಿದರು ಅಶೋಕ್. ಸ್ವತಃ ತಾವೇ ಪದ್ಮನಾಭನಗರದಲ್ಲಿ ಸಂಭವನೀಯ ಕಾಂಗ್ರೆಸ್ ಅಭ್ಯರ್ಥಿ ಗುರಪ್ಪನಾಯ್ಡು ಅವರ ಎದುರು ನಿಲ್ಲಲು ಭಯಪಟ್ಟು, ಕಾಂಗ್ರೆಸ್‌ನೊಂದಿಗೆ ಒಳಒಪ್ಪಂದ ಮಾಡಿಕೊಂಡು ಚೇತನ್ ಗೌಡ ಎಂಬ ರಾಜಕೀಯ ಹಸುಗೂಸಿಗೆ ಟಿಕೇಟ್ ಸಿಗುವಂತೆ ನೋಡಿಕೊಂಡು ಗೆದ್ದು ಬಂದರು.

ಸದಾನಂದ ಗೌಡರತ್ತ ಒಲವು

ಮುಂದಿನ ಲೋಕಸಭಾ ಚುನಾವಣೆಯಲ್ಲಿ ಭ್ರಷ್ಟಾಚಾರ ಪ್ರಮುಖ ಚುನಾವಣಾ ವಿಷಯ. ಭ್ರಷ್ಟಾಚಾರದ ವಿರುದ್ಧ ಯುದ್ಧ ಸಾರಿರುವ 'ಅಮ್ ಆದ್ಮಿ' ಪಕ್ಷ ಕರ್ನಾಟಕದಲ್ಲೂ ಕಾಲಿಡುತ್ತಿದೆ. ಆಮ್ ಆದ್ಮಿಯ ಆದ್ಯತೆ ಬೆಂಗಳೂರಿನ ಮೂರು ಲೋಕಸಭಾ ಕ್ಷೇತ್ರಗಳು. ಇದಕ್ಕೆ ನಗರ ಪ್ರದೇಶ ಎಂಬುದು ಒಂದು ಕಾರಣವಾದರೆ; ಈ ಕ್ಷೇತ್ರದಲ್ಲಿರುವ ಐಟಿ-ಬಿಟಿ ಮತದಾದರು ಕೂಡಾ ಮತ್ತೊಂದು ಕಾರಣ. ಹೀಗಾಗಿ ಬಿಜೆಪಿಯ ಸಾಂಪ್ರದಾಯಿಕ ಮತಗಳು ಅಮ್ ಆದ್ಮಿಗೆ ಹರಿದು ಹೋಗಬಹುದು ಎಂಬ ಆತಂಕ ರಾಷ್ಟ್ರ ನಾಯಕರದ್ದು. ಆಮ ಆದ್ಮಿಗೆ ತಡೆಯೊಡ್ಡಬೇಕಾದರೆ, ಕಳಂಕರಹಿತ, ಅಷ್ಟೇನೂ ಜಾತಿವಾದಿಯಲ್ಲದ, ಬಹುಸಂಖ್ಯಾತ ಜಾತಿಗೆ ಸೇರಿದ ವ್ಯಕ್ತಿಯೊಬ್ಬರಿಗೆ ಟಿಕೆಟ್ ನೀಡೋದು ಬಿಜೆಪಿ ನಾಯಕರ ಮನಸ್ಸಿನಲ್ಲಿದೆ.

ಸಂಪೂರ್ಣವಾಗಿ ಅಲ್ಲದಿದ್ದರೂ, ಇತರರಿಗೆ ಹೋಲಿಸಿದರೆ ಸದಾನಂದ ಗೌಡ ಕಳಂಕರಹಿತರು. ಅಲ್ಪಕಾಲದ ಮುಖ್ಯಮಂತ್ರಿಯ ಅವಧಿಯಲ್ಲಿ ವಿವಾದಕ್ಕೆ ಸಿಲುಕಿದವರಲ್ಲ, ಸ್ಥಳೀಯ ಉಪಜಾತಿಗೆ ಸೇರಿಲ್ಲದಿದ್ದರೂ ಇಡೀ ಒಕ್ಕಲಿಗ ಜನಾಂಗಕ್ಕೆ ಇವರ ಬಗ್ಗೆ ಸಹಾನುಭೂತಿಯಿದೆ. ಹೀಗಾಗಿ ವೆಂಕಯ್ಯ ನಾಯ್ಡು ಅವರನ್ನು ಒಳಗೊಂಡಂತೆ ರಾಷ್ಟ್ರ ನಾಯಕರಿಗೆ ಸದಾನಂದ ಗೌಡರ ಬಗ್ಗೆ ಒಲವು ಇದ್ದಂತಿದೆ.

ವಾಸ್ತವ ಲೆಕ್ಕಾಚಾರಗಳು


ಆದರೆ ಸದಾನಂದ ಗೌಡ ಚುನಾವಣಾ ತಂತ್ರಗಾರಿಕೆಯಲ್ಲಿ ನುರಿತವರಲ್ಲ, ಪಕ್ಷ ನೀಡುವ ಹಣವನ್ನು ಬಿಟ್ಟರೆ ಕೈಯಿಂದ ಬಿಡಿಗಾಸು ಖರ್ಚು ಮಾಡುವ ಜಾಯಮಾನದವರಲ್ಲ, ಸ್ಥಳೀಯ ರೌಡಿ ಗುಂಪುಗಳ ಬೆಂಬಲವಿಲ್ಲ.

ಆದರೆ ಅಶೋಕ್‌ಗೆ ಸಾಮಾನ್ಯ ಮತದಾರರ ಬೆಂಬಲವಿಲ್ಲದಿದ್ದರೂ ಹಣ ಬೆಂಬಲವಿದೆ. ಹುಂಬರ ಬಾಹುಬಲವಿದೆ. ಅವರ ಆಸ್ಥಾನದಲ್ಲಿರುವ ಹೊಗಳುಭಟ್ಟರು ಮತ್ತು ವಿದೂಷಕರು ಅಶೋಕರ ಫಲಾನುಭವಿಗಳೇ. ಇವುಗಳ ಮುಂದೆ ಸದಾನಂದ ಗೌಡರ ಇಮೇಜ್ ನಗಣ್ಯವಾಗಿ, ಅಶೋಕರ ಇನ್ನಿತರೇ ಅರ್ಹತೆಗಳೇ ಗೆದ್ದು ಅಶೋಕ್‌ಗೆ ಟಿಕೆಟ್ ಸಿಕ್ಕರೂ ಆಶ್ಚರ್ಯವಿಲ್ಲ.

ಅಶೋಕ್ ಈಗ ತಮ್ಮ ವರಸೆಯನ್ನು ಒಂದಷ್ಟು ಮೃದುಗೊಳಿಸಿದ್ದಾರೆ. ಮೊನ್ನೆ-ಮೊನ್ನೆ ಪಂಚತಾರಾ ಹೋಟೆಲ್ ಒಂದರಲ್ಲಿ ನಡೆದ ಬಿಜೆಪಿಯ ಸಭೆಯ ನಂತರ ಅಲ್ಲಿ ಹಾಜರಿದ್ದ ವೆಂಕಯ್ಯ ನಾಯ್ಡು ಅವರನ್ನು ಸಮಾಧಾನಪಡಿಸಲು "ನಾನು ಸದಾನಂದ ಗೌಡರ ಬಗ್ಗೆ ಆ ರೀತಿ ಮಾತನಾಡಿಯೇ ಇಲ್ಲ, ಮಾಧ್ಯಮದವರು ಸಲ್ಲದ ಗುಲ್ಲು ಎಬ್ಬಿಸಿದರು" ಎಂದು ತೇಪೆ ಹಚ್ಚುವ ಮಟ್ಟಕ್ಕೆ ತಲುಪಿದ್ದಾರೆ. ಮುಂದೇನಾಗುವುದು ಕಾದುನೋಡಬೇಕಾಗಿದೆ.

● ಬಿ.ನಾರಾಯಣ

ಯಡ್ಡಿ ಯಾರ ಪರ?



ಯಡಿಯೂರಪ್ಪ ಈಗ ಬಿಜೆಪಿಗೆ ಮರಳಿದ್ದಾರೆ. ಕೆಜೆಪಿ ಒಂದು ಕೆಟ್ಟ ಕನಸು ಎಂದು ಆತ್ಮವಿಮರ್ಶೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಯಡಿಯೂರಪ್ಪನವರಂತಹ ಹುಂಬ ಭಾವಾತಿರೇಕದ ನಾಯಕರಿಗೆ ಬಿಜೆಪಿ ಕೂಡ ಮತ್ತೊಮ್ಮೆ ದುಸ್ವಪ್ನವಾಗಲಿದೆ ಎಂಬ ಅರಿವು ಆಗುತ್ತಿದೆ. ಹೀಗಾಗಿಯೇ ಪಕ್ಷಕ್ಕೆ ಸೇರ್ಪಡೆಯಾದನಂತರ ನಡೆದ ಮೊದಲ ವಿಧಾನಸಭೆಯ ಕಾರ್ಯಕಲಾಪಗಳಿಗೆ ಮೂರು ದಿನಗಳ ಕಾಲ ಅವರು ಹಾಜರಾಗಲೇ ಇಲ್ಲ, ಮನಶಾಂತಿಗಾಗಿ ಕೇರಳದ ದೇವಾಲಯ ಒಂದಕ್ಕೆ ಹೋಗಿ ಬಂದನಂತರ ನೆಪಕ್ಕಾಗಿ ವಿಧಾನಸಭೆಯಲ್ಲಿ ಕಾಣಿಸಿಕೊಂಡಿದ್ದಾರೆ. ಅವರು ಪಕ್ಷ ಬಿಟ್ಟ ನಂತರ ಇಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಹಿಂದೊಮ್ಮೆ ತಾವೇ ಮುಖ್ಯಮಂತ್ರಿಯನ್ನಾಗಿ ಮಾಡಲು ಹೊರಟಿದ್ದ ಜಗದೀಶ ಶೆಟ್ಟರು ಈಗ ವಿಪಕ್ಷ ನಾಯಕ. ಅಶೋಕ್ ಕೂಡ ಡಬಲ್ ಗೇಮ್ ಆಡುತ್ತಿದ್ದಾರೆಂಬ ಅನುಮಾನ ಯಡ್ಡಿಗೆ. ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷಗಿರಿ ಕೂಡ ಅವರಿಗೆ ಸಮಾಧಾನ ತಂದಿಲ್ಲ.

ಹೀಗಾಗಿ ಪಕ್ಷದ ವಲಯದಲ್ಲಿ ಯಡಿಯೂರಪ್ಪ ಅವರ ಮಾತಿಗೆ ನೆಪಕ್ಕಾದರೂ ಮನ್ನಣೆ ಸಿಗುತ್ತಿಲ್ಲ. ಯಡಿಯೂರಪ್ಪ ಅವರನ್ನು ಪಕ್ಷಕ್ಕೆ ವಾಪಸ್ ಕರೆತರುವಲ್ಲಿ ಸದಾನಂದ ಗೌಡ ಮತ್ತು ಅರವಿಂದ ಲಿಂಬಾವಳಿ ಪ್ರಮುಖ ಪಾತ್ರ ವಹಿಸಿದ್ದರು. ಆದರೆ ಇವರಿಬ್ಬರಿಗೂ ಅಶೋಕರಿಗೂ ಅಷ್ಟಕಷ್ಟೇ.

ಅಶೋಕ್ ಮತ್ತು ಸದಾನಂದ ಗೌಡರ ನಡುವೆ ನಿಮಗಾರು ಹಿತವರು ಎಂದು ಯಡಿಯೂರಪ್ಪನವರ ಅಭಿಪ್ರಾಯ ಕೇಳಿದರೆ ಕಡಿಮೆ ಜಾತಿವಾದಿ ಎಂಬ ಕಾರಣಕ್ಕೆ ಸದಾನಂದ ಗೌಡರ ಪರ ಒಲವು ವ್ಯಕ್ತಪಡಿಸಬಹುದೇನೊ.

“ತಪ್ಪು ಮಾಡಿದ್ದಕ್ಕಲ್ಲ; ಸರಿಯಾದದ್ದನ್ನು ಮಾಡಿದ್ದಕ್ಕೆ ನನ್ನನ್ನು ಜೈಲಿಗೆ ದೂಡಲಾಗಿತ್ತು”

17 ಆಗಸ್ಟ್ 2007. ಮುಂಬೈನ ಅಂಧೇರಿಯ ...ಯೊಂದರಲ್ಲಿ ತನ್ನ ಪಾಡಿಗೆ ತಾನು ನಡೆದುಹೋಗುತ್ತಿದ್ದ ...ನ್ ಗೊಂಸಾಲ್ವೆಸ್‌ರ ಮೇಲೆ ಹಠಾತ್ ದಾಳಿ ಮಾಡಿದ ...ರಾಷ್ಟ್ರ ಭಯೋತ್ಪಾದಕ ನಿಗ್ರಹ ದಳದ ಪೊಲೀಸರು ...ನ್ನು ಬಂಧಿಸಿ 'ಟಾಪ್ ಲೆವೆಲ್ ನಕ್ಸಲ್ ನಾಯಕ', ...ಟಕ ಸಾಮಗ್ರಿಗಳ ದಾಸ್ತಾನು ಕೂಡಿಟ್ಟಿದ್ದ' ಅಂತೆಲ್ಲಾ ...ವಿಸಿ ಜೈಲಿಗೆ ತಳ್ಳಿದ್ದರು. ನಂತರ ಹತ್ತೊಂಬತ್ತು ...-ಹೊಸ ಕೇಸುಗಳನ್ನೂ ಅವರ ಮೇಲೆ ಹೇರಲಾಯಿತು. ...ರಾತ್ ಸರ್ಕಾರ ದಾಖಲಿಸಿರುವ ಒಂದನ್ನು ಬಿಟ್ಟು ...ದಲ್ಲ 18 ಕೇಸುಗಳು ಈಗ ವಜಾಗೊಂಡಿವೆ. ಈಗ ...ಯುತ್ತಿರುವ ಕೇಸ್‌ನ ಎಫ್‌ಐಆರ್ ದಾಖಲಾದದ್ದು ...ಅವರ ಬಂಧನವಾದ ಎರಡು ವರ್ಷಗಳ ನಂತರ. ...ಸ್ಥಿತ ಸಣ್ಣ ಸಮುದಾಯವೊಂದರ ಗೊಂಸಾಲ್ವೆಸ್, ...ನೆಸ್ ಪ್ರೊಫೆಸರ್ ಆಗಿದ್ದಂತವರು. ಎಡಪಂಥೀಯ ...ತಕ್ಕೆ ಬಲವಾಗಿ ಅಂಟಿಕೊಂಡವರು. ತಮ್ಮ ಈ ...ಂತಿಕ ಬದ್ಧತೆಯ ಕಾರಣಕ್ಕೆ ಅವರು ಜೀವನದಲ್ಲಿ ...ೀ ಬೆಲೆ ತೆರಬೇಕಾಗಿ ಬಂದದ್ದು ಮಾತ್ರ ವಿಪರ್ಯಾಸ. ... ತಿಂಗಳ ಹಿಂದೆ ಬಿಡುಗಡೆಯಾಗುವುದಕ್ಕೂ ಮುನ್ನ ...ಕಾನೂನುಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ ... ಶಸ್ತ್ರಾಸ್ತ್ರ ಕಾಯ್ದೆಯಡಿ ಹಲವಾರು ಪ್ರಕರಣಗಳ ...ದಿತನಾಗಿ ಕೋರ್ಟ್‌ನ ಕಟಕಟೆಯಲ್ಲಿದ್ದವರು. ಆ ...ಗಳಿಗೆ ಸಂಬಂಧಿಸಿದಂತೆ ವಿಧಿಸಬಹುದಾಗಿದ್ದ ಕಾರಾಗೃಹ ...ಕ್ಕಿಂತ ಹೆಚ್ಚಿನ ಅವಧಿಯನ್ನು ವಿಚಾರಣೆಯ ನೆಪದಲ್ಲಿ ...ನಲ್ಲೇ ಕಳೆದ ಗೊಂಸಾಲ್ವೆಸ್‌ರನ್ನು ತೀರ್ಪು ಹೊರಬಿದ್ದ ...ಕ್ಷಣವೇ ಕೋರ್ಟ್ ಮುಕ್ತವಾಗಿಸಿತ್ತು. ಅವರು ಮನಬಿಚ್ಚಿ ...ಸನಾಡಿದ ಸಂದರ್ಶನದ ತುಣುಕು ಇಲ್ಲಿದೆ.

*** ಪ್ರಶ್ನೆ: ಆರು ವರ್ಷ ಜೈಲಿನಲ್ಲಿ ಇರಬೇಕಾಗಿ ...ದ್ದರಿಂದ ಏನನ್ನಾದರು ಕಳೆದುಕೊಂಡಿದ್ದೇನೆ ಅಂತ ...ಗೆ ಅನ್ನಿಸುತ್ತದೆಯೇ?**

ಗೊಂಸಾಲ್ವೆಸ್: ಶೂನ್ಯ! ಆರು ವರ್ಷ ಜೈಲಿನಲ್ಲಿ ... ನಂತರವೂ ಏನನ್ನಾದರು ಕಳೆದುಕೊಂಡಿದ್ದೇನೆಯೆ ... ಯೋಚಿಸಿದಾಗ ನನ್ನೊಳಗೆ ಪ್ರತಿಧ್ವನಿಸುವ ಸ್ಪಷ್ಟ ...ನಿ 'ಶೂನ್ಯ' ಮಾತ್ರ. ಖಂಡಿತ ಇದು ಮಾತ್ರವೇ ...ಲ್ಲ ಎಂಬುದು ನನಗೆ ಚೆನ್ನಾಗಿ ಗೊತ್ತು. ಆದರೆ ...ಕೊಳ್ಳುವ ವಿಚಾರ ಪ್ರಸ್ತಾಪಿಸುವಾಗ, ಜೀವಮಾನವಿಡಿ ... ಬೇರೆಲ್ಲೂ ಪಡೆದುಕೊಳ್ಳಲಾರದಷ್ಟು ಸಮೃದ್ಧ ...ಭವಗಳ ಸಂಗ್ರಹವನ್ನೆ ನನಗೆ ನೀಡಿದ ಜೈಲುಜೀವನವನ್ನು ...ಕೊಳ್ಳದಿದ್ದರೆ ನಾನು ವಂಚಕ ಎನಿಸಿಬಿಡುತ್ತೇನೆ. ...ನಲ್ಲಿ ನಾನು ಭೇಟಿ ಮಾಡಿದ ವ್ಯಕ್ತಿಗಳು, ನಾನು ...ದ ಅವರ ಅನುಭವಗಳು, ನಾನು ಎದುರಿಸಿದ ಅವರ ...ಗೆಗಳು ಇವೆಲ್ಲ ನನಗೆ ಜೀವನವನ್ನು ಮತ್ತಷ್ಟು ...ಧ್ಯವಾಗಿ ಮತ್ತು ಆಳವಾಗಿ ಅರ್ಥಮಾಡಿಕೊಳ್ಳಲು ...ೂ ವಿಭಿನ್ನ ದೃಷ್ಟಿಕೋನದಿಂದ ನೋಡಲು ಕಲಿಸಿವೆ. ...ಮ್ಮೆ ನಾನು ಜೈಲಿಗೆ ಹೋಗಿ ಬರದಿದ್ದರೆ ಇಷ್ಟೆಲ್ಲ ...ಭವವನ್ನು ಗಳಿಸಿಕೊಳ್ಳಲು ನನ್ನ ಬದುಕಿನ ಮತ್ತೂ ...ವಷ್ಟು ವರ್ಷಗಳು ಗತಿಸಬೇಕಾಗುತ್ತಿತ್ತೇನೊ.

*** ಪ್ರಶ್ನೆ: ನಿಮ್ಮ ಕಾರಾಗೃಹವಾಸದ ಯಾವುದೋ ...ದು ಸಮಯದಲ್ಲಿ ನಿಮ್ಮ ಪರಿಸ್ಥಿತಿಯ ಬಗ್ಗೆ ನಿಮಗೆ ...ಯಾಗಿದ್ದುಂಟೆ?**

ಗೊಂಸಾಲ್ವೆಸ್: ನಿಜ ಹೇಳಬೇಕೆಂದರೆ, ಜೈಲಿನಲ್ಲಿ ನಾವು ...ಮಿತವಾಗಿ ಹಲವರ ದುಃಖದ ಜೀವನಕಥೆಗಳಿಗೆ ...ಯಾನಿಸಿ ಕೂರುತ್ತಿದ್ದೆವು; ಹಾಗೆ ಕೇಳಿಸಿಕೊಂಡ ದುರಂತ ...ಕುಗಳಿಗೆ ನಮ್ಮಿಂದಾದ ಪರಿಹಾರ ಸೂಚಿಸಲು ನಮ್ಮ ...ೋಚನೆಗಳನ್ನು ಹರಿಬಿಡುತ್ತಿದ್ದೆವು. ಜೈಲಿನೊಳಗೆ ಇಂತಹ ...ಷ್ಟು ಕಥೆಗಳು ಇದ್ದವೆಂದರೆ ನಮ್ಮ ವೈಯಕ್ತಿಕ ಜೀವನದ ... ಯೋಚಿಸಲೇ ಆಗುತ್ತಿರಲಿಲ್ಲ. ಸಾಮಾನ್ಯವಾಗಿ ಮನುಷ್ಯನ ...ಸ್ಸು ತನ್ನ ದುಃಖವನ್ನು ತನ್ನ ಸುತ್ತಲಿರುವವರ ...ಖಗಳೊಂದಿಗೆ ಹೋಲಿಸಿ ಅದರ ನೋವಿನ ...ಣವನ್ನು ತೂಕ ಹಾಕುತ್ತದೆ. ಜೈಲಿನಲ್ಲಿ ನನ್ನ ಸುತ್ತಲೂ ...ದುಕೊಂಡಿದ್ದವರ ಜೀವನಗಳು ಅದೆಷ್ಟು ನಿರ್ದಯವಾಗಿ ...ವಾಗಿದ್ದವೆಂದರೆ ಸ್ವಯಂವ್ಯಥೆ ಅನುಭವಿಸಲು ನನಗೆ ...ಕಾಶವನ್ನೇ ಕೊಡಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ನನಗ್ಯಾವ ...ಪಶ್ಚಾತ್ತಾಪವೂ ಇರಲಿಲ್ಲ. ನಾನು ಜೈಲಿನಲ್ಲಿರೋದು ...ಡಬಾರದ ಕೆಲಸಗಳನ್ನು ಮಾಡಿದ್ದಕ್ಕಾಗಲ್ಲ, ಮಾಡಬೇಕಾದ ...ಸಗಳನ್ನು ಮಾಡಿದ್ದಕ್ಕಾಗಿ ಎಂಬುದು ನನಗೆ ಚೆನ್ನಾಗಿ ...ಗೊತ್ತು. ಇಂತಹ ಒಂದು ಭಾವನೆ ಹಲವು ಬಗೆಯ ...ಥೆಗಳನ್ನು ಮೀರಿ ನಮಗೆ ನೈತಿಕ ಸ್ಥೈರ್ಯ ತುಂಬುತ್ತದೆ.

*** ಪ್ರಶ್ನೆ: ಜೈಲುಗಳಲ್ಲಿನ ಪರಿಸ್ಥಿತಿ ಹೇಗಿದೆ? ಮೊದಲು ...ವು ಮುಂಬೈನ ಆರ್ಥರ್ ರಸ್ತೆಯ ಜೈಲಿನಲ್ಲಿದ್ದಿರಿ ನಂತರ ...ನ್ಯ ಮಹಾರಾಷ್ಟ್ರದ ಗಢಚಿರೋಲಿಗೆ ವರ್ಗಾಯಿಸಲ್ಪಟ್ಟಿರಿ. ...ರ್ಥರ್ ರಸ್ತೆಯ ಜೈಲಿನಲ್ಲಿದ್ದಾಗ ದಾವೂದ್ ಇಬ್ರಾಹಿಂ ...ತ್ತು ಛೋಟಾ ರಾಜನ್‌ನಂತಹ ಗ್ಯಾಂಗ್‌ಸ್ಟರ್‌ಗಳ ...ಮಿನಲ್‌ಗಳನ್ನು ಇರಿಸಿದ್ದ ಯಾರ್ಡ್‌ನಲ್ಲೇ ನಿಮ್ಮನ್ನೂ ...ಿಸಲಾಗಿತ್ತು. ನೀವು ಅವರುಗಳ ಜೊತೆ ...ಮಾತನಾಡಿದ್ದುಂಟಾ?**

ಗೊಂಸಾಲ್ವೆಸ್: ನಾನು ಇದ್ದ ಜೈಲುಗಳು ಕೈದಿಗಳಿಂದ ...ತುಂಬಿತುಳುಕುತ್ತಿದ್ದವು. ಕೈದಿಗಳ ಸಂಖ್ಯೆಗೆ ಹೋಲಿಸಿದರೆ ಜೈಲುಗಳ ವಿಸ್ತೀರ್ಣ ಯಾತಕ್ಕೂ ಸಾಲದು. ಅಲ್ಲಿ ಕನಿಷ್ಠ ವೈದ್ಯಕೀಯ ಸೌಲಭ್ಯವೂ ಇರಲಿಲ್ಲ. ಇನ್ಸ್‌ಪೆಕ್ಟರ್ ಜನರಲ್ ಆಫ್ ಪ್ರಿಸನ್ಸ್ ಅವರು ನಕ್ಸಲ್ ಕೈದಿಗಳ ಕುರಿತು ಹೊರಡಿಸಿದ್ದ ಆದೇಶದಂತೆ ನನ್ನನ್ನು ಸಾಮಾನ್ಯ ಕೈದಿಗಳಿಂದ ಪ್ರತ್ಯೇಕಿಸಿಡಲಾಗಿತ್ತು. ಈ ಪ್ರತ್ಯೇಕತಾ ನೀತಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಬ್ರಿಟಿಷರು ರಾಜಕೀಯ ಹೋರಾಟಗಾರರನ್ನು ಸಾಮಾನ್ಯ ಕೈದಿಗಳಿಂದ ಪ್ರತ್ಯೇಕಿಸಿಡುತ್ತಿದ್ದರ ಯಥಾವತ್ ಅನುಕರಣೆ. ಸ್ವಾತಂತ್ರ್ಯ ಹೋರಾಟದ 'ಸೋಂಕು' ರಾಜಕೀಯ ಕೈದಿಗಳಿಂದ ಸಾಮಾನ್ಯ ಕೈದಿಗಳಿಗೆ ಹರಡಬಾರದೆನ್ನುವುದು ಬ್ರಿಟಿಷರ ತಂತ್ರವಾಗಿತ್ತು. ಹಾಗಾಗಿ ಬಿಗಿ ರಕ್ಷಣೆಯಲ್ಲಿ ಮುಂಬೈನ ಆರ್ಥರ್ ಜೈಲಿನಲ್ಲಿ ಹಾಗೂ ನವೀಮುಂಬೈನ ತಾಲೋಜಾ ಜೈಲಿನಲ್ಲಿ ಎರಡು ವರ್ಷಗಳ ಕಾಲ ನಾನು ಪ್ರತ್ಯೇಕವಾಗಿ ಕಳೆಯಬೇಕಾಯಿತು. ನಾಗಪುರದ ಸೆಂಟ್ರಲ್ ಜೈಲಿನಲ್ಲೂ ಹೀಗೆ ಪ್ರತ್ಯೇಕಿತ ಯಾರ್ಡ್‌ನಲ್ಲಿ ಮೂರುವರೆ ವರ್ಷ ಕಳೆದೆ. ಸಾಮಾನ್ಯ ಕೈದಿಗಳಿಂದ ಬೇರ್ಪಡಿಸಲ್ಪಟ್ಟ ಕೈದಿಗಳು ದಿನದ 16 ಗಂಟೆಗಳನ್ನು ಏಕಾಂಗಿಯಾಗಿ ಕಳೆಯಬೇಕು. ಇನ್ನುಳಿದ ಎಂಟು ಗಂಟೆಗಳಲ್ಲಿ ಮಾತ್ರ ಇತರೆ ಕೈದಿಗಳೊಂದಿಗೆ ಮಾತನಾಡಬಹುದು. ಇಲ್ಲಿ ಇತರೆ ಕೈದಿಗಳೆಂದರೆ ನಮ್ಮಂತೆಯೇ ಬಿಗಿ ರಕ್ಷಣೆಯಲ್ಲಿ ಪ್ರತ್ಯೇಕಿಸಲ್ಪಟ್ಟ, ನಮ್ಮ ಜೊತೆ ಮಾತನಾಡುವುದಕ್ಕೂ ಮುನ್ನ 16 ಗಂಟೆ ಏಕಾಂತದಲ್ಲಿ ಕಳೆದಂತವರೇ ಹೊರತು ಸಾಮಾನ್ಯ ಕೈದಿಗಳಲ್ಲ.

ಆರ್ಥರ್ ರೋಡ್ ಮತ್ತು ತಾಲೋಜಾ ಜೈಲಿನಲ್ಲಿ ಎಂಟು ಗಂಟೆ ಕಾಲ ನನಗೆ ಮಾತಿಗೆ ಸಿಗುತ್ತಿದ್ದವರೆಂದರೆ ಸಿಮಿ, ಲಷ್ಕರ್-ಇ-ತೊಯ್ಬಾ, ಇಂಡಿಯನ್ ಮುಜಾಯಿದ್ದೀನ್ ಮೊದಲಾದ ಸಂಘಟನೆಗಳ ಸಂಬಂಧವಿರಿಸಿಕೊಂಡವರು ಎಂಬ ಆಪಾದನೆ ಹೊತ್ತವರು. ಅಂತಹ ಬಹುತೇಕರಲ್ಲಿ ತಮ್ಮ ಮೇಲಿದ್ದ ಆಪಾದನೆಗೂ ಅವರಿಗೂ ಸಂಬಂಧವೇ ಇರುತ್ತಿರಲಿಲ್ಲ. ಹಾಗಾಗಿ ಅವರ ಜೊತೆಗಿನ ನಮ್ಮ ಚರ್ಚೆಯ ಬಹುಪಾಲು ಮಾತುಗಳು ಸರ್ಕಾರ ಹಾಗೂ ಪೊಲೀಸ್ ವ್ಯವಸ್ಥೆ ಮುಸ್ಲಿಂ ಸಮುದಾಯದ ಮೇಲೆ ಹೊಂದಿರುವ ಪೂರ್ವಗ್ರಹಪೀಡಿತ ಧೋರಣೆ, ಇದರಿಂದಾಗಿ ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯ ಮತ್ತು ಇದೇ ನೆಪಮಾಡಿಕೊಂಡು ಅರೆಸ್ಟ್ ಮಾಡುವುದಾಗಿ ಸಿರಿವಂತ ಮುಸ್ಲಿಮರನ್ನು ಬೆದರಿಸಿ ಸುಲಿಗೆ ಮಾಡುವ ಪೊಲೀಸ್ ಅಧಿಕಾರಿಗಳ ಸುತ್ತಲೇ ಗಿರಕಿ ಹೊಡೆಯುತ್ತಿದ್ದವು. ಭಯೋತ್ಪಾದಕ ನಿಗ್ರಹ ದಳದ ಕೆಳ ಅಧಿಕಾರಿಗಳಂತು ಇಂಟರಾಗೇಶನ್ ರೂಮ್‌ನಲ್ಲಿ ತಾವು ಹೇಗೆ ಮುಸ್ಲಿಮ್ ಕ್ರಿಮಿನಲ್‌ಗಳ ರಕ್ತ ಚೆಲ್ಲಾಡಿದ್ದೇವೆ ಎಂಬುದನ್ನು ಹೆಮ್ಮೆಯಿಂದ ಕೊಚ್ಚಿಕೊಳ್ಳುತ್ತಿದ್ದುದ್ದುಂಟು. ಹಾಗಾಗಿ ನನ್ನ ಜೊತೆ ಮಾತಿಗೆ ಸಿಗುತ್ತಿದ್ದ ಮುಸ್ಲಿಂ ಸಹಕೈದಿಗಳು ತಮ್ಮ 'ಟಾರ್ಚರ್' ವ್ಯಥೆಯನ್ನು ಹೇಳಿಕೊಳ್ಳಲು ಮುಂದಾದಾಗ ನಾನು ಮೊದಲೇ ಮನಸ್ಸನ್ನು ಗಟ್ಟಿಮಾಡಿಕೊಳ್ಳುತ್ತಿದ್ದೆ.

ಅಲ್ಲಿ ದಾವೂದ್ ಇಬ್ರಾಹಿಂನ ಡಿ-ಕಂಪನಿ, ಛೋಟಾ ರಾಜನ್ ಮತ್ತು ಇತರೆ ಗ್ಯಾಂಗ್‌ಗಳ ಆರೋಪಿಗಳೂ ಇದ್ದರು. ಅವರೆಲ್ಲಾ ನಿಜವಾದ ಕ್ರಿಮಿನಲ್‌ಗಳಾದ್ದರಿಂದ ಹಾಗೂ ಗ್ಯಾಂಗ್ ಲೀಡರ್‌ಗಳ ನೇರಸಂಪರ್ಕ ಇದ್ದುದರಿಂದ ಅದನ್ನೇ ತಮ್ಮ ಹೆಚ್ಚುಗಾರಿಕೆಯಂತೆ ಬಡಾಯಿಕೊಚ್ಚಿಕೊಳ್ಳುವುದು ಅವರ ಕೆಲಸವಾಗಿತ್ತು. ವಿಪರ್ಯಾಸ ಅಂದರೆ ಅವರು 'ಬಾಸ್' ಎಂದು ಸ್ವೀಕರಿಸಿದ ಗ್ಯಾಂಗ್‌ಸ್ಟರ್‌ಗಳೇ ಪೊಲೀಸಿನವರೊಂದಿಗೆ ಮಾಡಿಕೊಂಡ ರಕ್ಷಣಾತ್ಮಕ ಡೀಲ್‌ಗಳಿಗೋಸ್ಕರ ಅವರನ್ನು ತಂದು ಜೈಲಿನಲ್ಲಿ ಕೂರಿಸಿರುತ್ತಿದ್ದರು. ಡಿ-ಕಂಪನಿಯ ಕ್ರಿಮಿನಲ್‌ಗಳೆಂದು ಕೆಲವರನ್ನು ದುಬೈ ಅಥವಾ ಇನ್ನೆಲ್ಲಿಂದಲೋ ಕರೆತಂದು ಜೈಲಿನಲ್ಲಿರಿಸಲಾಗಿತ್ತು. ಅಂತವರು ಅಪ್ಪಿತಪ್ಪಿಯೂ ತಮ್ಮನ್ನು ಹೀಗೆ ಅಕ್ರಮವಾಗಿ ಸಾಗಿಸಿದ ಸರ್ಕಾರಗಳ ವಿರುದ್ಧ ಮಾತು ಬಿಚ್ಚುತ್ತಿರಲಿಲ್ಲ. ಮತ್ತೊಂದೆಡೆ, ಛೋಟಾ ರಾಜನ್ ಗ್ಯಾಂಗ್‌ನ ಕೆಲ ಎರಡನೇ ದರ್ಜೆ 'ಬಾಸ್'ಗಳು ತಮಗೆ ಗುಪ್ತಚರ ಇಲಾಖೆಯೊಂದಿಗೆ ನಂಟಿರುವುದಾಗಿ ಜಂಬ ಕೊಚ್ಚಿಕೊಳ್ಳುತ್ತಿದ್ದರು. ಗುಪ್ತಚರ ಇಲಾಖೆಯಲ್ಲೇ ತಮಗೆ ಗಾಡ್‌ಫಾದರ್ ಇದ್ದಾಗಲೂ ಹೀಗೇಕೆ ಅರೆಸ್ಟಾಗಿ ಜೈಲಿನಲ್ಲಿದ್ದೀರೆಂದು ಪ್ರಶ್ನಿಸಿದರೆ 'ಅದಕ್ಕೆಲ್ಲ ಪೊಲೀಸ್ ಇಲಾಖೆಯ ಬದ್ಮಾಶ್‌ಗಳು ಕಾರಣ' ಎಂಬ ಸಬೂಬು ಸಿದ್ಧವಾಗಿರುತ್ತಿತ್ತು. ಅಂದಹಾಗೆ ಅವರ ಪ್ರಕಾರ ಬದ್ಮಾಶ್ ಪೊಲೀಸರೆಂದರೆ ಅವರ ವಿರೋಧಿ ಗ್ಯಾಂಗ್‌ನ ಜೊತೆ ಸಖ್ಯ ಹೊಂದಿರುವ ಪೊಲೀಸರು. ವ್ಯವಸ್ಥಿತ ಅಪರಾಧಿ ಜಾಲದ ಭೂಗತ ಚಟುವಟಿಕೆಗಳು ಅವುಗಳ ಬಾಸ್‌ಗಳು, ಸರ್ಕಾರಗಳು ಮತ್ತು ರಕ್ಷಣಾ ಏಜೆನ್ಸಿಗಳ ಇಚ್ಛೆಗಳಿಗೆ ತಕ್ಕಂತೆ ನಡೆಯುತ್ತಿದ್ದದನ್ನು ನಾನು ಭಾಗಶಃ ಕಂಡಿದ್ದೇನೆ.

ಹಿಂದೂತ್ವ ಪ್ರೇರಿತ ಬಾಂಬ್ ಸ್ಫೋಟ ಪ್ರಕರಣದಲ್ಲಿ ಬಂಧಿತರಾದ ಸನಾತನ ಸಂಸ್ಥೆ ಮತ್ತು ಅಭಿನವ ಭಾರತ ಸಂಘಟನೆಗಳ ಆಪಾದಿತರೊಡನೆಯೂ ನಾನು ಮಾತನಾಡಿದ್ದುಂಟು. ಅದರಲ್ಲಿ ಅಭಿನವ ಭಾರತ ಸಂಘಟನೆಯ ಬಂಧಿತರಂತು ತಮ್ಮ ಬಂಧನದ ಆರಂಭದ ದಿನಗಳಲ್ಲಿ 'ಆಡಳಿತ ಯಂತ್ರದಲ್ಲಿ ತಮ್ಮ ಬೆಂಬಲಿಗರಿದ್ದು ಅವರು ನಮ್ಮನ್ನು ರಕ್ಷಿಸುತ್ತಾರೆ' ಎಂಬ ವಿಶ್ವಾಸದ ಮಾತನ್ನಾಡುತ್ತಿದ್ದರು. ಮುಸ್ಲಿಂ ಪ್ರದೇಶಗಳಲ್ಲಿ ಬಾಂಬ್ ಸ್ಫೋಟಿಸಿದ ಬಗ್ಗೆ ಅವರ್ಯಾರಿಗೂ ಇರಬೇಕಾದ ಪಾಪಪ್ರಜ್ಞೆಯೇ ಇರಲಿಲ್ಲ. ಅದನ್ನೊಂದು ದೇಶಭಕ್ತಿಯ ಕಾರ್ಯವೆಂದೇ ಅವರೆಲ್ಲ ಭಾವಿಸಿದಂತಿತ್ತು.

*** ಪ್ರಶ್ನೆ: ನೀವು ಬಿಡುಗಡೆಯಾಗಿದ್ದರೂ ನಿಮ್ಮ ಮೇಲೆ ಕೇಸ್ ಈಗಲೂ ನಡೆಯುತ್ತಿದೆಯಲ್ಲವೆ?**

ಗೊಂಸಾಲ್ವೆಸ್: ನನ್ನ ಮೇಲೆ 19 ಕೇಸ್‌ಗಳನ್ನು ಹೇರಲಾಗಿತ್ತು. ಅವುಗಳಲ್ಲಿ ಗುಜರಾತ್ ಸರ್ಕಾರದ ಒಂದು ಕೇಸನ್ನು ಬಿಟ್ಟು ಉಳಿದೆಲ್ಲವೂ ಸೂಕ್ತ ಸಾಕ್ಷ್ಯಾಧಾರವಿಲ್ಲದೆ ಬಿದ್ದು ಹೋಗಿವೆ. ಗುಜರಾತ್ ಕೇಸಾದರು ನಾನು ಅರೆಸ್ಟಾದ ಎರಡು ವರ್ಷದ ನಂತರ ಎಫ್.ಐ.ಆರ್ ದಾಖಲಾದದ್ದು. ಅಂದರೆ ಕೇಸ್ ದಾಖಲಾದಾಗ ನಾನಿನ್ನೂ ಜೈಲಿನಲ್ಲೇ ಇದ್ದೆ. ಈ ಪ್ರಕರಣದಡಿಯಲ್ಲಿರುವ ಎಲ್ಲರಿಗೂ ಸುಲಭವಾಗಿ ಬೇಲ್ ಸಿಗುವಷ್ಟು ಈ ಕೇಸ್ ಕೂಡಾ ತುಂಬಾ ವೀಕ್ ಆಗಿರುವುದು ಮೇಲ್ನೋಟಕ್ಕೇ ಕಂಡುಬರುತ್ತದೆ. ನಮಗೆಲ್ಲ ಜಾಮೀನು ಕೊಟ್ಟಿರುವುದರ ವಿರುದ್ಧ ಗುಜರಾತ್ ಸರ್ಕಾರ ಸುಪ್ರೀಮ್ ಕೋರ್ಟ್‌ವರೆಗೂ ಹೋಗಿತ್ತು. ಆದರೆ ಅಲ್ಲಿಯೂ ಅದರ ವಾದ ನಿಲ್ಲಲಿಲ್ಲ.

*** ಪ್ರಶ್ನೆ: ನೀವೊಬ್ಬ ನಕ್ಸಲೈಟಾ? ಮಹಾರಾಷ್ಟ್ರ ಎಟಿಎಸ್ ಟೀಮ್ ನಿಮ್ಮನ್ನೇಕೆ ಗುರಿಯಾಗಿಸಿಕೊಂಡಿದೆ? ಮಧ್ಯ ಮಹಾರಾಷ್ಟ್ರ ಪ್ರಾಂತ್ಯದಲ್ಲಿ ನೀವು ಕಾರ್ಮಿಕ ಸಂಘಟನೆ, ಹೋರಾಟದಲ್ಲಿ ತೊಡಗಿಸಿಕೊಂಡಿದ್ದಕ್ಕೆ ಇರಬಹುದಾ?**

ಗೊಂಸಾಲ್ವೆಸ್: ಆಡಳಿತ ವರ್ಗಗಳು ಮತ್ತು ಮಾಧ್ಯಮಗಳು 'ನಕ್ಸಲೈಟ್' ಎನ್ನುವ ಪದವನ್ನು 'ಭಯೋತ್ಪಾದಕ' ಪದಕ್ಕೆ ಪರ್ಯಾಯವೇನೊ ಎಂಬಂತೆ ಬಿಂಬಿಸಿರುವುದರಿಂದ ಎಂತವರೇ ಆದರೂ ತಾನು 'ನಕ್ಸಲೈಟ್' ಎಂದು ಒಪ್ಪಿಕೊಳ್ಳಲು ಕ್ಷಣಕಾಲ ಯೋಚಿಸಬೇಕಾಗಿದೆ. ಆದರೆ ಯಾವುದೇ ಕಾರಣಕ್ಕೂ ಒಬ್ಬ ನಕ್ಸಲೈಟ್ ಭಯೋತ್ಪಾದಕನಲ್ಲ. ನಮ್ಮ ದೇಶದ ಜನರಿಗಿರುವ ಹೋರಾಟದ ಅನಿವಾರ್ಯತೆಯನ್ನು ತೋರಿಸಿಕೊಟ್ಟ ಪಶ್ಚಿಮ ಬಂಗಾಳದ ನಕ್ಸಲ್‌ಬರಿ ಎಂಬ ಪುಟ್ಟ ಹಳ್ಳಿಯ ಬುಡಕಟ್ಟು ರೈತರ 1976ರ ಹೋರಾಟವನ್ನು ಒಪ್ಪಿಕೊಳ್ಳುವ ಪ್ರತಿಯೊಬ್ಬನೂ ಒಬ್ಬ ನಕ್ಸಲೈಟ್. ಆ ನಿಟ್ಟಿನಲ್ಲಿ ನಾನು ನಕ್ಸಲೈಟ್ ಹೌದು! ಇಷ್ಟೆಲ್ಲಾ ಹೇಳಿದ ಮೇಲೆ ನಾನು ಭಯೋತ್ಪಾದಕನಲ್ಲ ಎಂಬುದನ್ನು ಸ್ಪಷ್ಟೀಕರಿಸಿ ಹೇಳುವ ಅಗತ್ಯವಿಲ್ಲ ಎಂದುಕೊಳ್ಳುತ್ತೇನೆ.

ವಿದರ್ಭ ಪ್ರಾಂತ್ಯದಲ್ಲಿ ನಾನು ನಡೆಸಿದ ಕಾರ್ಮಿಕ ಹೋರಾಟಗಳೆ ಮಹಾರಾಷ್ಟ್ರ ಎಟಿಎಸ್ ತಂಡ ನನ್ನನ್ನು ಗುರಿ ಮಾಡಿಕೊಳ್ಳಲು ಕಾರಣ ಅಂತ ನನಗನ್ನಿಸುವುದಿಲ್ಲ. ನಕ್ಸಲಿಸಮ್‌ಗೆ ಸಂಬಂಧಿಸಿದಂತೆ ತಾವು ಕಾರ್ಯಪ್ರವೃತ್ತವಾಗಿದ್ದೇವೆ ಎಂಬುದನ್ನು ತೋರಿಸುವುದಕ್ಕೋಸ್ಕರ ಅವರಿಗೆ ಒಂದಷ್ಟು ಅರೆಸ್ಟ್‌ಗಳ ಅಗತ್ಯತೆ ಇತ್ತು. ಹಾಗಾಗಿ ಸುಳ್ಳು ಪಂಚನಾಮೆ, ಸುಳ್ಳು ಸಾಕ್ಷಿಗಳನ್ನು ಹುಟ್ಟುಹಾಕಿ ಸುಳ್ಳು ಪ್ರಕರಣವೊಂದರ ಸುಳ್ಳು ಎಫ್.ಐ.ಆರ್ ಸೃಷ್ಟಿಸಿ ನನ್ನನ್ನು ಬಂಧಿಸಿದ್ದರು. ಆನಂತರವಷ್ಟೆ ನಕ್ಸಲ್ ನಿಗ್ರಹ ಕಾರ್ಯಾಚರಣೆ (ಎಎನ್‌ಒ) ದಳದವರು ನನ್ನ ಮೇಲೆ ಕೊಲೆ ಯತ್ನವೂ ಸೇರಿದಂತೆ ಹದಿನೇಳು ಕೇಸುಗಳನ್ನು ಹೇರಿದ್ದು. ನನಗೂ ಆ ಕೇಸುಗಳಿಗೂ ಯಾವ ಸಂಬಂಧವೂ ಇಲ್ಲ ಮತ್ತು ನನ್ನ ಬಂಧನಕ್ಕೂ ಮುನ್ನ ಆ ಪ್ರಕರಣಗಳ ಎಫ್.ಐ.ಆರ್.ಗಳಲ್ಲಿ ನನ್ನ ಹೆಸರೇ ಇರಲಿಲ್ಲವೆನ್ನುವುದು ಅವರಿಗೆ ಚೆನ್ನಾಗಿಯೇ ತಿಳಿದಿತ್ತು. ಈ ಸಂಸ್ಥೆಗಳ ವ್ಯವಹಾರ ನೀತಿಯೇ ಇದು ತಾನೆ..

*** ಪ್ರಶ್ನೆ: ಕೊಬಡ್ ಘಾಂಡಿ ಪ್ರಕರಣ ತೀವ್ರ ಗಮನ ಸೆಳೆದಂತಹುದು. ನೀವಿಬ್ಬರೂ ಪರಸ್ಪರ ಭೇಟಿಯಾಗಿದ್ದಿರಾ? ಕೊಬಡ್ ಘಾಂಡಿ ಮತ್ತು ನಿಮ್ಮಂತಹ ಸುಶಿಕ್ಷಿತರೇ ಯಾಕೆ ಹೆಚ್ಚಾಗಿ ನಕ್ಸಲ್ ಚಳವಳಿಯ ಭಾಗವಾಗುತ್ತೀರಿ ಎಂಬ ಕುತೂಹಲ ಮತ್ತು ಅಚ್ಚರಿ ಮಾಧ್ಯಮಗಳಿಗೆ ಸಹಜವಾಗಿಯೇ ಇದೆ. ಇದು ಯಾಕೆ?**

ಗೊಂಸಾಲ್ವೆಸ್: ಕೊಬಡ್ ಘಾಂಡಿ ಮತ್ತು ನನ್ನ ಪರಿಚಯ ಸುಮಾರು 1970ರಷ್ಟು ಹಿಂದಿನದು. ತುರ್ತು ಪರಿಸ್ಥಿತಿಗೂ ಮುನ್ನ ನಾನು 'ಪ್ರಜಾಪ್ರಭುತ್ವ ಹಕ್ಕುಗಳ ಸಂರಕ್ಷಣಾ ಸಮಿತಿ'ಯ ಕಾರ್ಯಕರ್ತನಾಗಿದ್ದೆ. ಆಗ ಅವರು ಕೂಡಾ ಅದರ ಒಂದು ಮುಖ್ಯ ಭಾಗವಾಗಿದ್ದರು. ನಂತರ ಎಂಬತ್ತರ ದಶಕದಲ್ಲಿ ನಾನು ವಿದರ್ಭ ಪ್ರಾಂತ್ಯದ ಚಂದ್ರಾಪುರದ ಕಾರ್ಮಿಕರೊಂದಿಗೆ ಹೋರಾಟ ನಡೆಸುತ್ತಿದ್ದಾಗ ಅವರು ನಾಗ್ಪುರದಲ್ಲಿದ್ದರು. ಕಾರ್ಮಿಕರ ಹಲವು ವಿಷಯಗಳ ಚರ್ಚೆಯ ಸಂದರ್ಭದಲ್ಲಿ ನಾವು ಪರಸ್ಪರ ಭೇಟಿಯಾಗುತ್ತಿದ್ದೆವು.


ಕ್ರಾಂತಿ ಮತ್ತು ಪರಿವರ್ತನೆಯ ತುಡಿತಗಳು ನಿರಂತರವಾಗಿರುವಂತವು ಮತ್ತು ಅವು ನಿರಂತರವಾಗಿರುತ್ತವೆ. ಅವುಗಳ ಜೀವಂತಿಕೆ ಇರುವುದೇ ವಿದ್ಯಾರ್ಥಿ ಮತ್ತು ವಿದ್ಯಾವಂತರ ಪ್ರಜ್ಞೆಗಳಲ್ಲಿ. ನಕ್ಸಲ್ ಚಳವಳಿಯ ಆರಂಭದಲ್ಲಿ ಅಂದರೆ ಅರವತ್ತನೇ ದಶಕದಲ್ಲಿ ಅದು ದೆಹಲಿಯ ಸೇಂಟ್ ಸ್ಟೀಫನ್ಸ್ ಮತ್ತು ಕೊಲ್ಕೊತ್ತಾದ ಪ್ರೆಸಿಡೆನ್ಸಿಯಂತಹ ಪ್ರತಿಷ್ಠಿತ ಕಾಲೇಜುಗಳ ಪ್ರಜ್ಞಾವಂತ ವಿದ್ಯಾರ್ಥಿಗಳನ್ನೇ ಸೆಳೆದಿತ್ತು. ನಂತರದಲ್ಲೂ ಅದು ಹಲವು ದಶಕಗಳ ತನ್ನ ಹಾದಿಯಲ್ಲಿ ವಿವಿಧ ಕಾಲೇಜು, ವಿವಿಗಳ ವಿದ್ಯಾರ್ಥಿಗಳನ್ನು ತಲುಪಿದೆ. ಹಾಗಾಗಿ ನಕ್ಸಲ್ ಚಳವಳಿಯಲ್ಲಿ ವಿದ್ಯಾವಂತ, ಶಿಕ್ಷಿತ ಸಮುದಾಯದ ಪಾಲ್ಗೊಳ್ಳುವಿಕೆ ಅಚ್ಚರಿ ಪಡುವಂತದ್ದೇನೂ ಅಲ್ಲ. ಅದು ಸಹಜ ಅಷ್ಟೆ!

ಅನುವಾದ: ಗಿರೀಶ್ ತಾಳಿಕಟ್ಟೆ



ಬುಡಕಟ್ಟು ಸಮುದಾಯಗಳ ಕುರಿತು ವಿಶಿಷ್ಟ ಚರ್ಚೆ

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಒಂದಲ್ಲ ಒಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ ಇರುತ್ತದೆ. ಇತ್ತೀಚೆಗೆ ಇಲ್ಲಿ ಬುಡಕಟ್ಟು ಯುವ ಲೇಖಕರ ಮತ್ತು ಜನಪ್ರತಿನಿಧಿಗಳ ಮೂರು ದಿನಗಳ ತರಬೇತಿ ಶಿಬಿರವೊಂದು ನಡೆದಿತ್ತು. ವಿಶೇಷವಾಗಿ ಕೊಡಗು ಜಿಲ್ಲೆಗೆ ಹೆಚ್ಚಿನ ಪ್ರಾತಿನಿಧ್ಯ ನೀಡಿ ಈ ಕಾರ್ಯಕ್ರಮವನ್ನು ನಡೆಸಲಾಗಿತ್ತು.



ಈ ಸಮಾರಂಭದಲ್ಲಿ ಕರ್ನಾಟಕದ ಖ್ಯಾತ ಚಿಂತಕ ಎ.ಕೆ.ಸುಬ್ಬಯ್ಯ ಕೊನೆಯ ದಿನ ಭಾಗವಹಿಸಿದ್ದರು. ವಿಶೇಷವಾಗಿ ವಿಶ್ವವಿದ್ಯಾನಿಲಯದ ಬೋಧಕ ಮತ್ತು ಬೋಧಕೇತರ ವರ್ಗವೂ ಸೇರಿದಂತೆ ಅಲ್ಲಿನ ವಿದ್ಯಾರ್ಥಿಗಳು ಮತ್ತು ಆಸಕ್ತರಿಗಾಗಿ 'ಕರ್ನಾಟಕದಲ್ಲಿ ವಿರೋಧ ಪಕ್ಷಗಳು - ಚಳವಳಿ-ಮತ್ತು ಸವಾಲು' ಎಂಬ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

"ನಾನು ನನ್ನ ಯೌವನದಲ್ಲಿ ದೇಶದ ಎಲ್ಲಾ ಅನಾಹುತಗಳಿಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂಬ ವಿಚಾರವನ್ನು ಇಟ್ಟುಕೊಂಡಿದ್ದ ಕಾರಣ, ವಿದ್ಯಾರ್ಥಿ ದಿಸೆಯಲ್ಲಿಯೇ ಆಡಳಿತದ ವಿರೋಧ ಇರುವ ಪಕ್ಷಗಳಲ್ಲಿ ಗುರುತಿಸಿಕೊಂಡಿದ್ದೆ" ಎಂದು ಹೇಳಿದ ಸುಬ್ಬಯ್ಯನವರು "ತದನಂತರ ನಾನು ವಿಧಾನ ಪರಿಷತ್ತಿಗೆ ಪ್ರವೇಶಿಸಿದಾಗ, ಅಂದು ಪ್ರಭಾವಿ ವಿರೋಧಿ ನಾಯಕರಾಗಿದ್ದ ಗೋಪಾಲಗೌಡರಿಂದ ಪ್ರಭಾವಿತನಾಗಿದ್ದೆ. ಸಂಖ್ಯೆಯಲ್ಲಿ ಕಡಿಮೆ ಶಾಸಕರಿದ್ದರೂ ಒಂದು ಅರ್ಥಪೂರ್ಣ ವಿರೋಧ ಪಕ್ಷವಾಗಿ ಗೋಪಾಲ ಗೌಡರು ಇದ್ದರು. ಎಂದೂ ಕೂಡ ಆಳುವವರ ಹತ್ತಿರ ಸುಳಿದವರಲ್ಲ. ಮುಖ್ಯಮಂತ್ರಿ ನಿಜಲಿಂಗಪ್ಪನವರು ಗೋಪಾಲ ಗೌಡರಿಗೆ ಅಷ್ಟೊಂದು ಗೌರವ ಕೊಡುತ್ತಿದ್ದರು. ಆದರೆ ಈಗ ವಿಧಾನಸಭಾ ಅಧಿವೇಶನ ನಡೆಯುವ ವೇಳೆಯಲ್ಲಿ ತಮ್ಮ ಕೆಲಸಕಾರ್ಯಗಳಿಗಾಗಿ ವಿರೋಧ ಪಕ್ಷದ ಸಾಲಿನಲ್ಲಿರುವವರು ಆಡಳಿತ ಪಕ್ಷದ ಅಧಿಕಾರದಲ್ಲಿ ಇರುವವರನ್ನು ಭೇಟಿಯಾಗುವ ದೃಶ್ಯವನ್ನು ಕಾಣಬಹುದಾಗಿದೆ. ಹಾಗಾಗಿ ಎಂತಹ ವಿರೋಧ ಪಕ್ಷವನ್ನು ನಾವು ಕಾಣಬಹುದು" ಎಂದು ಪ್ರಶ್ನಿಸಿದರು.

"ಈಗ ಅಧಿಕಾರಕ್ಕೆ ಬಾರದೆ ಇದ್ದರೆ ತಮ್ಮ ಜೀವನ ವ್ಯರ್ಥ ಎಂದು ಭಾವಿಸುವವರೇ ಹೆಚ್ಚಾಗಿರುವಾಗ, ಆಡಳಿತ ಪಕ್ಷದ ದುರಾಡಳಿತವನ್ನು ಹದ್ದಿನ ಕಣ್ಣಿನಿಂದ ನೋಡುವವರ ಸಂಖ್ಯೆ ಇಲ್ಲವಾಗಿದೆ. ಇದಕ್ಕೆ ಕಾರಣ ಜನ ಮತ ಚಲಾಯಿಸದೆ ಮತವನ್ನು ಮಾರಾಟಕ್ಕೆ ಇಟ್ಟಿರುವುದು" ಎಂದು ಅವರು ವಿಶ್ಲೇಷಿಸಿದರು.

"ಕರ್ನಾಟಕದಲ್ಲಿ ಈಗ ಎರಡೇ ಪಕ್ಷವಿರುವುದು. ಒಂದು ಅಧಿಕಾರದಲ್ಲಿ ಇರುವ ಪಕ್ಷ. ಮತ್ತೊಂದು ಅಧಿಕಾರಕ್ಕಾಗಿ ಕಾಯುತ್ತಿರುವ ಪಕ್ಷ. ಹಾಗಾಗಿ ವಿರೋಧ ಪಕ್ಷ ಎಂಬುದು ಇಲ್ಲವಾಗಿದೆ. ವಿಶ್ವಾಸಾರ್ಹ ವಿರೋಧ ಪಕ್ಷವಿದ್ದರೆ ಮಾಹಿತಿಗಳು ತನ್ನಿಂದ ತಾನೇ ಸಿಗುತ್ತದೆ" ಎಂದು ಹೇಳಿದ ಅವರು "ಈಗ ಪ್ರಬಲ ವಿರೋಧ ಪಕ್ಷಗಳು ಇಲ್ಲದೆ ಇರುವುದರಿಂದ ಪ್ರಜಾಪ್ರಭುತ್ವ ವಿಫಲವಾಗುತ್ತಿದೆ" ಎಂದು ಹೇಳಿದರು.

ಮೊದಲ ದಿನ ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಹಿ.ಚಿ. ಬೋರಲಿಂಗಯ್ಯ ಬುಡಕಟ್ಟು ಜನರು ಪಡುತ್ತಿರುವ ಬವಣೆಯ ಬಗ್ಗೆ ವಿಶ್ಲೇಷಿಸಿದರು. ಆಳುವ ವರ್ಗದವರ ಚರಿತ್ರೆಯನ್ನೇ ಚರಿತ್ರೆ ಎಂದು ಬಿಂಬಿಸಿ ವೈಭವೀಕರಣ ಮಾಡುತ್ತಿರುವುದು ಒಂದು ದೊಡ್ಡ ದುರಂತ ಎಂದು ಅಭಿಪ್ರಾಯಪಟ್ಟರು.

ಅವರು ನೀಡಿದ ಕೆಲವು ಅಂಕಿಸಂಖ್ಯೆಗಳು ನಿಜವಾಗಿಯೂ ಕಣ್ಣು ತೆರೆಸುವ ರೀತಿಯಲ್ಲಿದ್ದವು. "ಬುಡಕಟ್ಟು ಜನಾಂಗದವರು ಸಹಜವಾದ ಕಾಡನ್ನು ಅಭಿಮಾನದಿಂದ ಬೆಳೆಸಿದವರು. ಈಗ ಕಾಡು ಸಂರಕ್ಷಿಸುವ ದೃಷ್ಟಿಯಿಂದ ಬುಡಕಟ್ಟು ಜನಾಂಗದವರನ್ನು ಕಾಡಿನಿಂದ ಹೊರಹಾಕಬೇಕು ಎಂದು ಕೆಲವರು ಹೇಳುತ್ತಿದ್ದಾರೆ. ಮೊದಲು ಶೇ. 42ರಷ್ಟು ಅರಣ್ಯ ಪ್ರದೇಶವಿತ್ತು. ಈಗ ಗಿರಿಜನರನ್ನು ಹೊರಗಿಟ್ಟ ನಂತರ ಶೇ. 12ಕ್ಕೆ ಅದು ಇಳಿದಿದೆ" ಎಂದು ಹೇಳಿದ ಅವರು "ಬುಡಕಟ್ಟು ಜನಾಂಗದವರಿಗೆ ಹಲವಾರು ಆಮಿಷಗಳನ್ನು ಒಡ್ಡಿ ಅವರನ್ನು ಹೊರಹಾಕಲಾಗುತ್ತಿದೆ. ಇವರು ಎಂದಿಗೂ ಕೃಷಿ ಮಾಡಿದವರಲ್ಲ. ಕಾಡಿನಲ್ಲಿ ಸಿಗುತ್ತಿದ್ದ ಗೆಡ್ಡೆ ಗೆಣಸುಗಳು ಸೇರಿದಂತೆ ಹಲವಾರು ಉತ್ಪನ್ನಗಳನ್ನು ಸಂಗ್ರಹಿಸಿ, ಜೀವನ ಸಾಗಿಸುತ್ತಿದ್ದವರು. ಈಗ ಏಕಾಏಕಿ ಕೃಷಿ ಜಮೀನು ನೀಡಿದರೆ ಅವರೇನು ಮಾಡಲು ಸಾಧ್ಯ?" ಎಂದು ಪ್ರಶ್ನಿಸಿದರು. "ಸಂಸ್ಕೃತಿ ಮತ್ತು ಅಭಿವೃದ್ಧಿ ಒಂದಕ್ಕೆ ಒಂದು ಪೂರಕವಾಗಿ ಇರುತ್ತದೆ" ಎಂದು ಹೇಳಿದ ಅವರು "ಭಾರತ ದೇಶ ಇಷ್ಟೊಂದು ಹಿಂದುಳಿಯಲು ಐ.ಎ.ಎಸ್. ಲಾಬಿ ಮತ್ತು ಕೆಟ್ಟ ರಾಜಕಾರಣವೇ ಕಾರಣ. ನಮ್ಮ ದೇಶದ ದೊಡ್ಡ ದುರಂತಗಳಲ್ಲಿ ಒಂದು ಎಂದರೆ ಅಕ್ಷರ ಕಲಿಯದೆ ಜ್ಞಾನ ಪಡೆದವರನ್ನು ವಿದ್ಯಾವಂತೆ ಎನ್ನದೇ ಇರುವುದು" ಎಂದು ಹೇಳುವ ಮೂಲಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬುಡಕಟ್ಟು ಜನಾಂಗದ ಯುವಪೀಳಿಗೆಗೆ ಹಲವಾರು ಸಂದೇಶಗಳನ್ನು ನೀಡಿದರು.

ಕೆ.ಆರ್.ವಿದ್ಯಾಧರ ಅವರು ನಿರ್ಲಕ್ಷಿಸಿದ ಸಮುದಾಯದ ಭಾಷೆಗಳಿಗಾಗಿ ಕೇಂದ್ರವೊಂದನ್ನು ಸ್ಥಾಪಿಸಬೇಕು ಎಂದರಲ್ಲದೆ, ವೀರಪರಂಪರೆ ಮತ್ತು ಶೌರ್ಯ ಪರಂಪರೆ ಬುಡಕಟ್ಟು ಜನಾಂಗದಲ್ಲಿ ಹೊರಜಗತ್ತಿಗೆ ಕಾಣದಷ್ಟು ಇದೆ ಎಂದು ಹೇಳುವ ಮೂಲಕ ಬುಡಕಟ್ಟು ಜನಾಂಗದವರ ಸಂಸ್ಕೃತಿ, ಸಾಹಿತ್ಯ ಪರಂಪರೆ ಎಷ್ಟೊಂದು ಶ್ರೀಮಂತವಾಗಿದೆ ಎಂದು ವಿವರಿಸಿದರು.

ಹಂಪಿ ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ವಿಜಯ್ ತಂಬಂಡ ಪೂಣಚ್ಚ ಅವರು ವಿಶೇಷ ಆಸಕ್ತಿಯಿಂದ ರೂಪಿಸಿದ್ದ ಈ ಕಾರ್ಯಕ್ರಮದಲ್ಲಿ "ಚರಿತ್ರೆಯು ಒಂದು ವರ್ಗದ ಜನತೆ ರೂಪಿಸಿಕೊಟ್ಟ ಸಂಸ್ಕೃತಿಯಾಗಿದೆ. ಶಿಷ್ಟ ಸಂಸ್ಕೃತಿಯನ್ನೇ ಸಂಸ್ಕೃತಿ ಎಂದು ಬಿಂಬಿಸಲಾಗುತ್ತಿದೆ. ಇದರಿಂದಾಗಿ ಎಲ್ಲರನ್ನು ಕೆಲವರೇ ಪ್ರತಿನಿಧಿಸುವ ಕಾರ್ಯವಾಗುತ್ತಿದೆ. ಶೋಷಣೆಗೆ ಒಳಗಾದವರ ಧ್ವನಿ ಎಲ್ಲಿಯೂ ಕೇಳಿಬರುವುದಿಲ್ಲ" ಎಂದು ಹೇಳಿದರು.

"ಬುಡಕಟ್ಟು ಜನರಿಗೆ ಕೇಂದ್ರ ಸರಕಾರ ರೂಪಿಸಿರುವ ಅರಣ್ಯ ಹಕ್ಕು ಕಾಯ್ದೆ ಅನುಷ್ಠಾನಗೊಳಿಸಲು ಅಧಿಕಾರಿಗಳು ಮತ್ತು ರಾಜಕೀಯ ವ್ಯಕ್ತಿಗಳು ಅಡ್ಡಿಪಡಿಸುತ್ತಿದ್ದಾರೆ" ಎಂದು ನಿಸರ್ಗ ಫೌಂಡೇಶನ್ನಿನ ನಂಜುಂಡಯ್ಯ ಅಭಿಪ್ರಾಯಪಟ್ಟರು. "ಕಾಯ್ದೆಯನ್ನು ನೋಡುವ ದೃಷ್ಟಿಕೋನ ಬದಲಾಗದಿದ್ದರೆ ಪ್ರಯೋಜನವೇನು? ಅಧಿಕಾರಿಗಳು ಇಲ್ಲಸಲ್ಲದ ಸಬೂಬು ಹೇಳಿ, ಅರಣ್ಯ ಹಕ್ಕು ಸಿಗದಂತೆ ನೋಡಿಕೊಳ್ಳುತ್ತಿದ್ದಾರೆ. ಅಲ್ಲದೆ ಅರಣ್ಯವನ್ನು ಬುಡಕಟ್ಟು ಜನರಿಗೆ ನೀಡಿದರೆ, ಅರಣ್ಯ ನಶಿಸಿಹೋಗುತ್ತದೆ ಎಂಬ ಅಪಪ್ರಚಾರವನ್ನು ಸಹ ಮಾಡುತ್ತಿದ್ದಾರೆ" ಎಂದರು.

ಬುಡಕಟ್ಟು ಅಭಿವೃದ್ಧಿ ಮತ್ತು ಮಾನವ ಹಕ್ಕುಗಳು ಎಂಬ ವಿಚಾರದ ಬಗ್ಗೆ ಮಾತನಾಡಿದ ಡಾ.ಹೆಚ್.ಡಿ.ಪ್ರಶಾಂತ್ ಅವರು "ಮಾನವ ಹಕ್ಕನ್ನು ಸರಕಾರ ವಿಶಾಲ ದೃಷ್ಟಿಯಿಂದ ನೋಡುತ್ತಿಲ್ಲ, ಅಂಕಿಸಂಖ್ಯೆಗಳ ಪ್ರಕಾರ 2,56,384 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸರಕಾರ ಹೇಳುತ್ತಿದೆ. ಆದರೆ ಇದು ವಾಸ್ತವವಲ್ಲ, ಕೃಷಿಯ ಮೇಲೆ ಅವಲಂಬಿತರಾಗಿದ್ದ ಸಾಕಷ್ಟು ಮಹಿಳೆಯರು ಕೂಡ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಇವು ಯಾವುದೂ ಕೂಡ ದಾಖಲಾಗಿಲ್ಲ" ಎಂಬ ವಾಸ್ತವವನ್ನು ಬಿಚ್ಚಿಟ್ಟರು. "ಸರಕಾರ ಎಷ್ಟೊಂದು ತಾರತಮ್ಯ ಮಾಡುತ್ತಿದೆ ಎಂದರೆ, ಎನ್.ಆರ್.ಹೆಚ್.ಎಂ. ಯೋಜನೆ ಹಾಡಿಗಳಿಗೆ ಸಿಗುತ್ತಿಲ್ಲ. ಆರ್.ಟಿ.ಇ. ಕೇವಲ ಸರಕಾರಿ ಶಾಲೆಗೆ ಮಾತ್ರ ಸೀಮಿತವಾಗಿದೆ. ಆರ್.ಟಿ.ಇ. ಎಂಬುದು ಒಂದು ದೊಡ್ಡ ರಾಜಕಾರಣ. ಬಡವರ ಮಕ್ಕಳು ಶಾಲೆಗೆ ಹೋಗದೆ ಇರುವಂತಹ ವಾತಾವರಣವನ್ನು ಸೃಷ್ಟಿಸುವುದೇ ಇವರ ಉದ್ದೇಶ"ಎಂದು ವಿಶ್ಲೇಷಿಸಿದರು.

ಕೊನೆಗೆ ಈ ಕಾರ್ಯಕ್ರಮ ಅರ್ಥಪೂರ್ಣವಾಗುವ ನಿಟ್ಟಿನಲ್ಲಿ ಕೆಲವೊಂದು ನಿರ್ಣಯಗಳನ್ನು ಕೈಗೊಳ್ಳಲಾಯಿತು.

1. ಇವುಗಳಲ್ಲಿ ಪ್ರಮುಖವಾದದ್ದು ಕೊಡಗಿಗೆ ಸಂಬಂಧಪಟ್ಟಂತೆ ಯಾವುದೇ ರೀತಿಯ ನೀತಿ ರೂಪಿಸುವಾಗ ಇಲ್ಲಿಯವರೆಗೆ ಕೇವಲ ಶ್ರೀಮಂತ ವರ್ಗದವರ ಮತ್ತು ಮೇಲ್ವರ್ಗದವರ ಅಭಿಪ್ರಾಯವನ್ನಷ್ಟೇ ಪಡೆಯಲಾಗುತ್ತಿತ್ತು. ಇನ್ನು ಮುಂದೆ ಯಾವುದೇ ನೀತಿ ರೂಪಿಸುವಾಗ ಕೇವಲ ಒಂದು ವರ್ಗದ ಅಭಿಪ್ರಾಯಕ್ಕೆ ಮಾತ್ರ ಮನ್ನಣೆ ನೀಡದೆ, ಕೊಡಗು ಜಿಲ್ಲೆಯಲ್ಲಿ ವಾಸಿಸುವ ಬುಡಕಟ್ಟು ಜನಾಂಗ, ಹಿಂದುಳಿದ ಜನಾಂಗ ಸೇರಿದಂತೆ ಎಲ್ಲಾ ವರ್ಗದವರ ಅಭಿಪ್ರಾಯವನ್ನು ಸಂಗ್ರಹಿಸಿ ನೀತಿ ರೂಪಿಸಬೇಕು.

2. ಅರಣ್ಯ ಹಕ್ಕುಗಳ ಕಾಯ್ದೆ ಅನುಷ್ಠಾನ ಕೊಡಗಿನಲ್ಲಿ ತ್ವರಿತವಾಗಿ ನಡೆಯಬೇಕು. ಈ ನಿಟ್ಟಿನಲ್ಲಿ ಬೇಕಾದಂತಹ ಗ್ರಾಮ ಸಭೆಗಳು ನಡೆಯಬೇಕು. ಸಮುದಾಯ ಹಕ್ಕು ಮತ್ತು ವೈಯಕ್ತಿಕ ಹಕ್ಕು ಸಿಗುವಂತಾಗಬೇಕು.

3. ಜಿಲ್ಲೆಯ ಪರಿಶಿಷ್ಟ ಪಂಗಡವಾದ "ಕೆಂಬಟ್ಟಿ" ಸಮುದಾಯವನ್ನು ಜಾತಿ ದೃಢೀಕರಣದಲ್ಲಿ ಕೆಂಬಟ್ಟಿ ಸಮುದಾಯವೆಂದೇ ಗುರುತಿಸಿ ನಮೂದಾಗಬೇಕು.


4. "ಬೆಟ್ಟ ಕುರುಬ"ರು ಆದಿ ಗಿರಿಜನ ಜನಾಂಗವಾಗಿದ್ದು, ಅವರಿಗೆ ಈಗ ಕುರುಬರು ದೃಢೀಕರಣವನ್ನು ನೀಡಲಾಗುತ್ತಿದ್ದು, ಅವರನ್ನು ಬೆಟ್ಟ ಕುರುಬರು ಎಂದು ಕರೆದು ದೃಢೀಕರಣವನ್ನು ನೀಡಬೇಕು.

5. ಮತ್ತೊಂದು ಪರಿಶಿಷ್ಟ ಪಂಗಡವಾದ ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಅಂದರೆ ಒಟ್ಟಾರೆ 150ಕ್ಕೂ ಕಡಿಮೆ ಜನರಿರುವ "ಕಾಪಾಳ ಜನಾಂಗ"ದವರಿಗೂ ಪರಿಶಿಷ್ಟ ಪಂಗಡದ ದೃಢೀಕರಣವನ್ನು ನೀಡಬೇಕು ಎಂದು ನಿರ್ಣಯಿಸಲಾಯಿತು.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಕೊಡಗಿನ ದಮನಿತ ವರ್ಗದ ಬಗ್ಗೆ ಮೂರು ದಿನಗಳ ಕಾಲ ನಡೆಸಿದ ಈ ಶಿಬಿರದಲ್ಲಿ ತೆಗೆದುಕೊಂಡ ನಿರ್ಣಯಗಳು ಜಾರಿಯಾದರೆ ಖಂಡಿತವಾಗಿಯೂ ಈ ಶಿಬಿರ ಯಶಸ್ಸನ್ನು ಕಂಡಂತೆ ಆಗುತ್ತದೆ. ಕೊಡಗಿನವರೇ ಆದ ಕುಲಸಚಿವ ಡಾ.ವಿಜಯ್ ತಂಬಂಡ ಪೂಣಚ್ಚ ಅವರ ಪ್ರಾಮಾಣಿಕ ಪ್ರಯತ್ನಕ್ಕೆ ಫಲ ದೊರಕಿದಂತೆ ಆಗುತ್ತದೆ.

● ಮನು ಶೆಣೈ

ಭಾರತ



ಹೆಮ್ಮೆ ಮತ್ತು ಗರ್ವ ತೊಟ್ಟ,
ಈ ಹೆಸರಿನ ನಾಮಸ್ಮರಣೆ ಮಾಡಿದರೆ ಸಾಕು
ಮತ್ತಿನ್ನೇನು ಬೇಕಿಲ್ಲ.

ಈ ಹೆಸರಿನ ಅರ್ಥ ಇರುವುದು
ಬಯಲಲ್ಲಿ ಮರದ ನೆರಳನ್ನು ಅಳೆಯುತ್ತ
ಸಮಯ ತಿಳಿದುಕೊಳ್ಳುವ
ಮಕ್ಕಳ ನಡುವೆ.
ಆ ಮಕ್ಕಳಿಗೆ
ಹಸಿವೆಯ ಹೊರತು ಮತ್ತ್ಯಾವ ಸಮಸ್ಯೆಯೂ ಇಲ್ಲ,
ಹಸಿದಾಗ ಅವರು
ತಿನ್ನಬಲ್ಲರು ತಮ್ಮ ರಕ್ತ ಮಾಂಸಗಳನ್ನೇ.
ಬದುಕು ಅವರಿಗೆ ಒಂದು ಆಚಾರ
ಸಾವಿನ ಅರ್ಥ- ವಿಮುಕ್ತಿ.

ದೇಶದ ಐಕ್ಯತೆ ಕುರಿತು ಯಾರಾದರು ನುಡಿದರೆ
ಅವರ ಮುಂಡಾಸನ್ನು ಗಾಳಿಯಲ್ಲಿ ಹಾರಿಸಿ
[illegible]ಳಬಯಸುತ್ತೇನೆ ನಾನು
ಭಾರತದ ಅರ್ಥ
ಯಾವುದೋ ದುಷ್ಯಂತನಿಗೆ ಸಂಬಂಧಿಸಿಲ್ಲ
ಅದು ನೆಲೆಸಿರುವುದು ಹೊಲ ತೋಟಗಳಲ್ಲಿ
ಬತ್ತ ಬೆಳೆಯುವಲ್ಲಿ
ದರೋಡೆ ಅಗೋಚರವೂ ಮೌನವೂ ಆಗಿರುವಲ್ಲಿ.

ಪಂಜಾಬಿ ಮೂಲ: ಪಾಶ್
ಕನ್ನಡ ಅನುವಾದ: ಸಂವರ್ತ 'ಸಾಹಿಲ್'

ವ್ಯಾಮೋಹಿ ಖುಷವಂತ್ ಸಿಂಗ್‌ರ 'ಸನ್ಯಾಸಿ' ಬರಹಗಳು

ವಿದುಕುವುದಕ್ಕೆ ನನಗಿರುವುದು ಒಂದೇ ಒಂದು ಮತ್ತು ಅದು ಎಂದು ಕೊನೆ ಮುಟ್ಟುತ್ತದೆಂದು ವಿರುವುದರಿಂದ ಬದುಕಿನಿಂದ ಪಡೆಯುವುದೆಲ್ಲವನ್ನೂ ಖತ್ತೇನೆಂದು ತೀರ್ಮಾನಿಸಿ ಬದುಕುತ್ತಿರುವ ಈ ನೆಹ್ರೂವಿಯನ್ ಉದಾರವಾದದ ಕೊನೆಯ ಕೊಂಡಿ ವಂತ್ ಸಿಂಗ್ ತಮ್ಮ ೯೫ನೇ ವಯಸ್ಸಿನಲ್ಲಿ ಬರೆದ ಅನುವಾದ 'ಖುಷವಂತ್ ನಾಮಾ-ನನ್ನ ಬದುಕಿನ ಳು . ಸಂಪ್ರದಾಯಿ ಹಿಂದೂಗಳ ಪ್ರಕಾರ ೬೮ ಯಸ್ಸು ಒಂಟಿಯಾಗಿ ಧ್ಯಾನ ಮಾಡಬೇಕಾದ ಜೀವನ ಬೀ ಸನ್ಯಾಸ ಅವಸ್ಥೆಯ ವಯಸ್ಸು. ಆದರೆ ಖುಷವಂತ್ ಈ ವಯಸ್ಸಿನಲ್ಲೂ ಅಪಾರವಾದ ಜೀವನ ತತ್ಪರರು.

ಹೇಳಿಕೊಳ್ಳುವಂತೆ ಇದು ಅವರ ಕೊನೆಯ ನಾಗಬಹುದಾದರೂ, ಇನ್ನು ಸಾಯಬೇಕೆಂದು ಸ್ಸಗುತ್ತಿದ್ದರೂ, ಜೀವನದಲ್ಲಿ ಇನ್ನು ಮಾಡುವುದಕ್ಕೆ ಉಳಿದಿಲ್ಲ ಎನಿಸುತ್ತಿದ್ದರೂ ಈಗಲೂ ಅವರು ನ ಜಗತ್ತಿನ ಬಗ್ಗೆ ಕುತೂಹಲವನ್ನು ಮೊದಲಿನ ಮೇ ಇಟ್ಟುಕೊಂಡಿದ್ದಾರೆ. ಕಾವ್ಯದಲ್ಲಿ, ಸಾಹಿತ್ಯ ಮತ್ತು ಪ್ರಕೃತಿ ವೀಕ್ಷಣೆಯಲ್ಲಿ ರಸಾನುಭವ ಪಡೆದು ತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮನಸ್ಸು ಮತ್ತು ಸದಾ ಕೆಲಸ ಮಾಡುತ್ತಿರಬೇಕು ಎಂಬ ತತ್ವವೇ ಜೀವನ ದೃಷ್ಟಿಯೂ ಆಗಿದೆ. ಹೀಗಾಗಿಯೇ ಕಳೆದ ವರ್ಷಗಳಿಂದ ಸತತವಾಗಿ ದೇಶದ ಪ್ರಮುಖ ಕೆಳಿಗೆ ವಾರಕ್ಕೆರಡು ಅಂಕಣಗಳನ್ನು ಬರೆದಿದ್ದಾರೆ. ಸನ್ ಸೆಟ್ ಕ್ಲಬ್ ಎಂಬ ಕಾದಂಬರಿಯನ್ನು ಬರೆದದ್ದು ಅವರಿಗೆ 95 ವಯಸ್ಸು ತುಂಬಿದಾಗ! ಆತ್ಮಚರಿತ್ರೆ 'ಟ್ರೂತ್, ಲವ್ ಅಂಡ್ ಲಿಟಲ್ ಸ್' ಅನ್ನು ಪೆಂಗ್ವಿನ್ ಪ್ರಕಾಶನ ಪ್ರಕಟಿಸಿದ್ದು 91 ತುಂಬಿದಾಗ...


ಖುಷವಂತ್ ನಾಮ ಒಂದು ರೀತಿಯಲ್ಲಿ ಜೀವನದ ಅಲ್ಲಿರುವ ಪಕ್ವಗೊಂಡ ರಸಿಕ ಮತ್ತು ಸಂವೇದನಾಶೀಲ ಬ್ಬರ ಮೌನ ಸ್ವಗತವೂ ಹೌದು. ಈ ಸಂಕಲನದಲ್ಲಿ ತಮ್ಮ ಖಾಸಗಿ ಬದುಕಿನ ಬಗ್ಗೆ, ದೇಶದ ರಾಜಕೀಯದ ಬಗ್ಗೆ, ತಮ್ಮಂಥ ಮಧ್ಯಮ ವರ್ಗದ ಬಗ್ಗೆ, ದ ಬಗ್ಗೆ ಮತ್ತು ಹಾಸ್ಯಪ್ರಜ್ಞೆಯ ಬಗ್ಗೆ ಕೊಂಡಿದ್ದಾರೆ. ಬರಹವೊಂದರಲ್ಲಿ ನಾನಕ್‌ರ ಈ ಒಂದನ್ನು ಉದ್ಗರಿಸುತ್ತಾರೆ: ಓ, ನಾನಕ್, ಮನುಷ್ಯ ದಷ್ಟು ಅವನ ಶಕ್ತಿ ಹೆಚ್ಚು ಉಗ್ರ. ಹೀಗಾಗಿ ಗ ಮತ್ತು ಬಹಿರಂಗಗಳಲ್ಲಿ ಆದಷ್ಟೂ ಸೆಟೆಯಿಲ್ಲದೆ ಲು ಪ್ರಯತ್ನಿಸಿರುವ ಖುಷವಂತ ಸಿಂಗ್‌ರ ಬರಹಗಳು ಲದಲ್ಲಿ ಸ್ವಗತವಾಗಿರುವಷ್ಟೇ ಸಂವಾದವೂ ಗುತ್ತದೆ. ಆತ್ಮ ಚರಿತ್ರೆಯಷ್ಟೆ ದೇಶದ ಚರಿತೆಯೂ ಗುತ್ತದೆ.


ಖುಷವಂತ್‌ಸಿಂಗ್‌ರು ಸಂಪ್ರದಾಯವಾದ ಕಟ್ಟಾ ವಿರೋಧಿಗಳು ಮತ್ತು ಆಧುನಿಕವಾದಿಗಳು. ಅಲ್ಲದೇ ಈ ದ ಸ್ವಾತಂತ್ರ್ಯ ಹೋರಾಟದ ಆಶಯಗಳು ಸಮಾನತೆ ಸೌಹಾರ್ದತೆಗಳೆಂದು ಗಟ್ಟಿಯಾಗಿ ನಂಬಿಕೊಂಡವರು. ಆದರೆ ನಿರ್ದಿಷ್ಟ ಚಹರೆಗಳ ಬಗ್ಗೆ ರಾಷ್ಟ್ರೀಯ ನೆಹರಿಗೆ ಇದ್ದಷ್ಟೆ ಅಸ್ಪಷ್ಟತೆ ಮತ್ತು ಸಂದಿಗ್ಧತೆ ಸಿಂಗ್‌ರಿಗೂ ಇದು ತಥಾಕಥಿತ ನೆಹ್ರೂವಿಯನ್ ಉದಾರವಾದಿಗಳ ಮತ್ತು ದೌರ್ಬಲ್ಯಗಳೆರಡು ಆಗಿತ್ತೆಂಬುದು ಕಾಂಗ್ರೆಸ್ ರೂಪಾಂತರಗಳನ್ನು ನೋಡಿದರೆ ಸ್ಪಷ್ಟವಾಗುತ್ತದೆ. ಖುಷವಂತ್ ಸಿಂಗ್‌ರಂಥ ಉದಾರವಾದಿಗಳು ಈ ದಲಿತ, ರೈತಾಪಿ ಬದುಕನ್ನು ಕಂಗೆಡಿಸಿರುವ ಮುಕ್ತ ಕಟ್ಟೆ ನೀತಿಗಳ ಬಗ್ಗೆ ಹಳೆಯ ಕಾಲದ ಕಾಂಗ್ರೆಸ್ಸಿಗರಂತೆ ಡಂಗಿ ನಿಲುವನ್ನೇ ಇಟ್ಟುಕೊಂಡಿದ್ದರೂ ಧಾರ್ಮಿಕ ಭೂತವಾದದ ಬಗ್ಗೆ ಮಾತ್ರ ಅತ್ಯಂತ ಖಚಿತವಾದ ಧವನ್ನೂ ಬಹಿರಂಗವಾಗಿಯೇ ವ್ಯಕ್ತಪಡಿಸುತ್ತಾ ದ್ದಾರೆ. ಆದ್ದರಿಂದಲೇ 'ರಾಷ್ಟ್ರದ ಸ್ಥಿತಿಗತಿ' ಎಂಬ ದದಲ್ಲಿ ಒಂದು ಕಡೆ ಮಹಾತ್ಮ ಗಾಂಧಿ ಮತ್ತು ಹರಲಾಲ್ ನೆಹರೂರವರ ಕನಸಿನ ಭಾರತ ಮತ್ತೊಂದು ಕುರು ಗೋಲ್ವಾಲ್ಕರ್ ಭಾರತ-ಇವೆರಡರ ನಡುವಿನ ಮಲ್ಲಿ ನಮ್ಮ ಆಯ್ಕೆ ಕಡೆಯದ್ದೇ ಆದರೆ ಭಾರತ ಹಿಂದೂ ದೇಶವಾಗುತ್ತದೆ ಮತ್ತು ಇದರಲ್ಲಿ ನುಕಾರಿ ಪರಿಣಾಮಗಳಿರುತ್ತವೆ ಎಂದು ಗಿಯೇ ಎಚ್ಚರಿಸುತ್ತಾರೆ.

ಧರ್ಮದ ಪ್ರಶ್ನೆ ಬಂದಾಗ ಅವರು ಕಾಂಗ್ರೆಸ್ಸಿಗಿಂತ ಆಧುನಿಕರು. ಹೆಚ್ಚೆಂದರೆ ಧರ್ಮವನ್ನು ಒಂದು ಸಾರವಾಗಿ ನೋಡುವ ಖುಷವಂತ್ ಸಿಂಗ್ ಅವರದ್ದು ನಂತೆ ಮತಾಚಾರದ ಬಗ್ಗೆ ಲೇವಡಿಯ ದೃಷ್ಟಿ ಗ್‌ನ ಓಲ್ಡ್ ಟೆಸ್ಟ್‌ಮೆಂಟ್ ಪ್ರತಿಯನ್ನು ಅವರು ಬಳಿ ಸದಾ ಇರಿಸಿಕೊಂಡಿರುತ್ತಾರೆ. ಆದರೆ ಅದು ಸಾಹಿತ್ಯಿಕ ಮೌಲ್ಯಗಳಿಗಾಗಿ! ಭಿಂದ್ರನ್‌ವಾಲೆ ಮಾಡಿದ ಉಗ್ರವಾದಿಯನ್ನು ವಿರೋಧಿಸಿದ ಖುಷವಂತ್ ಆಪರೇಷನ್ ಬ್ಲೂ ಸ್ಟಾರ್‌ನಲ್ಲಿ ಸಿಖರ ಧಾರ್ಮಿಕ ಗಳನ್ನು ಉದ್ದೇಶಪೂರ್ವಕವಾಗಿ ಘಾಸಿಗೊಳಿಸಿದ್ದಕ್ಕಾಗಿ ನೀಡಲಾಗಿದ್ದ ಪದ್ಮವಿಭೂಷಣ ಪ್ರಶಸ್ತಿಯನ್ನು ಹಿಂತಿರುಗಿಸಿದ ಸ್ವಾಭಿಮಾನಿ. ಒಂದರ್ಥದಲ್ಲಿ ಧರ್ಮದ

ಬಗ್ಗೆ ಗುಡಿ ಚರ್ಚು ಮಸೀದಿಗಳನ್ನು ಬಿಟ್ಟು ಹೊರಬನ್ನಿ ಎಂಬ ನಿಲುವು.

ಖುಷವಂತ್ ಸಿಂಗ್‌ರು ಅತ್ಯಲ್ಪ ಕಾಲ ವಕೀಲರಾಗಿದ್ದು ಬಿಟ್ಟರೆ ಅವರ ಜೀವನದುದ್ದಕ್ಕೂ ಅವರು ಪತ್ರಕರ್ತರೇ. ಇಲ್ಲಸ್ಟ್ರೇಟೆಡ್ ವೀಕ್ಲಿ ನ್ಯಾಷನಲ್ ಹೆರಾಲ್ಡ್ ಹಿಂದೂಸ್ತಾನ್ ಟೈಮ್ಸ್ ಪತ್ರಿಕೆಗಳ ಸಂಪಾದಕರೂ ಆಗಿದ್ದ ಖುಷವಂತ್ ಸಿಂಗ್‌ರ ಪತ್ರಿಕೋದ್ಯಮದ ಧ್ಯೇಯ ರಂಜಿಸುವುದು, ತಿಳಿಸುವುದು ಮತ್ತು ಪ್ರಚೋದಿಸುವುದು. ಇದು ಅವರ ಬದುಕಿನ ಮತ್ತು ಎಲ್ಲಾ ಬರಹಗಳ ಮೂಲ ಧಾತುವೂ





ಹೌದು. ಓದುಗರೊಂದಿಗೆ ಜೊತೆ ಸಮಾನತೆ ಇರಬೇಕು ಎಂಬುದು ಅವರ ಬರಹದ ಮತ್ತೊಂದು ತತ್ವ. ಹೀಗಾಗಿಯೇ ಅವರ ಇತರ ವಿಚಾರಗಳ ಬಗ್ಗೆ ಭಿನ್ನಾಭಿಪ್ರಾಯ ಇಟ್ಟುಕೊಳ್ಳುವವರೂ ಅವರ ಜೊತೆ ಸಂವಾದ ಸಾಧ್ಯ ಎಂದು ಭಾವಿಸುತ್ತಾರೆ.

ಸಿಂಗ್‌ರ ಮತ್ತೊಂದು ವ್ಯಸನ ಮತ್ತು ಪ್ರೇರಣೆ ಅವರ ಕಾವ್ಯ ವ್ಯಾಮೋಹ. ಅದರಲ್ಲೂ ಉರ್ದು ಕಾವ್ಯದ ಕಡು ವ್ಯಾಮೋಹಿಯಾಗಿರುವ ಖುಷವಂತ್ ಸಿಂಗ್‌ರು ಅತಿಯಾಗಿ ಮೆಚ್ಚಿಕೊಳ್ಳುವುದು ಮಿರ್ಜಾ ಘಾಲಿಬ್‌ರನ್ನು. ಹಾಗೆಯೇ ಇಕ್ಬಾಲ್, ಫೈಜ್, ಫರಾಜ್‌ರ ಕಾವ್ಯಗಳನ್ನೂ ಕಂಠಪಾಠ ಮಾಡಿದ್ದರೂ ಬೇಸರವಾದಾಗಲೆಲ್ಲಾ ಓದುತ್ತಲೇ ಇರುತ್ತಾರೆ. ಬೈಬಲ್‌ನ ಓಲ್ಡ್ ಟೆಸ್ಟಮೆಂಟ್ ಮತ್ತು ಗ್ರಂಥ ಸಾಹೇಬ್ ಕೂಡಾ ಅವರಿಗೆ ಕಾವ್ಯ ರಸಿಕತೆಯ ಕಾರಣದಿಂದಲೇ ತುಂಬಾ ಇಷ್ಟವಾಗುತ್ತದೆ.

ಆದರೆ ಆಧುನಿಕ ಉದಾರವಾದದ ಖಾಸಗಿ ಮತ್ತು ಸಾರ್ವಜನಿಕ ಮೌಲ್ಯಗಳ ಹಲವು ಮಿತಿಗಳು ಖುಷವಂತ್ ಸಿಂಗ್‌ರ ಬದುಕಿನಲ್ಲೂ ಬರಹದಲ್ಲೂ ಎದ್ದುಕಾಣುತ್ತದೆ. ಅದರಲ್ಲಿ ಅತಿ ಮುಖ್ಯವಾದದ್ದು ಅಪೂರ್ಣ ಪ್ರಜಾತಾಂತ್ರಿಕತೆ ಎನ್ನಬಹುದು. ವರ್ಗ, ಜಾತಿ ಮತ್ತು ಲಿಂಗ, ಧರ್ಮಗಳ ಆಧಾರದಲ್ಲಿ ಶ್ರೇಣೀಕರಣಗೊಂಡಿರುವ ಭಾರತೀಯ ಸಮಾಜದಲ್ಲಿ ಪ್ರಜಾತಂತ್ರವಾದಿಯೊಬ್ಬರ ಆಳ ಎಷ್ಟು ಎಂಬುದಕ್ಕೆ

ಆ ವ್ಯಕ್ತಿ ಈ ವಿಷಯಗಳಲ್ಲಿ ಎಷ್ಟರಮಟ್ಟಿಗೆ ಸಮಾನತೆಯನ್ನು ಅನುಸರಿಸುತ್ತಾರೆ ಎಂಬದೇ ಲಿಟ್ಮಸ್ ಟೆಸ್ಟ್. ಮಿಕ್ಕ ವಿಷಯದಲ್ಲಿ ಆರೋಗ್ಯಕರ ಪ್ರಜಾತಾಂತ್ರಿಕ ನಿಲುವನ್ನೇ ಹೊಂದಿರುವ ಖುಷವಂತ್ ಸಿಂಗ್‌ರು ಹೆಂಗಸರನ್ನು ಕಾಣುವ ದೃಷ್ಟಿಯಲ್ಲಿ ಫೇಲಾಗುತ್ತಾರೆ. ಈಗಲೂ ಅವರ ದೃಷ್ಟಿಯಲ್ಲಿ ಹೆಣ್ಣಿಗೆ ಕಾಮಭೋಗಕ್ಕಿಂತ ಹೆಚ್ಚಿನ ಕಿಮ್ಮತ್ತಿಲ್ಲ. ದಲಿತ ಅಸ್ಮಿತೆಯ ಆಧರಿತ ಚಳವಳಿ ಉದಾರವಾದವು ಜಾತಿ ಪ್ರಶ್ನೆಯನ್ನು ಗ್ರಹಿಸಿದ ರೀತಿಯಲ್ಲಿರುವ ಮಿತಿಯನ್ನು ಎತ್ತಿ ತೋರಿಸಿದ್ದು ಅದು ಖುಷವಂತ್ ಸಿಂಗ್‌ರ ಬರಹಗಳಲ್ಲೂ ಕಾಣಿಸಿಕೊಳ್ಳುತ್ತದೆ.

ಇದಲ್ಲದೆ ಖುಷವಂತ್ ಸಿಂಗ್‌ರು ಸಾರ್ವಜನಿಕ ಕ್ಷೇತ್ರದಲ್ಲಿ ಮಾಡುವ ಕೆಲವು ಹೇಳಿಕೆಗಳು ಪತ್ರಕರ್ತರ ಮಿತಿಯನ್ನು ದಾಟುವುದಿಲ್ಲ. ಉದಾಹರಣೆಗೆ ಕಮ್ಯುನಿಸ್ಟ್ ಚೀನಾ ನಮಗಿಂತ ಹೆಚ್ಚಿನ ಸಾಧನೆ ಮತ್ತು ಆರ್ಥಿಕ ಪ್ರಗತಿ ಸಾಧಿಸಿರುವುದಕ್ಕೆ ಕೊಡಬಹುದಾದ ಏಕೈಕ ವಿವರಣೆಯೆಂದರೆ ಅಲ್ಲಿನ ಜನ ನಮಗಿಂತ ಹೆಚ್ಚು ಕಷ್ಟಪಟ್ಟು ದುಡಿಯುತ್ತಾರೆ ಎಂಬ ಅವರ ಅತ್ಯಂತ ಸರಳೀಕೃತ ತಿಳಿವಳಿಕೆ ಆಶ್ಚರ್ಯ ಉಂಟುಮಾಡುತ್ತದೆ. ಅದಕ್ಕಾಗಿ ಅವರು ಅಂದು ಸಂಜಯ್ ಗಾಂಧಿ ಮುಂದಿಟ್ಟ ಅತ್ಯಂತ ಸರ್ವಾಧಿಕಾರಿಯಾದ ಮಾತು ಕಡಿಮೆ ಕೆಲಸ ಜಾಸ್ತಿ ಘೋಷಣೆಯನ್ನು ಅದರ ಪರಿಣಾಮವನ್ನು ಕಂಡ ನಂತರವು ಈಗಲೂ ಮೆಚ್ಚಿಕೊಳ್ಳುತ್ತೇನೆ ಎಂದು ಹೇಳುವುದು ಗಾಬರಿ ಹುಟ್ಟಿಸುತ್ತದೆ. ಚೀನಾದ ಬಗ್ಗೆ ಸ್ವಯಂ ಚೀನಾ ಹಾಗೂ ಅಮೆರಿಕ ಕೊಡುತ್ತಿರುವ ಮಾಹಿತಿಗಳ ಮೇಲ್‌ಸ್ತರದ ವಿಶ್ಲೇಷಣೆ ಮಾಡಿದರೂ ಇಂದು ಚೀನಾದಲ್ಲಿ ಅಭಿವೃದ್ಧಿಯ ಮುಸುಕಿನಲ್ಲಿ ತೀವ್ರ ಗತಿಯಲ್ಲಿ ಹೆಚ್ಚಾಗುತ್ತಿರುವ ಅಸಮಾನತೆ ಕಣ್ಣಿಗೆ ರಾಚುವಂತಿದೆ. ಅದನ್ನು ಕಾಣದ ಪ್ರಜಾತಂತ್ರವಾದಿಗಳ ಕಣ್ಣಿಗೆ ಹತ್ತಿರುವ ಅಬಿವೃದ್ಧಿ ಮಿಯೋಪಿಯಾ ಸಮಸ್ಯೆ ಖುಷವಂತ್ ಸಿಂಗ್‌ರಿಗೂ ಇದೆ. ಹಾಗೆಯೇ ಕುಟುಂಬ ನಿಯಂತ್ರಣ ಯೋಜನೆಯ ಬಗ್ಗೆ ಸಂಜಯ್ ಗಾಂಧಿಯ ಬಲಾತ್ಕಾರದ ಮಾರ್ಗಗಳನ್ನು ಈಗಲೂ ಅವರು ಸಮರ್ಥಿಸಿಕೊಳ್ಳುವುದು!!!!

ಇದು ಕೇವಲ ಖುಷವಂತ್ ಸಿಂಗ್‌ರ ಮಿತಿಯಲ್ಲ, ಶ್ರೇಣೀಕೃತ ಸಮಾಜದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಪ್ರಜಾತಂತ್ರಕ್ಕೆ ಪೂರ್ವ ಶರತ್ತಾಗಿ ಭಾವಿಸದ ಉದರವಾದಿ ಪ್ರಜಾತಂತ್ರದ ಮಿತಿ. ಭಾರತದ ಸಂದರ್ಭದಲ್ಲಿ ಇದನ್ನು ಅತ್ಯಂತ ಸ್ಪಷ್ಟವಾಗಿ ಪ್ರತಿಪಾದಿಸಿದ್ದು ಕಮ್ಯುನಿಸ್ಟರು.

ಪುಸ್ತಕ ವಿಮರ್ಶೆ

ಅವರಿಗಿಂತ ಆಳವಾಗಿ ಮತ್ತು ತೀವ್ರವಾಗಿ ಪರಿಭಾವಿಸಿದ್ದು ಅಂಬೇಡ್ಕರ್.

ಇಷ್ಟರ ನಡುವೆಯೂ ಬದುಕಿನ ಬಗ್ಗೆ ಅವರ ಪ್ರಾಮಾಣಿಕ ಪಾರದರ್ಶಕತೆ, ಖಾಸಗಿ ಮತ್ತು ಸಾರ್ವಜನಿಕ ಜೀವನದ ಬಗ್ಗೆ ಅವರಿಗಿರುವ ಒಟ್ಟಾರೆಯಾಗಿ ಆರೋಗ್ಯಕರ ನಿಲುವು, ಸೌಹಾರ್ದ ಬದುಕಿನ ಬಗ್ಗೆ ಅವರ ನಿಷ್ಕಳಂಕ ನಿಷ್ಠೆ, ಅವರ ಬರಹದಲ್ಲಿನ ಹಾಸ್ಯಪರತೆ, ಸರಳತೆಗಳು ಅವರನ್ನು ಆಪ್ತರನ್ನಾಗಿಸುತ್ತದೆ. ತನ್ನ ಕೊನೆ ಪಯಣ ಆರಂಭಿಸುವ ಮುನ್ನ ನನ್ನ ಕೊನೆಯ ಗುಟುಕು ಸವಿಯ ಬಯಸುತ್ತೇನೆ ಎನ್ನುವಷ್ಟು ಜೀವನ ಪ್ರೇಮಿ ಖುಷವಂತ್ ಸಿಂಗ್. ತಾನು ಜ್ಞಾನಿಯಲ್ಲ ಎಂದು ಯಾವುದೇ ಹಿಂಜರಿಕೆಯಿಲ್ಲದೆ ಹೇಳಿಕೊಳ್ಳುವ ಸಿಂಗ್‌ರು ಈ ಪುಸ್ತಕದಲ್ಲಿನ ತಮ್ಮ ಸಾವಿನ ಬಗೆಗಿನ ಚರಮ ವಾಕ್ಯದಲ್ಲಿ ನಾನು ಹೋದ ನಂತರ ಜನ ನನ್ನನ್ನು ಮುಗಳ್ನಗುವಂತೆ ಮಾಡಿದವನೆಂದು ನೆನೆಸಿಕೊಳ್ಳಲೆಂದು ಬಯಸುತ್ತೇನೆ ಎಂದು ಹೇಳಿಕೊಳ್ಳುವಷ್ಟು ಪಾರದರ್ಶಕ.

ಖುಷವಂತ್ ಸಿಂಗ್‌ರ ಗದ್ಯವನ್ನು ಅಷ್ಟೇ ಶಕ್ತವಾಗಿ ಎಂ.ಎಸ್. ರುದ್ರೇಶ್ವರಸ್ವಾಮಿಗಳವರು ಅನುವಾದಿಸಿದ್ದಾರೆ. ಆದರೆ ಉತ್ತಮ ಗದ್ಯ ಅನುವಾದಕರು ಉತ್ತಮ ಪದ್ಯ ಅನುವಾದಕರೇನೂ ಆಗಿರಬೇಕಿಲ್ಲವೆಂಬುದು ಖುಷವಂತ್ ಸಿಂಗ್‌ರು ಉದ್ಧರಿಸುವ ಕಾವ್ಯಗಳ ಕನ್ನಡಾನುವಾದವನ್ನು ಓದಿದಾಗ ಅನಿಸಿಬಿಡುತ್ತದೆ.

● ಶಿವಸುಂದರ್

ಗಲ್ಲು ಶಿಕ್ಷೆಗೆ ಗುರಿಯಾದವರಿಗೆ ಸಿಕ್ಕ ಸ್ವಾತಂತ್ರ್ಯ ಸನ್ನಡತೆ ಕೈದಿಗಳಿಗಿಲ್ಲವೇ?

ವೀರಪ್ಪನ್ ಸಹಚರ ಮೀಸೆಕಾರ ಮಾದಯ್ಯ ಸೇರಿದಂತೆ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ 15 ಕೈದಿಗಳಿಗೆ ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿ ಸುಪ್ರೀಂಕೋರ್ಟ್ ಇತ್ತೀಚೆಗೆ ಮಹತ್ವದ ತೀರ್ಪು ನೀಡಿದೆ. ಈ ಮೂಲಕ ಮಾನವೀಯ ಘನತೆಯನ್ನು ನ್ಯಾಯಾಲಯ ಎತ್ತಿ ಹಿಡಿದಿದೆ.

ವಿಚಾರಣಾ ನ್ಯಾಯಾಲಯಗಳಿಂದ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಹದಿನೈದು ಮಂದಿಯ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿಗಳೇ ತಿರಸ್ಕರಿಸಿದ್ದರು. ಇನ್ನೂ ಗಲ್ಲೇ ಕಾಯಂ ಎಂದು ಮಾನಸಿಕವಾಗಿ ಗಲ್ಲು ಶಿಕ್ಷೆ ಅನುಭವಿಸುತ್ತಿದ್ದ 15 ಬಂಧಿಗಳ ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿ ಸುಪ್ರೀಂಕೋರ್ಟ್ ತೀರ್ಪು ನೀಡಿರುವುದು ದೇಶದೆಲ್ಲೆಡೆಗೆ ಚರ್ಚೆಗೆ ಕಾರಣವಾಗಿದೆ. ಮಾತ್ರವಲ್ಲ ಇದು ಮಹತ್ವದ ಮೈಲಿಗಲ್ಲು ಕೂಡ ಆಗಿದೆ.

ಗಲ್ಲು ಶಿಕ್ಷೆಯನ್ನು ಈಗಾಗಲೇ ಕೆಲವು ದೇಶಗಳು ರದ್ದುಗೊಳಿಸಿವೆ. ಗಲ್ಲು ಶಿಕ್ಷೆ ರದ್ದು ಬಗ್ಗೆ ಮಾನವ ಹಕ್ಕು ಸಂಘಟನೆಗಳು ಪದೇಪದೇ ಧ್ವನಿಯೆತ್ತುತ್ತಿವೆ. ಈ ಸಂದರ್ಭದಲ್ಲಿ ದೇಶದ ಪರಮೋಚ್ಛ ನ್ಯಾಯಾಲಯದಿಂದ ಮಹತ್ವದ ತೀರ್ಪು ಹೊರಬಿದ್ದಿದ್ದು ಮಾನಸಿಕ ಶಿಕ್ಷೆಗೆ ಕಾನೂನಿನಲ್ಲಿ ಅವಕಾಶವಿಲ್ಲ ಎಂಬುದನ್ನು ತನ್ನ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

ಸುಪ್ರೀಂಕೋರ್ಟ್‌ನ ಹಾಲಿ ತೀರ್ಪಿನ ಪ್ರಕಾರ "ಗಲ್ಲು ಶಿಕ್ಷೆಗೆ ಗುರಿಯಾದವರಿಗೆ ಏಕಾಂತ ಬಂಧನ ಶಿಕ್ಷೆ (ಒಬ್ಬರನ್ನು ಒಂದೇ ಕೊಠಡಿಯಲ್ಲಿ ಕೂಡಿಹಾಕುವುದು) ನೀಡಬಾರದು. ಮಾನಸಿಕ ಅಸ್ವಸ್ಥ ಕ್ಯಾನ್ಸರ್ ಪೀಡಿತರಿಗೆ ಗಲ್ಲು ಶಿಕ್ಷೆ ವಿಧಿಸಬಾರದು. ಭಯೋತ್ಪಾದನೆ ಸೇರಿದಂತೆ ಯಾವುದೇ ಪ್ರಕರಣದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದರೂ ಗಲ್ಲಿಗೇರಿಸುವ ಮುನ್ನ ಆತನ ಕುಟುಂಬಕ್ಕೆ ವಿಷಯ ಮುಟ್ಟಿಸಬೇಕು. ಕುಟುಂಬ ಭೇಟಿಗೆ ಅವಕಾಶ ಕಲ್ಪಿಸಿಕೊಡಬೇಕು. ಗಲ್ಲು ಶಿಕ್ಷೆಗೆ ಗುರಿ ಯಾಗಿರುವ ವ್ಯಕ್ತಿಗೆ ಸರಕಾರವೇ ಕಾನೂನಿನ ನೆರವು ನೀಡಬೇಕು." ಸುಪ್ರೀಂಕೋರ್ಟ್‌ನ ಈ ನಿರ್ದೇಶನಗಳು ಮಾನವ ಘನತೆಯನ್ನು ಸಾರುವ ಸಂವಿಧಾನದ 21ನೇ ವಿಧಿ ಒಬ್ಬ ಪ್ರಜೆಗೆ ಕಲ್ಪಿಸಿರುವ ಹಕ್ಕನ್ನು ಎತ್ತಿ ಹಿಡಿದಿವೆ.



ಈ ನಿರ್ದೇಶನಗಳನ್ನು ಗಮನಿಸಿದಾಗ ಗಲ್ಲು ಶಿಕ್ಷೆಗೆ ಗುರಿಯಾಗಿ 14 ದಿನದೊಳಗೆ ಗಲ್ಲು ಶಿಕ್ಷೆ ವಿಧಿಸದಿದ್ದರೆ ಅದೊಂದು ಅಕ್ರಮ ಬಂಧನ ಇದ್ದಂತೆ. ಇನ್ನು ಗಲ್ಲು ಶಿಕ್ಷೆಗೆ ಗುರಿಯಾದವರನ್ನು ಏಕಾಂತಬಂಧನ ಶಿಕ್ಷೆಯಲ್ಲಿಡುವಂತಿಲ್ಲ. ಅಂತಾರಾಷ್ಟ್ರೀಯ ಹಂತಕ ಚಾರ್ಲ್ಸ್ ಶೋಭರಾಜ್ ಪ್ರಕರಣದಲ್ಲೂ ಇಂತಹದ್ದೇ ತೀರ್ಪನ್ನು ಕೋರ್ಟ್ ನೀಡಿತ್ತಾದರೂ ದೇಶದೆಲ್ಲೆಡೆ ಈಗಲೂ ಏಕಾಂತ ಬಂಧನ ಶಿಕ್ಷೆ ಜಾರಿಯಲ್ಲಿರುವುದನ್ನು ಗಮನಿಸಬಹುದು. ಭಯೋತ್ಪಾದನೆ ಅಪರಾಧದಡಿ ಗಲ್ಲು ಶಿಕ್ಷೆಗೆ ಗುರಿಯಾದ ಅಫ್ಜಲ್ ಗುರು ಮತ್ತು ಕಸಬ್ ಕುಟುಂಬಕ್ಕೆ ವಿಷಯ ಮುಟ್ಟಿಸಿರಲೇ ಇಲ್ಲ. ಇದು ರಾಷ್ಟ್ರದೆಲ್ಲೆಡೆ ಚರ್ಚೆ ಹುಟ್ಟುಹಾಕಿತ್ತು. ಆದರೆ, ಇವೆಲ್ಲದಕ್ಕೂ ಸುಪ್ರೀಂಕೋರ್ಟ್‌ನ ಈ ತೀರ್ಪು ಇತಿಶ್ರೀ ಹಾಡಿದೆ. ಇದರ ತಾತ್ಪರ್ಯ ಇಷ್ಟೇ, ಒಬ್ಬ ವ್ಯಕ್ತಿ ಗಲ್ಲು ಶಿಕ್ಷೆಗೆ ಗುರಿಯಾದ ಮಾತ್ರಕ್ಕೆ ಸಂವಿಧಾನಬದ್ಧವಾಗಿ ಸಿಕ್ಕಿರುವ ಬದುಕುವ ಹಕ್ಕನ್ನು ಕಳೆದುಕೊಳ್ಳಲಾರ. ಗಲ್ಲು ಶಿಕ್ಷೆ ಜಾರಿಯಾಗುವವರೆಗೂ ಜೀವಿಸುವ ಹಕ್ಕು ಚಾಲ್ತಿಯಲ್ಲಿರುತ್ತದೆ ಎಂಬುದು. ಹೀಗಾಗಿ ಮಾನವೀಯ ನೆಲೆಗಟ್ಟಿನಲ್ಲಿ ಸುಪ್ರೀಂಕೋರ್ಟ್‌ನ ಈ ತೀರ್ಪು ಮಹತ್ವ ಎನಿಸುತ್ತದೆ.

ಅಕಾಲಿಕ ಬಿಡುಗಡೆ: ರಾಜ್ಯದಲ್ಲಿ ಏಳು ವರ್ಷದಿಂದ ಬಿಡುಗಡೆಯ ಭಾಗ್ಯವಿಲ್ಲದೇ ಜೈಲುಗಳಲ್ಲಿ ತುಂಬಿರುವ ಸನ್ನಡತೆ ಕೈದಿಗಳ ಅಕಾಲಿಕ ಬಿಡುಗಡೆ ವಿಚಾರಕ್ಕೆ ಈ ತೀರ್ಪನ್ನು ತುಲನೆ ಮಾಡಿದಾಗ ನಮ್ಮ ರಾಜ್ಯದ ಅಧಿಕಾರಿಶಾಹಿಯ ಅಜ್ಞಾನದ ಹೂರಣ ಕಾಣುತ್ತದೆ.

ಗಲ್ಲು ಶಿಕ್ಷೆಗೆ ಒಳಗಾದವರನ್ನು ಗಲ್ಲಿಗೇರಿಸದೇ ವಿಳಂಬ ಮಾಡುವುದು ಅಕ್ರಮ ಬಂಧನ ಎಂತಾದರೆ, ಸನ್ನಡತೆ ಆಧಾರದ ಮೇಲೆ ಬಿಡುಗಡೆಗೆ ಅರ್ಹರಾಗಿರುವವರನ್ನೂ ಆರು ವರ್ಷಗಳಿಂದ ಜೈಲಿನಲ್ಲಿ ಕೊಳೆಯುವಂತೆ ಮಾಡುವುದು ಅಪರಾಧ ಅಲ್ಲವೇ?

ನಮ್ಮ ರಾಜ್ಯದಲ್ಲಿ ಕಳೆದ ಏಳು ವರ್ಷಗಳಿಂದ ಸನ್ನಡತೆ ಕೈದಿಗಳ ಅಕಾಲಿಕ ಬಿಡುಗಡೆಯಾಗಿಲ್ಲ. 2009ರಲ್ಲಿ 590 ಸನ್ನಡತೆ ಕೈದಿಗಳನ್ನು ಬಿಡುಗಡೆ ಮಾಡಬೇಕು ಎಂದು ಸರಕಾರ ಶಿಫಾರಸು ಮಾಡಿ, ಮೂರು ಬಾರಿ ಸಚಿವ ಸಂಪುಟ ಅದನ್ನು ಅನುಮೋದಿಸಿದ್ದರೂ ಒಬ್ಬ ಕೈದಿಯೂ ಬಿಡುಗಡೆಯಾಗಲಿಲ್ಲ. ಅಕಾಲಿಕ ಬಿಡುಗಡೆಗೆ ಇವರು ಅರ್ಹರು ಎಂದು ಸರಕಾರವೇ ತೀರ್ಮಾನ ಮಾಡಿದ ಬಳಿಕ ಅವರು ಜೈಲಿನಲ್ಲಿಯೇ ಕೊಳೆಯುವಂತೆ ಮಾಡಿರುವುದು ಮಾತ್ರ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿಗೆ ವಿರುದ್ಧವಾದದು.

ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡುವ ತೀರ್ಮಾನ ಮಾಡಿಯೂ ಅವರನ್ನು ಬಿಡುಗಡೆ ಮಾಡದಿದ್ದರೆ ಎಷ್ಟೆಲ್ಲಾ ಪರಿಣಾಮಗಳಾಗುತ್ತವೆ ಎಂಬುದರ ಬಗ್ಗೆ ಸರಕಾರ ಚಿಂತನೆ ಮಾಡಿಲ್ಲ. ಮಾನಸಿಕವಾಗಿ ಹಿಂಸೆ ಕೊಡುವುದು ಸೂಕ್ತವಲ್ಲ. ಗಲ್ಲು ಶಿಕ್ಷೆಯನ್ನು ಜೀವಾವಧಿ ಶಿಕ್ಷೆಯನ್ನಾಗಿ ಪರಿವರ್ತಿಸಿ ಸುಪ್ರೀಂಕೋರ್ಟ್ ನೀಡಿರುವ ತೀರ್ಪಿನಲ್ಲಿ ಇದನ್ನೇ ಎತ್ತಿ ಹಿಡಿದಿದೆ.

ನೆರೆ ರಾಜ್ಯಗಳಾದ ಆಂಧ್ರ ಪ್ರದೇಶ, ತಮಿಳುನಾಡು, ಕೇರಳದಲ್ಲಿ ಪ್ರತಿವರ್ಷ ಸನ್ನಡತೆ ಆಧಾರದ ಮೇಲೆ ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಆಕಸ್ಮಿಕ ದುರ್ಘಟನೆಗಳಲ್ಲಿ ಶಿಕ್ಷೆಗೆ ಗುರಿಯಾಗಿ ವರ್ಷಾನುಗಟ್ಟಲೇ ಜೈಲಿನಲ್ಲಿ ಕಾಲ ಕಳೆದವರಿಗೆ ಸಮಾಜದಲ್ಲಿ ಬದುಕುವ ಅವಕಾಶ ಕಲ್ಪಿಸಿವೆ. ಆದರೆ, ನಮ್ಮ ರಾಜ್ಯದಲ್ಲಿ ಮಾತ್ರ ಇದಕ್ಕೆ ತದ್ವಿರುದ್ಧ. ಎಷ್ಟೋ ಕೈದಿಗಳು ಬಿಡುಗಡೆ ಆಸೆ ಹೊತ್ತು ಜೈಲಿನಲ್ಲೇ ಕೊರಗಿ ಜೀವ ಬಿಟ್ಟಿರುವ ಉದಾಹರಣೆಗಳೂ ಇವೆ.

ಸನ್ನಡತೆ ಮೇಲೆ ಕೈದಿಗಳ ಅವಧಿ ಪೂರ್ವ ಬಿಡುಗಡೆಗೆ ಸಾಹಿತಿ ಜಿ.ರಾಮಕೃಷ್ಣ ಮರುಳಸಿದ್ದಪ್ಪ, ಬರಗೂರು ರಾಮಚಂದ್ರಪ್ಪ ಅವರೆಲ್ಲರೂ ಸರಕಾರಕ್ಕೆ ಮನವಿ ಮಾಡಿದ್ದರು. ಹಿರಿಯ ಕ್ರಿಮಿನಲ್ ನ್ಯಾಯವಾದಿಗಳಾದ ಸಿ.ಎಚ್.ಹನುಮಂತರಾಯ ಮೊದಲಾದವರು ಮಾನವೀಯ ನೆಲೆಯಲ್ಲಿ ಸನ್ನಡತೆ ಕೈದಿಗಳ ಬಿಡುಗಡೆ ಕೋರಿದ್ದರು. ಈ ವಿಚಾರದಲ್ಲಿ ಕಾನೂನು ನೆರವು ನೀಡುವುದಾಗಿಯೂ ಭರವಸೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಹದಿನಾಲ್ಕು ವರ್ಷ ಜೈಲುಶಿಕ್ಷೆ ಅನುಭವಿಸಿದವರನ್ನು ಬಿಡುಗಡೆ ಮಾಡಲು ಸರಕಾರ ಹೊರಟಿದೆ. 550 ಬಂಧಿಗಳು ಬಿಡುಗಡೆಗೆ ಅರ್ಹತೆ ಪಡೆದಿದ್ದರೂ, ಬಿಡುಗಡೆಗಾಗಿ ವಿಧಿಸಿರುವ ಷರತ್ತುಗಳನ್ನು ಪೂರೈಸಲು ಆ ಯಮುನೇ ಭೂಮಿಗೆ ಇಳಿಯಬೇಕಷ್ಟೇ.

ರಾಜ್ಯ ಸರ್ಕಾರ ಸನ್ನಡತೆ ಕೈದಿಗಳ ಬಿಡುಗಡೆ ತೀರ್ಮಾನ ತೆಗೆದುಕೊಳ್ಳಲು ಎರಡು ಪ್ರತ್ಯೇಕ ಕಮಿಟಿಗಳನ್ನು ರಚಿಸಿದೆ. ಗೃಹ ಕಾರ್ಯದರ್ಶಿ, ಕಾನೂನು ಮತ್ತು ಸುವ್ಯವಸ್ಥೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಒಳಗೊಂಡಂತೆ ಐವರು ಉನ್ನತ ಅಧಿಕಾರಿಗಳ ಒಂದು ಕಮಿಟಿ, ಜಿಲ್ಲಾಧಿಕಾರಿ, ಪೊಲೀಸ್ ಅಧೀಕ್ಷಕ ಒಳಗೊಂಡಂತೆ ಕೆಳಹಂತದ ಇನ್ನೊಂದು ಕಮಿಟಿ ರಚಿಸಲಾಗಿದೆ. ಈ ಮೂಲಕ ಮತ್ತೆ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಶಾಹಿ ಗೊಂದಲಕ್ಕೀಡುಮಾಡಿದೆ. ಯಾಕೆಂದರೆ ಸಂವಿಧಾನದ ಆರ್ಟಿಕಲ್ 161ರ ಮಹತ್ವದ ಬಗ್ಗೆ ಅಧಿಕಾರಿಗಳು ಅರಿತುಕೊಂಡಂತೆ ಕಾಣುತ್ತಿಲ್ಲ. ಹೀಗಾಗಿ ಒಂದರಮೇಲೆ ಇನ್ನೊಂದು ಕಮಿಟಿ ಮಾಡಿ ಸನ್ನಡತೆ ಕೈದಿಗಳ ಬಿಡುಗಡೆಗೆ ಮತ್ತಷ್ಟು ಅಡ್ಡಿಗಳನ್ನು ಸೃಷ್ಟಿಸಿದಂತಾಗಿದೆ.

ಮರುರಾಂ ಮತ್ತು ಭಾರತ ಒಕ್ಕೂಟ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ 1980ರಲ್ಲಿ ನೀಡಿದ ತೀರ್ಪು ಸನ್ನಡತೆ ಕೈದಿಗಳ ಬಿಡುಗಡೆಗೆ ಸಂಬಂಧಿಸಿದ್ದು. ಅದರಲ್ಲಿ ಐದು ನ್ಯಾಯಮೂರ್ತಿಗಳುಳ್ಳ ಸಂವಿಧಾನ ಪೀಠ ಹೀಗೆ ಸ್ಪಷ್ಟವಾಗಿ ಉಲ್ಲೇಖಿಸಿದೆ: "ಸಂವಿಧಾನದ ಆರ್ಟಿಕಲ್ 161 ಅಧಿಕಾರ ಬಳಸಿ ಸರಕಾರ ಸನ್ನಡತೆ ಆಧಾರದ ಮೇಲೆ ಕೈದಿಗಳನ್ನು ಅಕಾಲಿಕ ಬಿಡುಗಡೆ ಮಾಡಬಹುದು. ಇದಕ್ಕೆ ಸಂವಿಧಾನದ ಅಧಿಕಾರವನ್ನು ಯಾವುದೇ ಕಾನೂನುಗಳು ನಿಯಂತ್ರಿಸಲು ಸಾಧ್ಯವಿಲ್ಲ." ಮತ್ತೊಂದು ಮುಖ್ಯ ಸಂಗತಿ ಏನೆಂದರೆ, ಸಣ್ಣ ಪೀಠದ ತೀರ್ಪುಗಳು ದೊಡ್ಡ ಪೀಠದ ತೀರ್ಪುಗಳ ಮುಂದೆ ನಿಲ್ಲುವುದಿಲ್ಲ ಎಂಬುದು ದೇಶದಲ್ಲಿ ಮೊದಲಿನಿಂದಲೂ ಪಾಲಿಸುತ್ತಿರುವ ಸಂಪ್ರದಾಯ. ಹೀಗಾಗಿ ನಮ್ಮ ಅಧಿಕಾರಿಶಾಹಿ ಭಾವಿಸಿದಂತೆ ಸಿಆರ್‌ಪಿಸಿ ಸೆಕ್ಷನ್ 433 (ಎ) ಬಂಧಿಗಳ ಬಿಡುಗಡೆಗೆ ಅಡ್ಡಿ ಬರಲ್ಲ. ಇದರಿಂದ ಯಾವ ಅಧಿಕಾರವೂ ದುರುಪಯೋಗವಾಗದು. ಸರಕಾರ ಸಂವಿಧಾನದತ್ತ ಈ ಅಧಿಕಾರ ಬಳಸಿ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಬಹುದು. ಇಷ್ಟೆಲ್ಲಾ ಸ್ಪಷ್ಟತೆಗಳಿದ್ದರೂ ಎರಡೆರಡು ಕಮಿಟಿ ರಚನೆ ಮಾಡಿಕೊಂಡು ಸನ್ನಡತೆ ಕೈದಿಗಳ ಬಿಡುಗಡೆ ವಿಚಾರದಲ್ಲಿ ಅಧಿಕಾರಿವರ್ಗ ಗೊಂದಲ ಸೃಷ್ಟಿಸಿರುವುದು ಸರಿಯಲ್ಲ.

ಈಗಾಗಲೇ ಆಂಧ್ರ ಪ್ರದೇಶದಲ್ಲಿ 2002ರಲ್ಲಿ ಏಳು ವರ್ಷ ಶಿಕ್ಷೆ ಪೂರೈಸಿದ 390 ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಹತ್ತು ವರ್ಷ ಶಿಕ್ಷೆ ಪೂರೈಸಿದ 212 ಕೈದಿಗಳನ್ನು ಕೇರಳ ಸರಕಾರ ಬಿಡುಗಡೆ ಮಾಡಿದೆ. ಅಣ್ಣಾದೊರೈ ಜನ್ಮದಿನಾಚರಣೆ ಅಂಗವಾಗಿ ತಮಿಳುನಾಡಿನಲ್ಲಿ ಏಳು ವರ್ಷ ಶಿಕ್ಷೆ ಪೂರೈಸಿದ 1405 ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಅಕ್ಕಪಕ್ಕದ ರಾಜ್ಯಗಳಿಗೆ ಎದುರಾಗದ ಕಾನೂನುಗಳು ಕರ್ನಾಟಕ ರಾಜ್ಯ ಸರಕಾರಕ್ಕೆ ಎದುರಾಗಿರುವುದು ಮಾತ್ರ ವಿಪರ್ಯಾಸ..!


ಸಂವಿಧಾನದತ್ತ ಅಧಿಕಾರ ಬಳಸಿ ಸನ್ನಡತೆ ಬಂಧಿಗಳ ಬಿಡುಗಡೆ ವಿಚಾರವನ್ನು ಸರಕಾರ ಗಂಭೀರವಾಗಿ ಪರಿಗಣಿಸುತ್ತಿಲ್ಲ ಯಾಕೆ? ಬಿಡುಗಡೆ ಬಗ್ಗೆ ಸ್ಪಷ್ಟ ತೀರ್ಪುಗಳು, ಉದಾಹರಣೆಗಳಿದ್ದರೂ ಅವನ್ನು ಅರ್ಥಮಾಡಿಕೊಳ್ಳದ ವರ್ಗಕ್ಕೆ ಅರ್ಥಪಡಿಸುವವರು ಯಾರು? ಸನ್ನಡತೆ ಕೈದಿಗಳ ಬಿಡುಗಡೆ ಬಗ್ಗೆ ಸೆಷನ್ಸ್ ನ್ಯಾಯಾಧೀಶರ ಅಭಿಪ್ರಾಯ ಕೇಳುವುದು ಅಂದರೆ, ಈ ದೇಶದಲ್ಲಿ ಎಲ್ಲೂ ಅಸ್ತಿತ್ವದಲ್ಲಿ ಇಲ್ಲದ ನಿಯಮ ಹುಟ್ಟುಹಾಕಿದ್ದು ಯಾಕೆ? ಬಂಧಿಗಳ ಮಾನಸಿಕ ವೇದನೆಗೆ ಅಂತ್ಯ ಹಾಡಿ ಎಂದು ಸುಪ್ರೀಂಕೋರ್ಟ್ ನೀಡಿರುವ ತೀರ್ಪು ಉಲ್ಲಂಘನೆ ಅಲ್ಲವೇ?

● ನಳಿನಿ, ಹೈಕೋರ್ಟ್ ವಕೀಲರು


ಅಧ್ವಾನಿಯನ್ನು ಮೋದಿ ಗ್ಯಾಂಗ್ ಮಟ್ಟ ಹಾಕಿತು

ಕಳೆದ ಜೂನ್ 9ರಂದು ಮೋದಿಯನ್ನು 2014ರ ಲೋಕಸಭಾ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷನಾಗಿ ನೇಮಿಸಿದ ಸಂದರ್ಭದಲ್ಲಿ ಆತ ಪ್ರಧಾನಿ ಅಭ್ಯರ್ಥಿಯೆಂದು ಘೋಷಿಸಲು ಬಿಜೆಪಿ ಹಿಂಜರಿದಿತ್ತಲ್ಲವೇ. ಇದಕ್ಕೆ ಅಧ್ವಾನಿಯ ವಿರೋಧವೇ ಒಂದು ಪ್ರಮುಖ ಕಾರಣವಾಗಿತ್ತು. ಮೋದಿ ಪ್ರಧಾನಮಂತ್ರಿ ಸ್ಥಾನದ ಅಭ್ಯರ್ಥಿ ಎನ್ನುವ ಅಧಿಕೃತ ಘೋಷಣೆ ಹೊರಬೀಳುವಷ್ಟರಲ್ಲಿ (ಸೆಪ್ಟಂಬರ್ 13) ಸುಮಾರು ಮೂರು ತಿಂಗಳುಗಳೇ ಸಂದಿವೆ. ಕಾರಣವೇನೆಂದರೆ ಹಟಮಾರಿ ಅಧ್ವಾನಿ ಬಹಳಷ್ಟು ಕಾಲ ತನ್ನ ಪಟ್ಟುಬಿಟ್ಟಿರಲಿಲ್ಲ. ಕೊನೆಗೂ ಅಧ್ವಾನಿಯ ಛಲವನ್ನು ಮುರಿದಾತ ಇನ್ಯಾರೂ ಅಲ್ಲ, ವಿರೋಧಿಗಳನ್ನು ನಿರ್ದಯವಾಗಿ ಮಟ್ಟಹಾಕುವುದರಲ್ಲಿ ಪ್ರಖ್ಯಾತನಾಗಿರುವ ಮೋದಿ! ಇದಕ್ಕೋಸ್ಕರ ಆತ ಹೂಡಿದ ತಂತ್ರ ಏನೆಂಬುದು ಇದುವರೆಗೂ ರಹಸ್ಯವಾಗಿ ಉಳಿದಿತ್ತು. ಇದೀಗ ಗುಟ್ಟು ರಟ್ಟಾಗಿದೆ. ಪರದೆಯ ಹಿಂದೆ ನಡೆದ ಕುಟಿಲ ಕಾರಸ್ಥಾನಗಳೆಲ್ಲವೂ ಬಯಲಿಗೆ ಬಂದಿವೆ...

ಇಂದು ಬಿಜೆಪಿಯ ಅಧಿಕೃತ ಚುನಾವಣಾ ಪ್ರಚಾರ ಮಾಧ್ಯಮವಾಗಿರುವುದು ನಿಟಿಸೆಂಟ್ರಲ್ ಎಂಬ ಜಾಲತಾಣ. ಈ ನಿಟಿಸೆಂಟ್ರಲ್ ಆಗಸ್ಟ್ 14,



2012ರಷ್ಟು ಹಿಂದೆಯೇ ಅಸ್ತಿತ್ವಕ್ಕೆ ಬಂದಿದೆ. ಅದನ್ನು ಆರಂಭಿಸಿದಾತ ಮೋದಿ ಬಂಟ ರಾಜೇಶ್ ಜೈನ್. ಅದರಲ್ಲಿ ಪ್ರಕಟವಾದ ಪ್ರಪ್ರಥಮ ಲೇಖನವೇ ಮೋದಿಯದು. ಅಧ್ವಾನಿ ಯಾವತ್ತು ಮೋದಿಯ ಪ್ರಧಾನಿ ಅಭ್ಯರ್ಥಿತನವನ್ನು ವಿರೋಧಿಸಿದರೋ ಅವತ್ತಿನಿಂದಲೇ ನಿಟಿಸೆಂಟ್ರಲ್ ಆತನನ್ನು ಬಿಜೆಪಿಯ ಶತ್ರು ಎಂದು ಕರೆಯತೊಡಗಿದೆ ಮಾತ್ರವಲ್ಲ ಲೇವಡಿ ಮಾಡಲಾರಂಭಿಸಿದೆ. ಮೋದಿ ಪರಿಚಾರಕರಾದ ತವಲೀನ್ ಸಿಂಗ್, ವಿವೇಕ್ ಶುಕ್ಲಾ, ಸಂಧ್ಯಾ ಜೈನ್‌ರಂತಹವರು ಅಧ್ವಾನಿಯನ್ನು ತೆಗಳುವ, ಆತನ ವಿರುದ್ಧ ದ್ವೇಷ ಕಾರುವ ಲೇಖನಗಳನ್ನು ಬರೆಯಲು ಶುರುಮಾಡಿದ್ದಾರೆ. ಮುಖಾಮುಖಿಯಾಗಿ ಹೊರಬಂದ ಈ ಲೇಖನಗಳು ನಿಟಿಸೆಂಟ್ರಲ್ ಮಾತ್ರವಲ್ಲ



ಫೇಸ್‌ಬುಕ್ ಮತ್ತು ಟ್ವಿಟರ್‌ಗಳಲ್ಲೂ ಪ್ರಕಟವಾಗಿವೆ.

ಕೆಲವು ಸ್ಯಾಂಪಲ್ ತಲೆಬರಹಗಳು ಇಲ್ಲಿವೆ:

ಅಧ್ವಾನಿಯಂತಹ ಮಿತ್ರರಿರುವಾಗ ಬಿಜೆಪಿಗೆ ಶತ್ರುಗಳ ಅವಶ್ಯಕತೆ ಇಲ್ಲ.

ಲೇ: ವಿವೇಕ್ ಶುಕ್ಲಾ, ದಿ: 11.6.2013

ಮೋದಿಯನ್ನು ಕೂರಿಸಿದ ನಂತರ ಪಿಡುಕ ಅಧ್ವಾನಿ ಈಗ ಹಾಸ್ಯಾಸ್ಪದ ವ್ಯಕ್ತಿಯಾಗಿದ್ದಾರೆ.

ಲೇ: ಸಂಧ್ಯಾ ಜೈನ್. ದಿ:12.6.2013.

ಬಿಜೆಪಿಯಲ್ಲಿಂದು ಎಲ್.ಕೆ.ಅಧ್ವಾನಿ ಯುಗ ಗತಕಾಲಕ್ಕೆ ಸರಿದಿದೆ.

ಲೇ: ಸಾಸ್ವತ್ ಪಾಣಿಗ್ರಾಹಿ. ದಿ: 14.6.2013.

ಅಧ್ವಾನಿಯ ಅಡ್ಡಿಯನ್ನೂ ಮೀರಿ ಮುಂದುವರಿದ ಮೋದಿ.

ಲೇ: ತವಲೀನ್ ಸಿಂಗ್. ದಿ: 16.6.2013.

ಪ್ರವಾಹಕ್ಕೆದುರಾಗಿ ಈಜಿ ಸೋತ ಅಧ್ವಾನಿ.

ಲೇ: ವೀರೇಂದ್ರ ಕಪೂರ್. ದಿ: 16.6.2013.

ಬಿಜೆಪಿ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಕಾರ್ಯಾಚರಿಸುತ್ತಿರುವ ಅಧ್ವಾನಿ.

ಲೇ: ಸಂಧ್ಯಾ ಜೈನ್. ದಿ: 17.6.2013.

ಪರಿಣಾಮವಾಗಿ ಜೂನ್ ಅಂತ್ಯಕ್ಕೇ ಅಧ್ವಾನಿ ದೊಡ್ಡ ವಿಲನ್ ಆಗಿ ಬಿಂಬಿಸಲ್ಪಟ್ಟಿದ್ದಾರೆ. ಮೋದಿಯನ್ನು ವಿರೋಧಿಸಿದ ಕೇಶುಭಾಯಿ ಪಟೇಲ್, ಹರೇನ್ ಪಾಂಡ್ಯ ಸಂಜಯ್ ಜೋಶಿ ಮುಂತಾದವರಿಗಾದ ಗತಿಯೇ ಅಧ್ವಾನಿಗೂ ಬಂದೊದಗಿದೆ. ●



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಗಜಗೌರಿ: ಶೋಷಿತರ ಸಾತ್ವಿಕ ಹೋರಾಟ!

ಗಜಗೌರಿಯ ಬಗ್ಗೆ ಪುರಾಣಗಳಲ್ಲಿ ಸಿಗುವಂತಹ ಉಲ್ಲೇಖಗಳು ತೀರಾ ...ಯು. ಮಹಾಭಾರತದಲ್ಲಿ ಪ್ರಸ್ತಾಪಿಸಲಾದ ಗಜಗೌರಿಯ ವ್ರತದ ಕಥೆಯು ...ಮಟ್ಟಿಗೆ ಅದರ ಬಗ್ಗೆ ತಿಳಿದುಕೊಳ್ಳಲು ಸಹಾಯ ಮಾಡುತ್ತದೆ. ನಾರದ ...ಹರ್ಷಿಯ ಉಪದೇಶದ ಮೇರೆಗೆ ಗಾಂಧಾರಿಯು ತನ್ನ ಮಕ್ಕಳ ...ಶೋಭಿಲಾಷೆಯಿಂದ ಗಜಗೌರಿಯ ವ್ರತವನ್ನು ಮಾಡುತ್ತಾಳೆ. ಅದಕ್ಕೆ ...ಕ್ಯವಿರುವ ಅತಿದೊಡ್ಡ ಮಣ್ಣಿನ ಆನೆಯ ರೂಪವನ್ನು ಮಾಡಿ, ಅದರ ...ಲೆ ಗೌರಿಯನ್ನು ಪ್ರತಿಷ್ಠಾಪಿಸಿ, ಪೂಜೆಗಳನ್ನು ಆಚರಿಸಿ ನಂತರ ಬಂದ ...ಗಳೆಯರಿಗೆ ಕುಂಕುಮ, ತಾಂಬೂಲ ಮತ್ತು ಬಾಗಿನಾದಿಗಳನ್ನು ಕೊಟ್ಟು ...ಸುತ್ತಾಳೆ. ಆದರೆ ಉದ್ದೇಶಪೂರ್ವಕವಾಗಿ ಪಾಂಡವರ ತಾಯಿಯಾದ ...ತಿಯನ್ನು ಕರೆಯುವುದಿಲ್ಲ.

...ಇದರಿಂದಾಗಿ ಕುಂತಿಯ ಮನಸ್ಸಿಗೆ ಬಹಳ ನೋವುಂ...ಟುತ್ತದೆ. ತನಗಾದ ನಿರಾಸೆ ಮತ್ತು ಅಪಮಾನವನ್ನು ...ಮಕ್ಕಳ ಬಳಿ ಹೇಳಿಕೊಳ್ಳುತ್ತಾಳೆ. ಭೀಮ ತನ್ನ ಶಕ್ತಿ ...ತ್ತು ಸಾಮರ್ಥ್ಯದ ಪ್ರಭಾವದಿಂದ ದೇವಲೋಕದ ಇಂದ್ರನ ...ಸಂತ ಐರಾವತವನ್ನೇ ತರಿಸಲು ಪಣತೊಡುತ್ತಾನೆ. ...ಕ್ಕೆ ಭೂಲೋಕದಿಂದ ದೇವಲೋಕದವರೆಗೆ ಅರ್ಜುನನು ...ಣಗಳ ದಾರಿಯನ್ನು ಕಟ್ಟುತ್ತಾನೆ. ಆ ಐರಾವತವು ಆ ...ಪಥದಲ್ಲಿ ನಡೆಯುವಾಗ ದಾರಿಯು ...ದುಹೋಗದಿರುವಂತೆ ಕೃಷ್ಣನು ನೋಡಿಕೊಳ್ಳುತ್ತಾನೆ. ...ರ ನಡೆದ ಮಹಾ ವೈಭವದ ಗಜಗೌರಿಯ ಪೂಜೆಯಲ್ಲಿ ...ನ ಎಲ್ಲಾ ಹೆಂಗಸರೂ ಕುಂತಿಯ ಮಕ್ಕಳ ಗುಣಗಾನ ...ಡುತ್ತಾರೆ. ಕುಂತಿಯು ತನ್ನ ಗಜಗೌರಿಯ ಪೂಜೆಗೆ ...ಧಾರಿಯನ್ನು ಕರೆಯಲು ಮರೆಯುವುದಿಲ್ಲ.

...ಕುಂತಿಯ ಗಜಗೌರಿಯ ಪೂಜೆಗೆ ಬರುವ ಗಾಂಧಾ...ಯು ತಾನು ಮಾಡಿದ ಪೂಜೆಗಿಂತಲೂ ಈ ಪೂಜೆ ...ವಾಗಿರುವುದನ್ನು, ವೈಭವವಾಗಿರುವುದನ್ನು ...ನಿಸುತ್ತಾಳೆ. ಜೊತೆಗೆ ಕರುಬುತ್ತಾಳೆ, ತನ್ನ ಪೂಜೆಯು ...ಾದ ಸ್ಥಿತಿಗೆ ನಾಚಿಕೆಯನ್ನೂ ಪಡುತ್ತಾಳೆ.

...ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಭಾದ್ರಪದ ...ಸದಲ್ಲಿ ಬರುವ ವ್ರತದ ಗಜಗೌರಿಯು ದಕ್ಷಿಣ ...ತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಹೆಚ್ಚು ...ಮುಖ್ಯತೆಯನ್ನು ಪಡೆಯುತ್ತದೆ. ಈ ಕಥೆಯನ್ನು ಸಾಮಾನ್ಯ ...ನಪದ ಕಥೆಯ ರಚನೆಯಲ್ಲಿಯೇ ಕಟ್ಟಿಕೊಟ್ಟಿದ್ದಾರೆ. ಗುರುರಾಜ ...ಮುದ್ದರವರಂತಹ ಕೀರ್ತನಕಾರರು ಗಜಗೌರಿ ವ್ರತದಂತಹ ಜಾನಪದ-ಪೌರಾಣಿಕ ...ಗಳನ್ನು ಬಹಳ ರೋಚಕವಾಗಿಯೂ, ಮೌಲ್ಯಾಧಾರಿತವಾಗಿಯೂ ...ಕೊಟ್ಟಿದ್ದಾರೆ ಮತ್ತು ಜನರ ಸಾಮಾನ್ಯ ಮನಃಸ್ಥಿತಿಗೆ ಮುಟ್ಟಿಸಿದ್ದಾರೆ. ಇದರಲ್ಲಿ ...ಗಳ ಗುಣ ಮತ್ತು ಆಡಂಬರಗಳ ನಡುವೆ ನಡೆಯುವ ಸಂಘರ್ಷವಿದೆ. ...ಡವರು ರಾಜ್ಯವನ್ನು ಕಳೆದುಕೊಂಡು, ಕಷ್ಟದಲ್ಲಿರುವ ಬಡವರಾದರೆ, ...ಧಾರಿಯ ಮಕ್ಕಳು ರಾಜ್ಯವನ್ನು ಅನುಭವಿಸುತ್ತಿರುವ ಶ್ರೀಮಂತರು. ...ಮಂತರ ಆಡಂಬರ ಜಂಭದಿಂದ ಮತ್ತು ದರ್ಪದಿಂದ ಬಡವರ ...ಸ್ಥಿತಿಯನ್ನು ಅಣಕಿಸುತ್ತದೆ. ಇದರಿಂದ ಕೋಪಗೊಳ್ಳುವ ಬಡವರು ...ದುಬೀಳುತ್ತಾರೆ. ಬಡವರು ತಮ್ಮ ಕೋಪವನ್ನು ಅಥವಾ ಅಸಹನೆಯನ್ನು ...ಮಂತರ ಮೇಲೆ ಹರಿಹಾಯಲು ಬಿಡಲಾಗುವುದಿಲ್ಲ. ಆದಕ್ಕಾಗಿ ಅವರು ...ದ, ಅಹಂಕಾರದ ಪ್ರದರ್ಶನಕ್ಕೆ ಪ್ರತಿಯಾಗಿ ತಮ್ಮ ಸ್ವಾಭಿಮಾನದ ವಿಜಯದ ...ರ್ಶನವನ್ನು ಕಟ್ಟಿಕೊಡುತ್ತಾರೆ. ಇಲ್ಲಿ ಜನಪದರ ಮೌಲ್ಯವನ್ನು ಗಮನಿಸಿ.

ಜನಪದ ಮೌಲ್ಯಗಳು

...ಒಂದು ಜಾನಪದ ಕಥೆ: ಒಂದೂರಲ್ಲಿ ಒಬ್ಬ ರಾಜನಿದ್ದ. ಅವನಿಗೆ ಮೂವರು ...ಡತಿಯರು. ಒಂದನೆಯವಳಿಗೆ ಒಂದು ಕೂದಲು, ಎರಡನೆಯವಳಿಗೆ ...ಡು ಕೂದಲು. ಮೂರನೆಯವಳಿಗೆ ಮೂರು ಕೂದಲು. ಈ ಮೂವರಿಗೂ ...ತುಂಬಾ ಕೂದಲು ಬಂದು ತುರುಬು ಕಟ್ಟಿಕೊಂಡು ಹೂಮುಡಿದುಕೊಳ್ಳುವ ... ಒಮ್ಮೆ ಯಾರೋ ನೀಡಿದ ನಿರ್ದೇಶನದಂತೆ ಅದೆಷ್ಟೋ ದೂರ ಪ್ರಯಾಣ ...ಡಿ, ಅದ್ಯಾವುದೋ ಕೊಳದಲ್ಲಿ ಸ್ನಾನ ಮಾಡಿ ಬಂದರೆ ಕೂದಲು ಬರುವುದೆಂಬ ...ಯವನ್ನು ಈ ರಾಣಿಯರು ಅರಿಯುತ್ತಾರೆ. ಮೊದಲನೆಯ ಮತ್ತು ಎರಡನೆಯ ...ಣಿಯರು ಮೂರನೆಯ ರಾಣಿಯನ್ನು ಈ ವಿಷಯದ ಸತ್ಯಾಸತ್ಯತೆಯನ್ನು ತಿಳಿದು ಬರಲು ಕಳುಹಿಸುತ್ತಾರೆ. ಮೂರನೆಯ ರಾಣಿ ಆ ಕೊಳವನ್ನು ಹುಡುಕಿ ಹೋಗುವಾಗ ಮಾರ್ಗಮಧ್ಯೆ ಹಸಿದ ಹಸುವು, ಕುದುರೆಯು, ತುಳಿಯಬೇಡವೆನ್ನುವ ಇರುವೆಯು, ನೀರ ಬಯಸುವ ಗುಲಾಬಿ ಗಿಡವು ಸಿಕ್ಕು, ಈಕೆ ಅವುಗಳ ಅಗತ್ಯಗಳೆಲ್ಲವನ್ನೂ ಪೂರೈಸಿ, ಕೊಳವನ್ನು ತಲುಪುತ್ತಾಳೆ. ಸಂಯಮಿಯೂ, ಸರಳಲೂ ಆಗಿರುವ ಆ ರಾಣಿಯು ಕೊಳದ ಕಾವಲಿಗಿದ್ದ ಅಜ್ಜಿಯು ವೈಭವದ ಹಾಸುಗೆ, ಸಾಮಾನ್ಯ ಚಾಪೆ ಮತ್ತು ಹೊಸ ಉಡುಪು, ಹಳೆಯ ಉಡುಪುಗಳನ್ನು ಆಯ್ಕೆಯನ್ನಾಗಿ ಇಟ್ಟಾಗ ಆಕೆ ಚಾಪೆಯನ್ನೂ, ಹಳೆಯ ಉಡುಪನ್ನೂ ಆಯ್ದುಕೊಳ್ಳುತ್ತಾಳೆ. ನೀರಿನಲ್ಲಿ ಸ್ನಾನ ಮಾಡಿದ ಮೇಲೆ ಅವಳಿಗೆ ತಲೆ ತುಂಬಾ ಕೂದಲು ಬರುತ್ತದೆ. ಅರಮನೆಗೆ ಹಿಂದಿರುಗುವಾಗ ಅವಳು ಬರುವಾಗ ಸಹಾಯ ಮಾಡಿದ ಪ್ರಾಣಿಗಳು ಅವಳಿಗೆ ತಮ್ಮಿಂದಾಗುವ ಸಹಾಯವನ್ನು





ಮಾಡುವುದಲ್ಲದೇ, ಗುಲಾಬಿ ಗಿಡವು ಅವಳ ತುರುಬಿಗೆ ಹೂಗಳನ್ನು ಮುಡಿಸುತ್ತದೆ. ಯಶಸ್ವಿಯಾಗಿ ಬೆಳೆದ ಕೂದಲನ್ನು ನೋಡಿದ ಹಿರಿಯ ರಾಣಿಯರು ತಾವೂ ಪ್ರಯಾಣ ಬೆಳೆಸುತ್ತಾರೆ. ಆದರೆ ಅವರ ಅಹಂಕಾರದ ಕಾರಣದಿಂದ ಕಿರಿಯ ರಾಣಿ ನಡೆದುಕೊಂಡಂತೆ ನಡೆಯದೇ ಇದ್ದ ಒಂದೆರಡೂ ಕೂದಲನ್ನೂ ಕಳೆದುಕೊಂಡು ಬೋಡಿಯಾಗಿ ಹಿಂದಿರುಗುತ್ತಾರೆ. ಇಂತಹ ಮೌಲ್ಯಗಳು ಜಾನಪದ ಕಥೆಗಳ ಸಾಮಾನ್ಯ ಅಂಶಗಳು.

ಸಿಂಡ್ರೆಲ್ಲಾ ತನ್ನ ಮಲಸೋದರಿಯರು ಎಷ್ಟೇ ಗೋಳು ಹೋಯ್ದುಕೊಂಡಿದ್ದರೂ ತಾನು ಅವರನ್ನು ದೂರದೇ ಇರುವುದು ಮಾತ್ರವಲ್ಲದೇ ಮುಂದೆ ತಾನು ರಾಜಕುಮಾರನ ಹೆಂಡತಿಯಾಗಿ ಅರಮನೆಯ ವೈಭವಕ್ಕೆ ಹೋಗುವಾಗಲೂ ತನ್ನ ಅದೇ ಮಲಸೋದರಿಯರನ್ನು ಕರೆದೊಯ್ಯುವುದನ್ನು ಮರೆಯಲಿಲ್ಲ. ಇದು ಜಾನಪದ ಕಥೆಗಳಲ್ಲಿ ಮೌಲ್ಯವನ್ನು ಎತ್ತಿ ಕಟ್ಟುವ ಒಂದು ವಿಧಾನ. ಅಪಮಾನಿಸಿದವರನ್ನು ಸನ್ಮಾನಿಸಿ, ಅವರಿಗೆ ತಮ್ಮ ಕೃತ್ಯದ ಬಗ್ಗೆಯೇ ಸಂಕೋಚವುಂಟಾಗುವಂತೆ ಮಾಡಿ ಪರಿವರ್ತನೆ ಮಾಡುವುದು ಒಂದು ರೀತಿಯಾದರೆ, ತಮ್ಮ ಎದುರಾಳಿಯನ್ನು ದುಷ್ಟನೆಂದೂ, ಅಹಂಕಾರಿಯೆಂದೂ, ನಕಾರಾತ್ಮಕವಾಗಿ ವಿಶ್ಲೇಷಿಸಿದ ಮೇಲೆ ಅವರಂತೆಯೇ ನಾವೂ ನಡೆಯಬಾರದಿರುವ ಅನಿವಾರ್ಯತೆಯೂ ಮತ್ತೊಂದು ಕಾರಣವಾಗಿರುತ್ತದೆ.

ಜಾನಪದದಲ್ಲಿ ವರ್ಗ ಸಂಘರ್ಷವು ಎದುರಾದಾಗೆಲ್ಲ ಹಣಕ್ಕಿಂತ ಗುಣ ಮುಖ್ಯ ಎಂಬುದನ್ನು ಸಾರಲು ಬಡವರು ಸಂಯಮವಾಗಿಯೇ ನಡೆದುಕೊಳ್ಳುತ್ತಾರೆ. ಹಾಗೂ ಅವರ ಆ ಗುಣ ವಿಶೇಷಕ್ಕೆ ಭಗವಂತನು ಒಲಿದು ವರವನ್ನು ಪ್ರಸಾದಿಸುತ್ತಾನೆ.

ಗಾಂಧಿವಾದ ಮತ್ತು ಜನಪದರ ಮೌಲ್ಯ

ಗಾಂಧಿವಾದ ಎಂದು ನಾವು ಇಂದು ಏನನ್ನು ಕರೆಯುತ್ತೇವೆಯೋ ಅದು ಜಾನಪದರ ಮೌಲ್ಯ. ಆದರೂ ಚಾಲ್ತಿಯಲ್ಲಿರುವಂತೆ ಪದವನ್ನು ಬಳಸುವುದಾದರೆ, ಬಡವರು ಗಾಂಧಿವಾದಿಗಳಾಗಿದ್ದು ನೇರ ಬಲಾಬಲ ಪ್ರದರ್ಶನಕ್ಕೆ ಇಳಿಯುವುದಿಲ್ಲ. ಕತ್ತಿಗೆ ಕತ್ತಿ ಎತ್ತುವುದಿಲ್ಲ. ಕತ್ತಿಗೆ ಕತ್ತಿ ಎತ್ತುವುದು ದುಷ್ಟರ ಕ್ರೌರ್ಯಕ್ಕೆ ಪ್ರತಿ ಕ್ರೌರ್ಯವನ್ನು ತೋರಿಸುವಂತಹ ದುಷ್ಟ ರಾಗಲು ಇಷ್ಟಪಡುವುದಿಲ್ಲ. ಹಾಗಾಗಿಯೇ ಮುಂದೆ ನಡೆವ ಪಾಂಡವರ ಕತ್ತಿ ಎತ್ತುವ ಎಲ್ಲಾ ಕ್ರಿಯೆಗಳನ್ನೂ ಭಗವಂತನಾದ ಕೃಷ್ಣನ ನೆರಳಿನಲ್ಲಿಡುತ್ತಾರೆ. ಅವನ ಆಜ್ಞಾಧಾರಕವಾಗಿ ಪಾಂಡವರು ನಡೆದುಕೊಂಡರು ಎಂದು ಅವರನ್ನು ದುಷ್ಟತನದಲ್ಲಿ ಭಾಗಿಯಾಗುವುದರಿಂದ ರಕ್ಷಿಸುತ್ತಾರೆ. ಪಾಂಡವರು ಖಂಡಿತವಾಗಿಯೂ ದೇವರ ಮಾರ್ಗದಲ್ಲಿಯೇ ನಡೆದವರೆಂದು ಕಟ್ಟಿಕೊಡುತ್ತಾರೆ. ಹೀಗೆ ಮಹಾಭಾರತವು ಜಾನಪದ ಕಥಾ ಹಂದರದಲ್ಲಿಯೇ ರಚಿತವಾಗಿದ್ದು ಅದರಲ್ಲಿ ಚಾರಿತ್ರಿಕ ಮತ್ತು ತಾತ್ವಿಕ ಅಂಶಗಳನ್ನು ನಾವು ಅಲ್ಲಲ್ಲಿ ಗುರುತಿಸಲು ಸಾಧ್ಯವಾಗುತ್ತದೆ.

ಜನಪದರ ದೃಷ್ಟಿಯಲ್ಲಿ ದುಷ್ಟರ ವಿರುದ್ಧವಾಗಿ ಸಜ್ಜನರ ಸಾತ್ವಿಕ ವಿಜಯವೇ ಮಹಾಭಾರತ. ಅಷ್ಟೇ ಅವರ ಕಥೆಯು ನೀತಿಯೂ ಕೂಡ. ಮಿಕ್ಕೆಲ್ಲವೂ ವಿವರಣೆಗಳು.

ತುಳಿತಕ್ಕೆ ಒಳಗಾದ ಜನಸಮುದಾಯದ ಚಿಂತಕರು, ದಾರ್ಶನಿಕರು, ಹೋರಾಟಗಾರು ತಮ್ಮ ಸಾತ್ವಿಕ ನೆಲೆಗಟ್ಟಿನಿಂದಲೇ ಹೋರಾಟವನ್ನು ಮಾಡಲು ತೊಡಗುತ್ತಾರೆ. ಅವರಿಗೆ ಶಸ್ತ್ರಗಳ ಪರಿಚಯವಿರುವುದಿಲ್ಲ, ಅವರ ಮನೆಯವರು ಯಾರೊಂದಿಗೂ ಹೊಡೆದಾಡಿ ದರ್ಪ ತೋರಿಸಿರುವುದಿಲ್ಲ. ಹಾಗಾಗಿಯೇ ಜೆರೂಸಲೇಂನ ಯಹೂದಿಗಳ ಯೇಸುವೂ ಶತ್ರುಗಳನ್ನು ಪ್ರೀತಿಸುವುದರ ಮೂಲಕ ಗೆಲ್ಲಲು ಮಾರ್ಗವನ್ನು ಹಾಕಿಕೊಟ್ಟು ತಾನು ಸೋತನು. ಒಂದು ಕೆನ್ನೆಗೆ ಹೊಡೆದವರಿಗೆ ಇನ್ನೊಂದು ಕೆನ್ನೆ ತೋರುವಂತೆ ಹೇಳುವ ಯೇಸುವಿನ ದನಿ ಪುರಂದರದಾಸರ "ಧರ್ಮವೇ ಜಯವೆಂಬ ದಿವ್ಯ ಮಂತ್ರ"ದ ಕೀರ್ತನೆಯಲ್ಲಿಯೂ ಧ್ವನಿತವಾಗಿದೆ. ವಿಷವಿಕ್ಕಿದವಗೆ ಷಡ್ರಸವನ್ನುಣಿಸಬೇಕು. ಮೋಸ ಮಾಡಿದವನ ಹೆಸರ ಮಗನಿಗಿಡಬೇಕು, ಪುಸಿಯಾಡಿ ಕೆಡಿಸುವನ ಹಾಡಿ ಹರಸಲು ಬೇಕು; ಈ ಎಲ್ಲವೂ ನಕಾರಾತ್ಮಕವಾಗಿರುವುದನ್ನು ಸಕಾರಾತ್ಮಕವಾಗಿಸಲು ಮಾಡುವ ತಂತ್ರವೆಂದು ಅವರು ಬಗೆದಿದ್ದರು.

ಅದು ಬಹುಶಃ ಎಲ್ಲಾ ದೇಶದ ಕೆಳವರ್ಗದ ಜನರ ನೆಲೆಯಿಂದ ಹುಟ್ಟಿದ ನೀತಿಯಿರಬೇಕೆಂದು ನಾನು ಜನಪದೀಯವಾಗಿ ಗುರುತಿಸುತ್ತೇನೆ. ಕಷ್ಟಗಳನ್ನು ಅನುಭವಿಸುವುದು, ನಂತರ ಗೆಲುವನ್ನು ಸಾಧಿಸುವುದು, ಆದರೆ ದುಷ್ಟರ ಜೊತೆಗೆ ಹೋರಾಡಿ ಅಲ್ಲ. ಜನಪದದಲ್ಲಿ ಕತ್ತಿ ಎತ್ತಿ ಹೋರಾಡುವವರೆಗೂ ಮಾನ್ಯತೆ ಇದೆ. ಆದರೆ, ಆತ ಕತ್ತಿ ಎತ್ತುವುದೆಲ್ಲಾ ಸಾತ್ವಿಕ ಕಾರಣಗಳಿಗಾಗಿ. ಬೇರೆ ದಾರಿಯೇ ಇಲ್ಲ ಎಂದಾದಾಗ ಮಾತ್ರ. ಕತ್ತಿ ಎತ್ತಿದವರೆಲ್ಲಾ ಕತ್ತಿಯಿಂದಲೇ ಹತರಾಗುವರು ಎಂಬುದನ್ನು ಜನಪದರ ತೀವ್ರವಾಗಿ ನಂಬಿದ್ದ ಕಾರಣದಿಂದ ತಾವು ಕತ್ತಿಯನ್ನು ಎತ್ತಿ ಹತರಾಗುವುದನ್ನು ಮತ್ತು ದುಷ್ಟರಾಗುವುದನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಜನಪದರ ಗುರಿ ಬದುಕೇ ಹೊರತು ಮರಣವಾಗಿರಲಿಲ್ಲ. ಆದಾದಮೇಲೆ ಅವರು ಆ ಊರಿನಲ್ಲಿ ಸುಖವಾಗಿದ್ದರು ಎಂದೇ ಕತೆ ಕೊನೆಯಾದರೇನೇ ಆ ಜಾನಪದ ಕಥೆಯ ಆಶಯವು ಈಡೇರಿದಂತೆ.


ಲಕ್ಷ್ಮಿ ಮತ್ತು ಗೌರಿ

ಲಕ್ಷ್ಮಿಯು ವೈಷ್ಣವರ ಕುರುಹಾದರೆ, ಗೌರಿಯು ಜಾನಪದರ ಮತ್ತು ಶೈವರ ಕುರುಹು. ಈಗ ಗಜಲಕ್ಷ್ಮಿ ಎಂಬ ವೈಷ್ಣವರ ಸಂಕೇತವನ್ನೂ ಮತ್ತು ಗಜಗೌರಿ ಎಂಬ ಜಾನಪದರ ಅಥವಾ ಶೈವರ ಕುರುಹನ್ನೂ ಗಮನಿಸೋಣ. ಇಬ್ಬರಿಗೂ ಸಾಮಾನ್ಯವಾಗಿರುವ ವಾಹಕ ಸಂಕೇತವೆಂದರೆ, ಅದು ಗಜ. ಆನೆಯು ಶಕ್ತಿಯನ್ನೂ ಮತ್ತು ಸಿರಿವಂತಿಕೆಯನ್ನೂ ಸೂಚಿಸುವುದರ ಜೊತೆಗೆ ಆಗಿನ ಶ್ರೀಮಂತ ಅಧಿಕಾರವನ್ನೂ ಸೂಚಿಸುತ್ತಿತ್ತು, ಹಾಗಾಗಿಯೇ ವೈಷ್ಣವರಿಗೆ ಗಜಲಕ್ಷ್ಮಿಯೂ, ಉಳಿದವರಿಗೆ ಗಜಗೌರಿಯೂ ಆರಾಧನೆಗೆ ಒದ್ದಿಕೊಂಡರು.

ದಕ್ಷಿಣ ಭಾರತದಲ್ಲಿ ಆರ್ಯರ ಅದರಲ್ಲೂ ವೈದಿಕ ಬ್ರಾಹ್ಮಣರ ಆಗಮನಕ್ಕೆ ಮುಂಚೆ ವೈಷ್ಣವ ಪದ್ಧತಿಯ ಪರಿಕಲ್ಪನೆಗಳೇನೂ ಅಷ್ಟಾಗಿ ಪರಿಚಯವಿದ್ದಂತೆ ತೋರುವುದಿಲ್ಲ ಎನಿಸುತ್ತದೆ. ಶೈವ ಪರಿಪರಿಕಲ್ಪನೆಗಳು ವೈಷ್ಣವ ಪ್ರಭಾವಕ್ಕಿಂತಲೂ ಬಹಳ ಪ್ರಾಚೀನವಾದುದು ಎಂಬುದರಲ್ಲಿ ಅನುಮಾನವೇ ಇಲ್ಲ.

ದಕ್ಷಿಣ ಭಾರತದಲ್ಲಿ ಬ್ರಾಹ್ಮಣರೇ ಇರದಿದ್ದ ಕಾಲವೊಂದಿತ್ತು, ಆಗೆಲ್ಲಾ ಪ್ರಚಲಿತದಲ್ಲಿದ್ದ ದೇವರುಗಳೆಲ್ಲರೂ ಸ್ಥಳೀಯರೂ, ಗ್ರಾಮದೇವತೆಯರೇ ಆಗಿದ್ದವು. ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ಬ್ರಾಹ್ಮಣರು ನಾನಾಕಾರಣಗಳಿಂದ ವಲಸೆ ಬಂದರು. ಇನ್ನೂ ಕೆಲವು ಅಧ್ಯಯನಗಳು ತಿಳಿಸುವಂತೆ ಅವರನ್ನು ಒತ್ತಾಯಪೂರ್ವಕವಾಗಿಯೇ ಇಲ್ಲಿಗೆ ಕರೆತರಲಾಯಿತು. ಹಾಗೆ ಬಂದ ಬ್ರಾಹ್ಮಣರಲ್ಲಿ ವೈದಿಕರು ಎಂದಿನಂತೆ ತಮ್ಮ ಕಂತೆ ಬಿಚ್ಚಲಾರಂಭಿಸಿದ್ದರು. ಗೌರಿಯ ಸ್ಥಾನವನ್ನು ಲಕ್ಷ್ಮಿಯು ಸಂಪಾದಿಸಿದಳು. ಗಜಗೌರಿಯು ಕ್ರಮೇಣ ಗಜಲಕ್ಷ್ಮಿಯಾದಳು. ಗ್ರಾಮೀಣ ದೇವತೆಗಳ ಎಷ್ಟೋ ಪರಿಕಲ್ಪನೆಗಳು ನಿಧಾನವಾಗಿ ವೈದಿಕರ ಚೌಕಟ್ಟಿಗೆ ಅಳವಡಿಸಲಾಯಿತು. ಈ ಬಗೆಯ ಸಾಂಸ್ಕೃತಿಕ ಮತ್ತು ಸಾಂಪ್ರದಾಯಿಕ ವಿಷಯಗಳು ಬೆರೆತುಹೋಗುವುದು ಸಂಸ್ಕೃತೀಕರಣದಲ್ಲಿ ಹೊರತಾಗಿರುವುದೇನೂ ಅಲ್ಲದಿದ್ದರೂ, ಮೂಲ ಕಲ್ಪನೆಗಳು ಮೂಲೆಗುಂಪಾಗುತ್ತಾ ಬಂದದ್ದು, ವೈದಿಕರ ಶೋಷಣಾ ಪದ್ಧತಿಗೆ ವಸ್ತುಗಳಾಗುತ್ತಾ ಹೋದದ್ದು ವಿಪರ್ಯಾಸ. ಅವುಗಳನ್ನು ಮುಂದೆ ಹಂತಹಂತದಲ್ಲಿ ಕಾಣುತ್ತಾ ಬರುತ್ತೇವೆ. ಈ ನೆಲದ ಜನಪದರ ಸಾತ್ವಿಕ ಚಿಂತನೆಯ ಪರಂಪರೆಯೂ, ಸಂಯಮ, ಸರಳ ಹಾಗೂ ಸಜ್ಜನಿಕೆಯಿಂದಲೇ ದುಷ್ಟತನವನ್ನು ಮಣಿಸಬಹುದು, ಗೆಲ್ಲಬಹುದು ಎಂಬ ತಾತ್ವಿಕ ನೆಲೆಯೂ ಪರಕೀಯರ ಕಠೋರವಾದ ತಾತ್ವಿಕ ಹಾಗೂ ರಾಜಕೀಯ ದಾಳಿಗಳನ್ನು ತಾಳಿಕೊಳ್ಳಲಾಗಲಿಲ್ಲವೇನೋ. ಆದರೆ, ಅವು ಹಲವು ಹಂತಗಳಲ್ಲಿ ವಿಜಯವನ್ನು ಸಾಧಿಸಿರುವುದು ಇತಿಹಾಸವಾದರೆ, ಅದರಿಂದಲೇ ನರಳಿರುವುದೂ, ನರಳಿಕೆಯ ನೆರಳು ಈಗಲೂ ಇರುವುದು ಅಷ್ಟೇ ಸತ್ಯ.

ಏನೇ ಆಗಲಿ, ನಮ್ಮ ಪ್ರಾಚೀನರಲ್ಲಿ ಗಜ ಮೆರೆಸಿದ್ದ ಸಂಕೇತವಾಗೂ ಬಹು ಪ್ರಮುಖವಾಗಿದ್ದು, ಅದು ಧೀಮಂತವಾಗಿದ್ದು ಶ್ರೀಮಂತವಾಗಿಯೇ ಇಂದಿಗೂ ಉಳಿದಿದೆ. ●



'ಎಲ್ಲಿ ಯಡೂರಪ್ಪನೊ ಅಲ್ಲಿ ಧನಂಜಯಕುಮಾರ್!'

ಥೂತ್ತೇರಿ

ಯಾಹೂ

ನರೇಂದ್ರ ಮೋದಿ ಎದುರು ತಬ್ಬಲಿ ಎಳೆಗರುವಿನಂತೆ ಕಾಣುತ್ತಿರುವ ರಾಹುಲ್ ಗಾಂಧಿ ಟೈಮ್ಸ್ ಟಿವಿ ಚಾನಲ್‌ಗೆ ಕೊಟ್ಟ ಸಂದರ್ಶನಕ್ಕೆ ಯಾರಾದರೂ ಉತ್ತರ ಕೊಡಬಹುದೆಂದು ಕಾಯುತ್ತಿದ್ದಾಗ ಎಂದಿನಂತೆ ಮೋದಿ ಹೂಸಿದ್ದು, ಕೆಮ್ಮಿದ್ದಕ್ಕೆಲ್ಲಾ ಕಲ್ಲರ್ ಕೊಡುವ ವಿಕೃತ ಭಟ್ಟ ತನ್ನ ಲೇಖನಿಯನ್ನು ಲಾಠಿಯಂತೆ ಬಳಸಿದ್ದಾನಲ್ಲಾ. ಇಂದಿರಾ ಗಾಂಧಿ ಕೊಲೆಯಾದ ಮರುದಿನದ ಸಿಖ್ ಹತ್ಯಾಕಾಂಡವನ್ನು ಪ್ರತ್ಯಕ್ಷದರ್ಶಿ ಚಡ್ಡಿಯಂತೆ ವರ್ಣಿಸಿರುವ ಭಟ್ಟ "ರಾಹುಲ್ ಗಾಂಧಿಯವರೆ, ಹಸಿ ಸುಳ್ಳು ಹೇಳಲು ಮನಸ್ಸಾದರು ಹೇಗೆ ಬಂತು" ಎಂದು ಕೇಳಿದ್ದಾನೆ. ಭಟ್ಟ ಇದೇ ಪ್ರಶ್ನೆಯನ್ನು ನರೇಂದ್ರ ಮೋದಿಗೆ ಈವರೆಗೂ ಕೇಳಿಲ್ಲವಂತಲ್ಲಾ. ಇಂದಿರಾ ಗಾಂಧಿ ಹತ್ಯೆಯ ಮರುದಿನ ಹಠಾತ್ತನೆ ಸಾವಿರಾರು ಸಿಖ್ಖರ ಹತ್ಯೆ ನಡೆಯಿತು. ಆಗ ಈ ದೇಶದ ಕೆಲವರಿಗಾದರೂ ಮಾಯಿಗೆ ಮಾಯಿ ತೀರಿತು ಎಂಬ ಸಮಾಧಾನವಾಗಿರಬಹುದು. ಏಕೆಂದರೆ ಸಿಖ್ಖರು ಹತ್ತು ವರ್ಷ ದಿನಕ್ಕೆರಡು ಮೂರು ಜನರಂತೆ ಸಿಕ್ಕಸಿಕ್ಕವರನ್ನು ಹತ್ಯೆ ಮಾಡಿದ್ದರು. ಒಂದು ಬಸ್ಸಿನಲ್ಲಿರುವ ಎಲ್ಲಾ ಸಿಖ್ ಮತ್ತು ಮುಸ್ಲಿಮರನ್ನು ಇಳಿಸಿ ಹಿಂದೂಗಳ ಹತ್ಯೆ ಮಾಡಿದ್ದರು. ಹೊಸದಾಗಿ ಮದುವೆಯಾದ ಜೋಡಿಯೊಂದು ತಬ್ಬಿಕೊಂಡೇ ಅಸು ನೀಗಿದ್ದರು. ಅವರ ರಕ್ತ ಬಸ್ಸಿನ ಮೆಟ್ಟಿಲುಗಳ ಮೇಲೆ ಹರಿದು ನೆಲಕ್ಕೆ ತೊಟ್ಟಿಕ್ಕಿತ್ತು. ಇಂತಹ ಸಣ್ಣ ಘಟನೆಗಳೆಲ್ಲಾ ಸಿಡಿ ಮದ್ದಾಗಿ ಇಂದಿರಾ ಗಾಂಧಿ ಹತ್ಯೆ ನಂತರ ಸ್ಫೋಟಿಸಿದ್ದು ಈ ದೇಶ ಕಂಡ ಘಟನೆ. ಆದರೆ ಎಲ್ಲ ಹತ್ಯೆಗಳು ಖಂಡನೀಯವೆ. ಹಾಗೆಯೇ ಭಟ್ಟ ಈವರೆಗೆ ಗುಜರಾತಿನ ಹತ್ಯೆಗಳ ಬಗ್ಗೆ ಮೂರು ಸಾಲು ಬರೆಯದಿರುವುದೂ ಕೂಡ ಖಂಡನೀಯವೆ. ಸಾಮಾನ್ಯವಾಗಿ ಸುಳ್ಳನ್ನು ಬದುಕಾಗಿಸಿಕೊಂಡವರು ಬೇರೆಯವರ ಒಂದು ಸುಳ್ಳನ್ನು ಸಹಿಸಲಾರರು. ಅದರ ವಿರುದ್ಧ ನೂರಾರು ಸುಳ್ಳಿನ ಮಾಲೆ ಹೆಣೆಯಬಲ್ಲರು. ಅದರಂತೆ ರಾಹುಲ್ ಗಾಂಧಿ ಉತ್ತರ ಕೊಡಲು ತಿಣುಕಿರುವ ಸಂಗತಿಗೆ ನೂರಾರು ಸುಳ್ಳು ಹೆಣೆಯುವ ಭಟ್ಟ ಮೊದಲು ಮೋದಿ ವೃತ್ತಾಂತ ಪ್ರಕಟಿಸಿದರೆ ಒಳ್ಳೆಯದಲ್ಲವೇ ಥೂತ್ತೇರಿ!

* * * * *

ಹಾಡುಹಗಲೇ ಗಾಂಧಿಯನ್ನು ಕೊಂದು ನಾಮಾವಶೇಷವಾಗಿ ಹೋಗಿದ್ದ ಚಡ್ಡಿಗಳು ಜಯಪ್ರಕಾಶ್ ನಾರಾಯಣರಿಂದ ಮರುಜೀವ ಪಡೆದುಕೊಂಡರಲ್ಲಾ. ಜನತಾಪಕ್ಷದೊಳಕ್ಕೆ ಚಡ್ಡಿಗಳು ಸೇರಿಕೊಂಡಾಗಿನಿಂದಲೂ ಪಾರ್ಟಿಯನ್ನೇ ಆಪೋಷನ ತೆಗೆದುಕೊಳ್ಳುವ ಸಂಚಿನಿಂದ ಕೂಡಿದ್ದ ಕಾರಣಕ್ಕೆ ಇಡೀ ಜನತಾ ಪಾರ್ಟಿಯೇ ಒಡೆದುಹೋಗಿದ್ದು ಇತಿಹಾಸ. ಆದರೆ ರಾಮಮಂದಿರದ ಬಾಗಿಲು ತೆಗೆದದ್ದೇ ಚಡ್ಡಿಗಳ ಭಾಗ್ಯದ ಬಾಗಿಲು



ತೆಗೆದಂತಾಗಿತ್ತು. ಮೊದಲ ಹಂತವಾಗಿ ಇಟ್ಟಿಗೆ ಸಂಗ್ರಹಿಸಿ ಅಯೋಧ್ಯೆಯಲ್ಲಿ ಜೋಡಿಸಿದರು. ನಂತರ ರಾಮನ ಪಾದುಕೆ ಮೆರವಣಿಗೆಗೆ ವಂತಿಕೆ ಸಂಗ್ರಹ. ಆ ನಂತರ ರಾಮಜ್ಯೋತಿ ಮೆರವಣಿಗೆಗೆ ಕಾಣಿಕೆ ಸಂಗ್ರಹ. ಇಡೀ ದೇಶದಲ್ಲಿ ಮೂರು ಬಾರಿ ಭಿಕ್ಷೆ ಎತ್ತಿ ತಮ್ಮ ಬಡತನ ನೀಗಿಸಿಕೊಂಡ ಚಡ್ಡಿಗಳು ಮನೆ ಕಟ್ಟಿ ಮದುವೆಯಾಗಿ, ಅಂಗಡಿ ಇಟ್ಟು ದುಂಡಗಾದರಂತಲ್ಲಾ. ಜೊತೆಗೆ ತಮ್ಮ ಹೆಂಡತಿಯರಿಗೆ ಬ್ಯಾಂಕು, ಪೋಸ್ಟಾಫೀಸು ಮತ್ತು ಟೆಲಿಫೋನ್ ಇಲಾಖೆಯಲ್ಲಿ ಕೆಲಸ ಕೊಡಿಸಿ ತಾವು ಪೂರ್ಣಾವಧಿಯಲ್ಲಿ ಲಾಠಿ ಬೀಸುತ್ತ ಅಂತೂ ವಾಜಪೇಯಿಯನ್ನು ಪ್ರಧಾನಮಂತ್ರಿ ಮಾಡಿದರಂತಲ್ಲಾ. ಆದರೆ ಕಳೆದೊಂದು ದಶಕದಿಂದ ಶರಶಯ್ಯೆಯ ಭೀಷ್ಮನಂತೆ ಮಲಗಿರುವ ವಾಜಪೇಯಿಯಿಂದ ಒಂದೇ ಒಂದು ಓಟು ಬರುವ ಸಂಭವವಿಲ್ಲ. ಅದಕ್ಕಾಗಿ ಕಾಂಗ್ರೆಸ್ಸಿಗನಾಗಿ ಬದುಕಿಬಾಳಿದ್ದ, ಉಕ್ಕಿನ ಮನುಷ್ಯನೆಂದು ಖ್ಯಾತಿ ಗಳಿಸಿದ್ದ ಸರ್ದಾರ್ ವಲ್ಲಭಭಾಯಿ ಪಟೇಲರ ಉಕ್ಕಿನ ಪ್ರತಿಮೆ ಸ್ಥಾಪಿಸುತ್ತೇವೆಂದು ಚಡ್ಡಿ ಗ್ಯಾಂಗ್ ಇಡೀ ಭಾರತದಲ್ಲಿ ಹಳೇ ಕಬ್ಬಿಣ ಸಂಗ್ರಹಿಸುತ್ತಿದೆಯಂತಲ್ಲಾ. ಜನ ತಮ್ಮಲ್ಲಿರುವ ಹಳೆ ಕುಡುಗೋಲು, ಹಾರೆ, ಪಿಕಾಸಿ, ಉಜ್ಜುಗೇರಿ, ಕೊಣವೆಗುಳ ಮತ್ತು ಕೊಡತಿಯನ್ನೆಲ್ಲಾ ಕೊಟ್ಟು, ಚಡ್ಡಿಗಳ ಗುಜರಿ ವ್ಯಾಪಾರ ನೋಡಿ ಒಳಗೊಳಗೇ ನಗುತ್ತಿದ್ದಾರಂತಲ್ಲಾ. ಅದೇನಾದರಾಗಲಿ, ಇನ್ನು ಕೆಲವೇ ತಿಂಗಳಲ್ಲಿ ಅಯೋಧ್ಯೆಯಲ್ಲಿ ಇಟ್ಟಿಗೆ ಸಂಗ್ರಹವಾದಂತೆ ಗುಜರಾತಿನಲ್ಲಿ ಪಟೇಲರ ಗುಜರಿ ಪರ್ವತವೊಂದು ತಲೆ ಎತ್ತಲಿದೆಯಂತಲ್ಲಾ, ಥೂತ್ತೇರಿ !!

* * * * *

ಬಿಜೆಪಿಗೆ ಬಂದ ಖುಷಿಯಲ್ಲಿ "ಕೆಜೆಪಿ ಒಂದು ಕೆಟ್ಟ ಕನಸು" ಎಂದು ವ್ಯಾಖ್ಯಾನಿಸಿರುವ ಯಡೂರಪ್ಪನ ಕೆಟ್ಟ ಕನಸಿನ ಕೂಸುಗಳಲ್ಲಿ ಒಬ್ಬರಾದ ಧನಂಜಯಕುಮಾರ್ ಪರಿಸ್ಥಿತಿ ಏನಾಗಿರಬಹುದೆಂದು ಅವರನ್ನು ಮಾತನಾಡಿಸಬೇಕೆನಿಸಿತಲ್ಲಾ. ಆದ್ದರಿಂದ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಅನಾಥ ಮಗುವಾದೆ ನಾನೂ ಅನಾಥ...".

"ಹಲೋ ಯಾರು?"

"ನಾನು ಸಾರ್, ಯಾಹು."

"ಯಾಹು ಅಂದರೆ?"

"ಪತ್ರಕರ್ತ ಸಾರ್."

"ಪತ್ರಕರ್ತರ ಅಗತ್ಯ ತುಂಬ ಉಂಟು. ಏನು ಹೇಳಿ."

"ಏನು ಸಾರ್ ನಿಮ್ಮ ಕತೆ?"

"ನಮ್ಮ ಕತೆ ಯಂತದು. ಚಂದವುಂಟಲ್ಲ."

"ನಿಮ್ಮ ನಾಯಕರೋಗಿ ಬಿಜೆಪಿ ಸೇರಿಕೊಂಡ್ರು. ನೀವು ಬೀದಿಲುಳಕಂಡ್ರುಲ್ಲಾ?"

"ಬೀದಿ ನಮಗೆ ಹೊಸದಲ್ಲ. ಬೀದಿ ಹೋರಾಟದಿಂದಲೇ ನಾವು ಪಕ್ಷ ಕಟ್ಟಿದ್ದು."

"ಕಟ್ಟಿದ ಪಕ್ಷ ಬಿಟ್ಟು ಕೆಜೆಪಿಗೋದ್ರಿ. ಮುಂದೆ ಕತೆಯೇನು?"

"ಕತೆಯಂತದು? ಮತ್ತೆ ಬಿಜೆಪಿಗೆ ಹೋಗ್ತಾಯಿದ್ದೇನೆ."

"ಅದ್ವಾನಿನ ನೀವು ಅಂಗೆ ಬೋದರಲ್ಲ? ಅವುರು ಸೇರಿಸಿಕೊಳ್ತರ?"

"ಈಗ ಅದ್ವಾನಿ ಪಕ್ಷ ಅಲ್ಲ ಅದು. ಮೋದಿ ಪಕ್ಷ. ಅದಕ್ಕಾಗಿ ನಮ್ಮ ನಾಯಕರಾದ ಯಡೂರಪ್ಪನವರು ಮೋದಿಯನ್ನು ಬೆಂಬಲಿಸಲೋಸ್ಕರವಾಗಿ ಬಿಜೆಪಿ ಸೇರಿದ್ದಾರೆ. ಎಲ್ಲಿ ಯಡಿಯೂರಪ್ಪನವರೊ, ಅಲ್ಲಿ ಈ ಧನಂಜಯಕುಮಾರ್."

"ಅದು ನಿಮ್ಮ ಅಭಿಪ್ರಾಯ. ಆದರೆ ಬಿಜೆಪಿಲಿ ನಿಮ್ಮ ಸೇರ್ಪಡೆಗೆ ವಿರೋಧ ಇದೆಯಂತೆ."

"ಪಕ್ಷ ಬಿಟ್ಟು ಹೋದವರನ್ನ ಮತ್ತೆ ಸೇರಿಸಿಕೊಳ್ಳುವಾಗ ವಿರೋಧ ಸಹಜ. ಆ ವಿರೋಧ ಮಾಡುವವರು ಯಾರು ಎಂಬುದು ಮುಖ್ಯ. ಅವರು ಯಾರು ಎಂದರೆ ಅದ್ವಾನಿ ಆರಾಧಕರು. ಅವರಿಗೆ ನನ್ನ ಬಗ್ಗೆ ಬೇಸರವಾಗಿರುವುದು ಸಹಜ."

"ನಿಜಕ್ಕೂ ನಿಮ್ಮ ಧೈರ್ಯವೇ ಧೈರ್ಯ ಸಾರ್. ಅಂತ ಅದ್ವಾನಿನೇ ಭ್ರಷ್ಟ, ಆತನ ಮಕ್ಕಳು ಕಿಕ್‌ಬ್ಯಾಕ್ ಶೂರರು ಅಂದುಬುಟ್ರಿ."

"ನಾನು ಅದ್ವಾನಿ ಭ್ರಷ್ಟರು ಅಂತ ಎಲ್ಲೂ ನೇರವಾಗಿ ಹೇಳಿಲ್ಲ."

"ಪತ್ರಿಕೆಲಿ, ಟಿವಿಲಿ ದಾಖಲಾಗಿದೆ ಸಾರ್."

"ಹಾಗಿದ್ದರೆ, ನಾನು ಅದ್ವಾನಿಯವರ ಕ್ಷಮೆ ಕೇಳ್ತೇನೆ!!"

"ಕ್ಷಮೆ ಕೇಳಿದ್ರೆ ನಿಮ್ಮ ಮಾತು ಸುಳ್ಳಾಗುತ್ತ?"

"ನೋಡಿ, ಸುಳ್ಳು ಸತ್ಯ ಎಂಬುದು ಮುಖ್ಯವಲ್ಲ. ನಾನಾಗ ಯಡೂರಪ್ಪನ ಬೆಂಬಲಿಗನಾಗಿದ್ದೆ. ಅದ್ವಾನಿಯವರು ನಮ್ಮ ವಿರೋಧಿಗಳಾಗಿದ್ದರು. ಆದಕಾರಣ ಅವರನ್ನು ಟೀಕೆ ಮಾಡಿದ್ದೇನೆ. ಆ ಟೀಕೆಯಿಂದ ಅವರ ಮನಸ್ಸಿಗೆ ನೋವಾಗಿದ್ದರೆ ಕ್ಷಮೆ ಕೋರುತ್ತೇನೆ."

"ಅವರು ಕ್ಷಮಿಸದಿದ್ದರೆ?"

"ಮತ್ತೆ ಕ್ಷಮೆ ಕೋರುತ್ತೇನೆ."

"ಏನೇ ಆಗ್ಲಿ ನಿಮ್ಮಂತವರು ಅದ್ವಾನಿ ತರದವರ ಕ್ಷಮೆ ಕೇಳಬಾರ್ದು ಸಾರ್."

"ಅದ್ವಾನಿ ಅಂತವರು ಅಂದರೆ ಏನು?"


"ಏನಂದ್ರೆ, ಈ ದೇಶ ಬಹಳ ಸೂಕ್ಷ್ಮವಾದ ದೇಶ. ಇಲ್ಲಿ ರಾಜಕಾರಣ ಮಾಡಬೇಕಾದ್ರೆ ಕಾರ್ಯಕ್ರಮ ಹಾಯ್ಕಬೇಕು. ಅದು ಬಿಟ್ಟು ಮಂಡಲ್ ವಿರೋಧ ಮಾಡಕ್ಕೆ ರಥಾ ಹೂಡಿಕೊಂಡು ಬಂದ್ರು. ನೂರಾರು ಸಾವುಗಳಾದೊ. ಶ್ರೀರಾಮನನ್ನ ರಸ್ತೆಗೆ ತಂದು ರಾಜಕಾರಣ ಮಾಡಿದ ಗಿರಾಕಿ ಆತ. ಏನೇನೊ ಮಾಡಿ ವಾಜಪೇಯಿನ ಪ್ರಧಾನಿ ಮಾಡಿದ್ರೊ. ಅಂಥ ಕಾರ್ಯಕ್ರಮದ ಫಲವಾಗಿ ಇವತ್ತು ಮೂಲೆಗೆ ಸರಕೊಳಂಗೆ ಮಾಡಿ, ಮೋದಿನ ಮೇಲೆ ತಂದವುರೆ. ಅಂತು ಅದ್ವಾನಿ ಮಾಡಿದ್ದು ಅವುರಿಗೇ ಮುಳುವಾಯ್ತು. ಇಡೀ ಬಿಜೆಪಿ ತಾತ್ಸಾರ ಮಾಡಿರೊ ವ್ಯಕ್ತಿನ ನೀವ್ಯಾಕೆ ಕ್ಷಮೆ ಕೇಳ್ತಿರಿ?"

"ಸುಮ್ಮನೆ ನೆಪಕ್ಕೆ ಕೇಳ್ತೆನೆ ಅಷ್ಟೆ."

ಥೂತ್ತೇರಿ!!!

ಪೇಜಾವರರ ಪಲ್ಲಕ್ಕಿ ಲಕ್ಷ್ಮೀವರನ ಸಂಸ್ಕೃತಿ

ಪೂರ್ತಿಯಾಗಿ ನಂಬಿಕೊಳ್ಳಲಾಗದ ಶೂದ್ರ ಮುಂಡೇವು, ಪುಂಡಾಟಿಕೆಯ ಸಾಬರುಗಳು



ಮತಾಂತರದ ಕಿರಿಸ್ತಾನರುಗಳ ದೆಸೆಯಿಂದಾಗಿ ತಮ್ಮ ಅಖಂಡ ಹಿಂದೂ ರಾಷ್ಟ್ರದ ಕನಸು ನನಸಾಗದೇ ಉಳಿಯುವ ಭಯಕ್ಕೆ ಬಿದ್ದ ವಿಎಚ್‌ಪಿ ಮುಖಂಡ ಪೇಜಾವರರಿಗೆ ನಾಲ್ಕು ಜನ ಹೊರುವ ಪಲ್ಲಕ್ಕಿ ಮತ್ತೆಂತದೋ ಭಯ ಹುಟ್ಟಿಸಿದ ಕಾರಣ ಪಲ್ಲಕ್ಕಿಗಿಂತ ತಮಗೆ ಜೀಪೇ ವಾಸಿ ಎಂದು ಪರ್ಯಾಯದಲ್ಲಿ ಕ್ರಾಂತಿಗೀತೆ ಹಾಡಿದರಂತೆ.

ಇದನ್ನರಿತ ಶಿರೂರು ಲಕ್ಷ್ಮೀವರ ಎಂಬ ಹಾಪಿಂಗ್ ಫ್ಯಾಮಿಲಿ ಸ್ವಾಮಿ 'ಪಲ್ಲಕ್ಕಿ ಸವಾರಿ ನಮ್ಮ ಪುರಾತನ ಕಾಲದಿಂದಲೂ ಇದ್ದ ಸಂಸ್ಕೃತಿ ಸಂಪ್ರದಾಯಗಳಾಗಿರುವಾಗ ಸಂಸ್ಕೃತಿಯನ್ನೇ ಉಂಡು ಉಟ್ಟು ತಿರುಗುವ ನಮ್ಮಂತವರಿಗೆ ಪೇಜಾವರರ ತೀರ್ಮಾನ ಸಖತ್ ಬೇಸರ ತಂದಿದೆ' ಎಂದು ಬಂಡಾಯ ಗೀತೆಯನ್ನೇ ಹೊಸೆದು ಹಾಡಿದರಂತೆ.


ಪಾಲಿಸಿಕೊಂಡು ಬಂದಿದ್ದ ಸಂಪ್ರದಾಯವನ್ನು ಮೀರಿ ಮನುಷ್ಯರು ಹೊರುವ ಪಲ್ಲಕ್ಕಿಯಲ್ಲಿ ಬರಲಾರೆ ಎನ್ನುವ ಪೇಜಾವರರ ಈ ನಿರ್ಧಾರ ಸ್ವಾಗತಾರ್ಹವೇ ಆದರೂ ಮನುಷ್ಯರನ್ನು ಇದಕ್ಕಿಂತಲೂ ಹತ್ತು ಪಟ್ಟು ಹೆಚ್ಚು ನಿಕೃಷ್ಟವಾಗಿ ನೋಡುವ ಮಡೆಸ್ನಾನ ಹಾಗು ಪಂಕ್ತಿಭೇದದ ಬಗ್ಗೆ ಪೇಜಾವರರು ಸ್ಪಷ್ಟ ನಿಲುವನ್ನು ತೋರದೆ ಇಬ್ಬಗೆಯ ನಿಲುವು ತಳೆದದ್ದು ವಿಚಿತ್ರವೆನಿಸಿದೆ. ಇನ್ನು ರೌಡಿ ಸ್ವಾಮಿ ಶಿರೂರು ಸಿಡುಕ ಬಿಡದಿಯ ನಿತ್ಯಾನಂದನಿಗಿಂತಲೂ ಕಡೆ. ಎರಡು ತಿಂಗಳ ಹಿಂದೆ ಟಿವಿ 9 ನಲ್ಲಿ ಉಡುಪಿಯ ದೇವಸ್ಥಾನದ ಮೂರ್ತಿ ಕೃಷ್ಣನದ್ದಲ್ಲ ಸುಬ್ರಹ್ಮಣ್ಯನದ್ದು ಎಂಬ ಲೈವ್ ಚರ್ಚೆ ಬಂದಿತ್ತು. ಕೃಷ್ಣ ಬೆಣ್ಣೆ ತಿನ್ನುವವನೇ ಹೊರತು ಬೆಣ್ಣೆ ಕಡೆಯುವವನಲ್ಲ. ಅವನ ಕೈಯಲ್ಲಿ ಎಲ್ಲೂ ಇಲ್ಲದ ಕಡಗೋಲು ಇಲ್ಲಿ ಯಾಕೋ? ಅದು ಕಡಗೋಲು ಅಲ್ಲ ಸುಬ್ರಹ್ಮಣ್ಯನ ದೇಹಕ್ಕೂ ಎತ್ತರವಿರುವ ವೇಲಾಯುಧ ಎನ್ನುತ್ತದೆ ಇತಿಹಾಸ. ಚರ್ಚೆಯಲ್ಲಿ ಇಂತಹ ವಿಚಾರವಾಗಿ ಮಾತಾಡಿದ ಸೆಲ್ವ ಪಿಳ್ಳೈ ಅಯ್ಯಂಗಾರ್ ಎಂಬ ವಿದ್ವಾಂಸರ ಮಾತಿಗೆ ಸಿಟ್ಟುಗೊಂಡ ಶಿರೂರು ಸ್ವಾಮಿ ಫೋನ್ ಮಾಡಿ ಈ ಪಿಳ್ಳೈ ಕಪ್ಪಗಿದ್ದಾನೆ ಹಾಗಂತ ಆತ ಆಫ್ರಿಕಾದಿಂದ ಬಂದಿದ್ದನೇ? ಎಂದು ಏಕವಚನದಲ್ಲಿ ಅಸಭ್ಯವಾಗಿ ಮಾತಾಡಿತ್ತು, ಇಂತಹ ಸ್ವಾಮಿಗಳ ನಾಟಕದ ಪರ್ಯಾಯಕ್ಕೆ ದಸರಾ ಲೆವೆಲ್ಲಿನ ನಾಡಹಬ್ಬದ ಗೌರವ ಬೇಕಂತೆ!!

- ಅವಿನಾಶ್ ಎಂ.ಎಸ್., ನೆಲ್ಲಿಕಾರು



ತೆಲುಗು ನಟ ಉದಯ್‌ನ ಆತ್ಮಹತ್ಯೆ ಪ್ರಕರಣ ಕೇವಲ ಚಿತ್ರರಂಗದ ಸಮಸ್ಯೆ ಮಾತ್ರವಲ್ಲ. ಇದು ಇವತ್ತು ಎಲ್ಲಾ ರಂಗದಲ್ಲೂ ಇದೇ ತರಹದ ಸಮಸ್ಯೆಗಳಿವೆ. ರಾಜಕೀಯ, ಉದ್ಯೋಗ, ವಿದ್ಯೆಯ ಅವಕಾಶ ವಲಯಗಳಲ್ಲಿ ಹಣ ಇರುವ ಜನಗಳ ಕೈ ಮೇಲಾಗುತ್ತದೆ. ಅದು ವಂಶಪಾರಂಪರ್ಯವಾಗಿ ಬಹಳ ಹಣ ಇರುವವರಿಗೆ ಮಾತ್ರ. ಹೊಸಬರಿಗೆ ಪ್ರತಿಭೆ ಇದ್ದರೂ ಅವಕಾಶ ಇಲ್ಲದಂತಹ ಪರಿಸ್ಥಿತಿ ಇದು. ಇದು ತುಂಬಾ ಆತಂಕಕಾರಿಯಾಗಿದೆ.

- ಭೀಮನಗೌಡ ಪ್ರಗೊಂಡ, ಜೇವರ್ಗಿ



ಲೇಖಕಿ ಬಾನು ಮುಷ್ತಾಕ್ ಅವರ ಪತ್ರವನ್ನು ಖಾವಂದರು ಓದುವಂತಿದ್ದರೆ, ಓದಿ ಅವರಿಗೆ 'ಅಯ್ಯೋ' ಅನ್ನಿಸುವಂತಿದ್ದರೆ ಇಂದು ನಮ್ಮ ನಡುವೆ ಪದ್ಮಲತಾ, ವೇದವಳ್ಳಿ, ಸೌಜನ್ಯ ಎಲ್ಲರೂ ನಗುತ್ತಿರುತ್ತಿದ್ದರು.

ತಹಾರ್‌ಗೆ ಶೀಘ್ರ ನ್ಯಾಯ ದೊರೆಯಲೆಂದು ಆಶಿಸುವೆ.

- ರವಿಕುಮಾರ್, ಹಾಸನ



ರಾಜಕೀಯವಾಗಲಿ, ಕೋಮು ಗಲಭೆಗಳಾಗಲಿ, ಏನೇ ವಿಷಯ ಇರಲಿ, ದಿಟ್ಟೆದೆಯಿಂದ ಸತ್ಯಾಂಶವನ್ನು ಹುಡುಕಿ ಕರ್ನಾಟಕದ ಮೂಲೆಮೂಲೆಗೆ ದೇಶದ ನೈಜ ಚಿತ್ರವನ್ನು ಬರೆದುಕೊಡುತ್ತಿರುವ 'ಗೌರಿ ಲಂಕೇಶ್' ಪತ್ರಿಕೆ ನನ್ನ ನೆಚ್ಚಿನ ಪತ್ರಿಕೆ. ಇದು ಹೀಗೇ ಮುಂದುವರೆಯಲಿ ಎಂದು ಆಶಿಸುವ.

- ಶರೀಫ್, ಎಸ್.ಜಿ. ಪಾಳ್ಯ, ಬೆಂಗಳೂರು


ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಈಕೆಗೆ ಸಾಹಿತ್ಯ, ನಟನೆ, ಸಂಗೀತ, ನೃತ್ಯ ಗೊತ್ತು!

ಟಿ.ಎನ್. ಸೀತಾರಾಂ ಅವರ 'ಮಹಾಪರ್ವ' ಧಾರಾವಾಹಿ ಸೇರಿದಂತೆ ಅನೇಕ ನಾಟಕಗಳಲ್ಲಿ ನಟಿಸಿರುವ, 'ಲೂಸಿಯ', 'ಅಂಗುಲಿಮಾಲ', 'ಜೀತು', 'ಅಮೃತಬಿಂದು' ಚಿತ್ರಗಳಿಗೆ ಗೀತೆಗಳನ್ನು ಹಾಡಿರುವ, ಚಿತ್ರಕಲೆ, ನೃತ್ಯ, ಸಾಹಿತ್ಯದ ಬಗ್ಗೆ ಅಪಾರ ಆಕಾಂಕ್ಷೆ ಹೊಂದಿರುವ ಬಹುಮುಖ ಪ್ರತಿಭೆ ಸ್ಪರ್ಶ.ಆರ್.ಕೆ. ಇಲ್ಲಿ ಮಾತಾಡಿದ್ದಾರೆ.



ತಾಯಿ ಎಂ.ಆರ್. ಕಮಲ ಜೊತೆ



ಟಿಎನ್‌ಎಸ್ ಜೊತೆ ಸ್ಪರ್ಶ ಆರ್.ಕೆ.

ಸಂದರ್ಶನ

* ನಿಮ್ಮ ಊರು, ವಿದ್ಯಾಭ್ಯಾಸ, ಹೆತ್ತವರು ಹಾಗೂ ಕುಟುಂಬದ ಹಿನ್ನೆಲೆ ಏನು?

ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರು. ಆದ್ರೆ ಮೂಲತಃ ತಿಪಟೂರು ಸಮೀಪದ ಈಚನೂರು ಹಳ್ಳಿಯವರಾದ ನನ್ನ ತಂದೆ ಎಸ್.ರಮೇಶ್ ವೃತ್ತಿಯಲ್ಲಿ ವಕೀಲರು. ತಾಯಿ ಎಂ.ಆರ್.ಕಮಲ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಂಶುಪಾಲರು ಹಾಗೂ ಕವಯತ್ರಿ, ಅನುವಾದಕಿ. ಅಣ್ಣ ಆಕರ್ಷ ವಿಜ್ಞಾನಿ ಹಾಗೂ ಬರಹಗಾರ, ಇತ್ತೀಗೆ ಕಲಾವಿದ. ನಾನು ಸದ್ಯಕ್ಕೆ ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಎಮ್ಮೆಸ್ಸಿ (ಮೈಕ್ರೋಬಯಾಲಜಿ) ಮಾಡ್ತಿದೀನಿ.

* ಸಾಮಾನ್ಯವಾಗಿ ಪ್ರತಿಯೊಬ್ಬರ ಮನಸ್ಸಿನ ಮೇಲೂ ಅವರು ಬೆಳೆದ ಪರಿಸರ, ಮನೆಯ ವಾತಾವರಣದ ಪ್ರಭಾವ ಗಟ್ಟಿವಾಗಿರುತ್ತದೆ. ನಿಮ್ಮ ತಾಯಿ ಕನ್ನಡದ ಪ್ರಮುಖ ಕವಯಿತ್ರಿಯರಲ್ಲಿ ಒಬ್ಬರು. ಅವರ ಪ್ರಭಾವ ನಿಮ್ಮ ಮೇಲೆ ಯಾವ ರೀತಿ ಬೀರಿದೆ?

ಚಿಕ್ಕ ವಯಸ್ಸಿನಿಂದಲೂ ಸಾಹಿತ್ಯದ ವಾತಾವರಣದಲ್ಲೇ ಬೆಳೆದೆ. ಹಾಗಾಗಿ, ಅಮ್ಮನೊಂದಿಗೆ ಹಲವಾರು ಕವಿಗೋಷ್ಠಿಗಳಿಗೆ ಹೋಗುತ್ತಿದ್ದೆ. ಎಲ್ಲ ಕವಿಗಳನ್ನು ಖುದ್ದಾಗಿ ನೋಡುವ ಭಾಗ್ಯ ನನ್ನದಾಯಿತು. ಮನೆಯಲ್ಲಿ ದಿನವೂ ಕಾವ್ಯವೇ. ಪಂಪ, ಕುಮಾರವ್ಯಾಸ, ಹರಿಹರ, ರನ್ನ, ನಾಗಚಂದ್ರ ಮುಂತಾದ ಕವಿಗಳ ಕಾವ್ಯವನ್ನು ದಿನವೂ ಅಮ್ಮ ಓದಿ ಅರ್ಥ ಹೇಳುತ್ತಿದ್ದಳು. ಹಳೆಗನ್ನಡದ ಓದಿನ ಜೊತೆಗೆ, ಹೊಸಗನ್ನಡದ ಕಾವ್ಯದ ಆಸಕ್ತಿ ಹೆಚ್ಚಿಸಿತು. ಕುವೆಂಪು, ಬೇಂದ್ರೆ, ಅಡಿಗರು, ಪು.ತಿ.ನ, ನರಸಿಂಹಸ್ವಾಮಿ ಇತರರ ಕವಿತೆಗಳು ನನ್ನ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. ನನ್ನ ಅಚ್ಚುಮೆಚ್ಚಿನ ಕಥೆಗಾರರೆಂದರೆ ಪೂರ್ಣಚಂದ್ರ ತೇಜಸ್ವಿ ಹಾಗು ಕೇಶವ ಮಳಗಿ. ಅಮ್ಮ ಬಹಳ ಚುರುಕು. ನಾನು ಸುಮ್ಮನೆ ಕೂರುವುದು ಅವಳಿಗಾಗುತ್ತಿರಲಿಲ್ಲ. ಅವಳೇ ಸ್ವತಃ ಭರತನಾಟ್ಯ ಮಾಡುತ್ತಿದ್ದರಿಂದ ನನ್ನನ್ನೂ ಕೂಡ ಅವಳ ಗುರುಗಳ ಹತ್ತಿರವೇ ಭರತನಾಟ್ಯ ಕಲಿಯುವಂತೆ ಪ್ರೇರೇಪಿಸಿದಳು. ಹಾಗಾಗಿ 14 ವರ್ಷ ನೃತ್ಯವನ್ನು ಅಭ್ಯಾಸ ಮಾಡಿದ್ದೇನೆ. ಅನೇಕ ಕಡೆ ನೃತ್ಯ ಕಾರ್ಯಕ್ರಮಗಳನ್ನೂ ಕೊಟ್ಟಿದ್ದೇನೆ.

* ನಿಮಗೆ ಸಾಹಿತ್ಯ, ನೃತ್ಯದಂತೆಯೇ ಸಂಗೀತದ ಕಡೆ ಕೂಡ ಪ್ರೀತಿ ಇರುವುದಾಗಿ ಕೇಳಿದ್ದೇನೆ. ಶಾಸ್ತ್ರೀಯವಾಗಿ ಸಂಗೀತಾಭ್ಯಾಸ ಕೂಡ ಮಾಡಿದ್ದೀರಿ. ಅದರ ಬಗ್ಗೆ ಹೇಳಿ.

ನನ್ನ 5ನೇ ವಯಸ್ಸಿನಲ್ಲಿಯೇ ಸಂಗೀತಾಭ್ಯಾಸವು ಶುರುವಾಯಿತು. ಮೊದಲಿಗೆ ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿದೆ. ಅದು ಕೂಡ 12 ವರ್ಷ ಕಲಿತೆ. ನನ್ನ ಗುರುಗಳು, ನಾಗೇಶರಾವ್ ಹಾಗು ಎಂ.ಎ.ಮೈಥಿಲಿ. ನಂತರ, ನನ್ನ ಒಲವು ಸುಗಮ ಸಂಗೀತದತ್ತ ಹರಿಯಿತು. ನನಗೆ ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಅಕ್ಕರೆ ಇದ್ದಿದ್ದರಿಂದ ಭಾವಗೀತೆಗಳು ಬಹಳವಾಗಿ ಸೆಳೆದವು. ನನ್ನ ಸುಗಮಸಂಗೀತದ ಗುರುಗಳು ಶ್ರೀಮತಿ ರತ್ನಮಾಲ ಪ್ರಕಾಶ್ ಹಾಗು ಕೆ.ಎಂ. ಕುಸುಮ. ಮೊದಲಿನಿಂದಲೂ ಹಿಂದೂಸ್ತಾನಿ ಸಂಗೀತವೆಂದರೆ ನನಗೆ ಅದೇನೋ ಪ್ರೀತಿ. ಸಿತಾರ್ ವಾದನವನ್ನು ಜಯಂತ್ ಕುಮಾರ್ ದಾಸ್‌ರ ಬಳಿ ಕಲಿತ ನಾನು ಹಿಂದೂಸ್ತಾನಿ ವೋಕಲ್ ಮ್ಯೂಸಿಕ್ ಅಭ್ಯಾಸ ಮಾಡಬೇಕೆಂದು ವಿನಾಯಕ ತೋರ್ವಿ ಅವರ ಶಿಷ್ಯರಾದ ಪಂಡಿತ್ ದತ್ತಾತ್ರೇಯ ವೆಲಂಕರ್ ಅವರ ಬಳಿ ಎರಡು ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದೇನೆ.

* ನೀವು ಕೆಲವೊಂದು ನಾಟಕಗಳಲ್ಲಿ ಕೂಡ ಅಭಿನಯಿಸಿದ್ದೀರಿ ಅಂತ ಕೇಳಿದ್ದೇನೆ. ಯಾವ ಯಾವ ನಾಟಕಗಳಲ್ಲಿ ಪಾತ್ರ ಮಾಡಿದ್ದೀರಿ?

ನನಗೆ ಕಲೆ ಹಾಗು ನಾಟಕಗಳ ಬಗ್ಗೆಯೂ ಅಷ್ಟೇ ಪ್ರೀತಿ. ನಾನು 'ಬಿಂಬ' ಸಂಸ್ಥೆಯಲ್ಲಿ ಆರು ವರ್ಷಗಳ ಕಾಲ ನಾಟಕದ ತರಬೇತಿ ಪಡೆದು ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದೇನೆ. 'ಕುಮಾರವ್ಯಾಸ.ಕಾಂ' ನಾಟಕದಲ್ಲಿ ಒಬ್ಬ ಗಟ್ಟಿಗಿತ್ತಿ ಅಜ್ಜಿಯ ಪಾತ್ರ ನಿರ್ವಹಿಸಿದ್ದೇನೆ. ಆಗ ನನಗೆ 'ಗೃಹಭಂಗ'ದ ಲಕ್ಷ್ಮಿ ಚಂದ್ರಶೇಖರ್ ಅವರನ್ನ ನೆನಪಿಸುವಂತೆ ನಟಿಸುತ್ತೀಯ ಎಂಬ ಪ್ರಶಂಸೆ ಸಿಕ್ಕಿತ್ತು. ಉಳಿದಂತೆ, ನಾನು ಪಾತ್ರ ಮಾಡಿದ ಪ್ರಮುಖ ನಾಟಕಗಳೆಂದರೆ, ಬಿರುದನ್ನರಸಿ, ಗೋವಿನ ಹಾಡು, ಡಾನ್ಸ್ ಡ್ರಾಮ- ಹೀಗೆ ಇವುಗಳ ಜೊತೆಗೆ ಎ.ಎಸ್.ಮೂರ್ತಿಯವರು ರಚಿಸಿರುವ ಒಂದಿಷ್ಟು ನಾಟಕಗಳು. ಮತ್ತೆ ಚಿಕ್ಕವಯಸ್ಸಿನಲ್ಲಿ ನಾನು ಕೃಷ್ಣಮೂರ್ತಿ ತುಂಗ ಅವರ ಬಳಿ ಯಕ್ಷಗಾನ ಕೂಡ ಕಲಿತಿದ್ದೆ. ಆ ವೇಷಭೂಷಣ, ಗಾಂಭೀರ್ಯ, ಕುಣಿತ, ಆ ಗಟ್ಟಿಧ್ವನಿ, ಭಾಗವತರು ಮತ್ತವರ ಗೀತೆಗಳು ನನ್ನನ್ನು ಪೂರ್ಣವಾಗಿ ಅಟ್ರಾಕ್ಟ್ ಮಾಡಿದ್ದವು. 'ಅಭಿಮನ್ಯು ಕಾಳಗ'ದ ಅಭಿಮನ್ಯು ಪಾತ್ರ ಹಾಗು 'ಕಂಸ ಸಂಹಾರ'ದ ಕೃಷ್ಣನ ಪಾತ್ರ ಮಾಡಿದ್ದೆ.

* ಟಿ.ಎನ್.ಸೀತಾರಾಂ ಅವರ 'ಮಹಾಪರ್ವ' ಧಾರಾವಾಹಿಯಲ್ಲೂ ಪಾತ್ರ ಮಾಡಿದ್ದೀರಿ. ಆ ಅವಕಾಶ ಹೇಗೆ ಒದಗಿಬಂತು. ಸೀತಾರಾಂ ಅವರ ನಿರ್ದೇಶನದಡಿ ಕೆಲಸ ಮಾಡುವಾಗಿನ ಅನುಭವ ಹೇಗಿತ್ತು?

ಟಿ.ಎನ್.ಎಸ್ ಅವರು ನಮ್ಮ ಫ್ಯಾಮಿಲಿ ಫ್ರೆಂಡ್. ಅವರ ಸಮುದ್ಯತ ಪಾತ್ರಕ್ಕೆ ಒಬ್ಬ ಗಾಯಕಿಯನ್ನು ಹುಡುಕುತ್ತಿದ್ದರು. ಆಗ ನಾನು ಗಾಯಕಿ ಎಂಬುದು ಅವರಿಗೆ ನೆನಪಾಗಿ ಫೇಸ್‌ಬುಕ್‌ನಲ್ಲಿ ನನ್ನ ಫೋಟೋ ನೋಡಿ ಅಮ್ಮನಿಗೆ ಕರೆ ಮಾಡಿದ್ದರು. ಹೀಗೆ ಆ ಪಾತ್ರ ನನಗೆ ದೊರಕಿತು. ಎಲ್ಲರೂ ಟಿ.ಎನ್.ಎಸ್ ಕೋಪಿಷ್ಠ ಮನುಷ್ಯರೆಂದು ಹೆದರಿಸಿದ್ದರು. ಮೊದಲ ದಿನ ಶೂಟಿಂಗ್‌ನಲ್ಲಿ ಹೆದರಿದ್ದೆ. ಆದರೆ, ಅವರು ನನ್ನ ಜೊತೆ ಆತ್ಮೀಯವಾಗಿ, ಪ್ರೀತಿಯಿಂದ ಮಾರ್ಗದರ್ಶನ ನೀಡಿದ್ರು. ನಾನು ಬಹಳ ನ್ಯಾಚುರಲ್ ಆಕ್ಟರ್ ಎಂದು ಹೇಳ್ತಿದ್ರು. ಸೂಕ್ಷ್ಮವಾದ ಎಮೋಷನ್ಸ್‌ಗಳನ್ನ ಅದ್ಭುತವಾಗಿ ಹಿಡಿಯಬಲ್ಲ ನಿರ್ದೇಶಕ ಅವರು. ಅಲ್ಲೇ ನಿಂತು ಗೈಡ್ ಮಾಡ್ತಿದ್ರು. ಮೊದಲು ನನ್ನ ಅಮ್ಮನ ಪರವಾಗಿರುವ ಪಾತ್ರ ಕೊಟ್ಟಿದ್ದರು. ಆದರೆ ನನ್ನನ್ನ ನೋಡಿದ ಮೇಲೆ ಅಪ್ಪ-ಅಮ್ಮನ ಸಂಘರ್ಷಗಳನ್ನು ಅರ್ಥಮಾಡಿಕೊಳ್ಳುವ ಮೃದುಸ್ವಭಾವದ ಪಾತ್ರ ಕೊಟ್ಟರು.

* ನೀವು ಸಿನಿಮಾಗಳಿಗೂ ಹಾಡಿದ್ದೀರಿ. ನಿಮ್ಮ ಮೊದಲ ಚಿತ್ರಗೀತೆ ಯಾವುದು? ಈವರೆಗೆ ಯಾವ್ಯಾವ ಚಿತ್ರಗಳಿಗೆ ಹಾಡಿದ್ದೀರಿ?

ನಾನು ಹಾಡಿದ ಮೊದಲ ಗೀತೆ ಬರಗೂರು ರಾಮಚಂದ್ರಪ್ಪ ಅವರ ನಿರ್ದೇಶನದ 'ಅಂಗುಲಿಮಾಲ' ಚಿತ್ರಕ್ಕೆ. ವಿ.ಮನೋಹರ್ ಆ ಚಿತ್ರದ ಸಂಗೀತ ನಿರ್ದೇಶಕರು. ನನ್ನ ಮೊದಲ ಚಿತ್ರಕ್ಕೆ ಇಂಥ ಹಿರಿಯರ ಒಡನಾಟ ಸಿಕಿದ್ದು ನನ್ನ ಅದೃಷ್ಟ. ಬರಗೂರು ಸರ್, ನಾನು 'ಎದೆ ತುಂಬಿ ಹಾಡುವೆನು' ಕಾರ್ಯಕ್ರಮದ ಫೈನಲ್ಸ್‌ನಲ್ಲಿ ಹಾಡಿದ್ದನ್ನು ನೋಡಿದ್ದರು. ಹಾಗಾಗಿ, ನನಗೆ ಈ ಅವಕಾಶ ಸಿಕ್ತು. ಮೊದಲ ಬಾರಿಗೆ ಸಿನಿಮಾಗೆ ಹಾಡು ಹಾಡುವಾಗ ಬಹಳ ಅಂಜಿಕೆ ಇತ್ತು. ಆದರೆ, ಹಾಡಲು ಪ್ರಾರಂಭಿಸುತ್ತಿದ್ದಂತೆಯೇ ಎಲ್ಲವೂ ಮಾಯ. ವಿಶೇಷವೆಂದರೆ ನನ್ನ ಮೊದಲಗೀತೆ 'ತಾಯಿ'ಯ ಮೇಲಿನದು. ಆದರೆ ನನ್ನ ಡೆಬ್ಯೂಟ್ ರಿಲೀಸ್ ಆದ ಗೀತೆ 'ಜೀತು' ಚಿತ್ರದ್ದು. ನನ್ನ ಸ್ನೇಹಿತ ವಿಕಾಸ್ ವಸಿಷ್ಠ ಸಂಗೀತ ನೀಡಿದ ಚಿತ್ರವದು. ಹೀಗೆ 'ಅಂಗುಲಿ ಮಾಲ', 'ಜೀತು' ಸೇರಿದಂತೆ 'ಲೂಸಿಯ', 'ಅಮೃತಬಿಂದು' ಚಿತ್ರಗಳಲ್ಲಿ ಹಾಡಿದ್ದೇನೆ.

* ಸಿನಿಮಾಗೆ ಹಾಡಬೇಕಾಗಿ ಬಂದಾಗ ಹಾಗೂ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಕೊಡಬೇಕಾಗಿ ಬಂದಾಗ ಒಬ್ಬ ಗಾಯಕಿಯಾಗಿ ಹೇಗೆ ಬೇರೆ ಬೇರೆ ಬಗೆಯಲ್ಲಿ ತಯಾರಿ ನಡೆಸಿಕೊಳ್ಳುತ್ತೀರಿ?

ನನಗೆ ಎಲ್ಲ ಪ್ರಕಾರಗಳೂ ಹಿತ. ಆದರೆ ಕ್ಲಾಸಿಕಲ್ ಒಂದು ದೈವೀಕ ಅನುಭವ ನೀಡುವಂಥದ್ದು. ನನಗೆ ಯಾವುದರ ಬಗೆಗೂ ಮಡಿವಂತಿಕೆ ಇಲ್ಲ. ಯಾವುದೇ ಸಂಗೀತ ಹಾಡಬೇಕಾದರು ರಿಯಾಜ್ ಮಾಡಲೇಬೇಕು. ದಿನವೂ ಬೆಳಗ್ಗೆ ಎದ್ದು ನಾನು ಮೊದಲು ಫಿಸಿಕಲ್ ಎಕ್ಸರ್ಸೈಜ್ ಮಾಡಿ ನಂತರ ಸಂಗೀತ ಪ್ರಾಕ್ಟಿಸ್ ಮಾಡಲು ಕುಳಿತುಕೊಳ್ಳುತ್ತೇನೆ. ಮಾನಸಿಕವಾಗಿ ಸ್ವಸ್ಥವಾಗಿರಲು ಮೊದಲು ದೈಹಿಕವಾಗಿಯೂ ಆರೋಗ್ಯವಾಗಿರಬೇಕೆಂದು ಅಮ್ಮ ಹೇಳುತ್ತಿರುತ್ತಾಳೆ. ಶಾಸ್ತ್ರೀಯಕ್ಕೆ ತಯಾರಿ ತುಸು ಹೆಚ್ಚಿಗೆಯೇ ಬೇಕು. ನಾನು ವಾರದಲ್ಲಿ ಮೂರ್ನಾಲ್ಕು ದಿನ ಸಂಜೆ ನನ್ನ ಸಂಗೀತ ಗುರುಗಳ ಮನೆಗೆ ಹೋಗಿ ಅವರು ಹಾಡುವುದನ್ನು, ಅಭ್ಯಾಸ ಮಾಡುವುದನ್ನು ಸೂಕ್ಷ್ಮವಾಗಿ ನೋಡುತ್ತೇನೆ. ಅದರಿಂದ ಕಲಿಯುತ್ತೇನೆ. ಶಾಸ್ತ್ರೀಯದಲ್ಲಿ ನಮ್ಮ ಮನೋಧರ್ಮದ ಪ್ರಯೋಗ ಹೆಚ್ಚಾಗಿರುತ್ತದೆ. ಎಕ್ಸ್‌ಪೆರಿಮೆಂಟ್, ಎಕ್ಸ್‌ಪೀರಿಯೆನ್ಸ್ ಮೂಲಕ ಪ್ರಬುದ್ಧರಾಗುತ್ತಾ ಹೋಗ್ತೀವಿ. ಬೆಳವಣಿಗೆ ನಿಧಾನವಾದರೂ ಇಟ್ ಇಸ್ ಡೆಫಿನೆಟ್. ಆದ್ರೆ ಸಿನಿಮಾ ಗೀತೆ ಹಾಡುವಾಗ ನಮಗೆ ಸಿಗುವ ಒಂದು ಗಂಟೆ ಅವಧಿಯಲ್ಲಿ ನಮ್ಮ ಚುರುಕುತನ, ಪ್ರತಿಭೆ ಎಲ್ಲವನ್ನು ಐದು ನಿಮಿಷದ ಹಾಡಿನಲ್ಲಿ ಪ್ರದರ್ಶಿಸಬೇಕಾಗುತ್ತೆ.

* ನಿಮ್ಮ ನೆಚ್ಚಿನ ಸಿನಿಮಾ ಗಾಯಕಿಯರು ಯಾರ್‍ಯಾರು? ಅವರೇ ಯಾಕೆ ಇಷ್ಟವಾಗ್ತಾರೆ? ಅವರ ಹಾಡುಗಾರಿಕೆಯಲ್ಲಿ ನೀವು ಗ್ರಹಿಸಿದ್ದೇನು?

ಎಸ್. ಜಾನಕಿಯವರು ಶಾಸ್ತ್ರೀಯ ಹಾಡುಗಳನ್ನು, ಭಾವ ತುಂಬಿದ ಹಾಡುಗಳನ್ನು, ಎಲ್ಲ ತರಹದ ಹಾಡುಗಳನ್ನು ಅಷ್ಟೇ ಸೊಗಸಾಗಿ ನಿಭಾಯಿಸಬಲ್ಲ ರೀತಿಯೇ ನನಗೆ ಅಚ್ಚರಿ ತರುತ್ತದೆ. ಪಿ.ಸುಶೀಲ ಅವರ ಧ್ವನಿಯಲ್ಲಿನ ಅಸೆರ್ಟೀವ್ನೆಸ್, ಆಶಾ ಭೋಂಸ್ಲೆ ಹಾಗು ಎಲ್.ಆರ್. ಈಶ್ವರಿಯವರ ಹಾಡುಗಳಲ್ಲಿನ ಖುಷಿ, ಉತ್ಸಾಹ ಇಷ್ಟ ಆಗುತ್ತೆ. ಸಣ್ಣ ಸಣ್ಣ ಕುಸುರಿ ಕೆಲಸಗಳು ಇವರೆಲ್ಲರ ಗಾಯನದಲ್ಲೂ ಕಾಣಬಹುದು. ಅದರಿಂದ ಕಲಿಯಬಹುದು. ವಾಣಿ ಜಯರಾಂ ಅವರ ಧ್ವನಿಯ ಸ್ವೀಟ್‌ನೆಸ್ ಯಾರಿಗೂ ಬರಲು ಸಾಧ್ಯವಿಲ್ಲವೇನೋ. ಅವರ ಹಾಡುಗಳಲ್ಲಿ ಮೃದುತ್ವ ಇದೆ. ಚಿತ್ರ ಅವರು ಕೂಡ ಚಿಕ್ಕ ಚಿಕ್ಕ ವಿಷಯಗಳನ್ನು ಎಷ್ಟು ಅದ್ಭುತವಾಗಿ ಹಾಡಿನಲ್ಲಿ ಪ್ರಸ್ತುತಪಡಿಸ್ತಾರೆ. ಅವರ ಧ್ವನಿ ಎಂದರೆ ನಂಗೆ ಪಂಚಪ್ರಾಣ. ಇನ್ನು ಲತಾಜಿಯವರ ಬಗ್ಗೆ ಮಾತನಾಡಲು ಸಾಧ್ಯವೇ ಇಲ್ಲ.

* ನಿಮ್ಮ ಮುಂದಿನ ಯೋಜನೆಗಳೇನು?

ನನ್ನದೇ ಕನಸುಗಳನ್ನು ಹೊತ್ತ ಕೆಲವು ಗೆಳೆಯರೊಂದಿಗೆ 'ಭ್ರಮೆ' ಎಂಬ ತಂಡ ಕಟ್ಟಿ ಹೊಸಪ್ರಯೋಗಗಳಿಗೆ ನಮ್ಮನ್ನು ನಾವು ಒಡ್ಡಿಕೊಳ್ಳಬೇಕೆಂದು ನಿರ್ಧರಿಸಿದ್ದೇವೆ. ವಿಕಾಸ್ ವಸಿಷ್ಠ ವಿಶ್ವಾಸ್ ವಸಿಷ್ಠ ಅಲಕ ಸಂದೀಪ್ ಹಾಗು ನಾನು ಈ ತಂಡದ ಸದಸ್ಯರು. ಶೀಘ್ರದಲ್ಲೇ ಒಂದು ಆಲ್ಬಮ್ ಹೊರತರುವ ಯೋಜನೆಯೂ ಇದೆ. ಯಾವುದೇ ಬ್ಯಾಂಡ್ ಎಂದ ತಕ್ಷಣ ಇನ್ಸ್‌ಟ್ರುಮೆಂಟಲ್ ಫ್ಯೂಶನ್ ಅಥವಾ ರಾಕ್ ಸಂಸ್ಕೃತಿಯನ್ನೇ ನೆನಪಿಸುತ್ತವೆ. ಆದರೆ, ನಾವು ಇಂಡಿಯನ್ ಮ್ಯೂಸಿಕ್‌ನ ಹಲವಾರು ಪ್ರಕಾರಗಳನ್ನು ನಮ್ಮದೇ ಸಂಗೀತವನ್ನು ಸೃಷ್ಟಿಸಬೇಕೆಂದು ಇಚ್ಛೆ ಪಡುತ್ತೇವೆ. ನಮ್ಮ ಜಾನಪದ, ಭಕ್ತಿ ಗೀತೆ, ಭಾವಗೀತೆಗಳು, ಕ್ಲಾಸಿಕಲ್, ಗಜಲ್ಸ್, ಭಜನ್ಸ್, ಸೂಫಿ ಸೇರಿದಂತೆ ಎಲ್ಲ ಬಗೆಯ ಸಂಗೀತವನ್ನು ಜನರಿಗೆ ತಲುಪಿಸಬೇಕೆಂದುಕೊಂಡಿದ್ದೇವೆ. ಅದನ್ನು ಹೊರತುಪಡಿಸಿದರೆ ಕ್ಲಾಸಿಕಲ್ ಹಾಗು ನನ್ನ ಸುಗಮಸಂಗೀತದ ಕ್ಲಾಸ್‌ಗಳು, ನಿರಂತರ ಅಭ್ಯಾಸ ನಡೆಯುತ್ತಲೇ ಇರುತ್ತವೆ. ಅಭಿನಯಕ್ಷೇತ್ರಕ್ಕೆ ಹೋಗಲು ನನಗೆ ಆಸಕ್ತಿ ಇಲ್ಲ. ನನ್ನ ಆದ್ಯತೆ ಸಂಗೀತ ಅಷ್ಟೇ. ಇತ್ತೀಚಿಗೆ ಬಹುನಿರೀಕ್ಷೆಯ ಒಂದು ಸಿನಿಮಾದಲ್ಲಿ ಒಂದು ಐಟಂ ಸಾಂಗ್ ಹಾಡಿದ್ದೇನೆ. ಪ್ರೊಫೆಷನಲಿ ಎಮ್ಮೆಸ್ಸಿ ಮಾಡಿ ಪಿಎಚ್ಡಿ ಮಾಡುವಾಸೆ. ನಂಗೆ ಲೆಕ್ಚರರ್ ಆಗಬೇಕೆಂಬ ಬಯಕೆಯೂ ಉಂಟು. ಹಾಗೇನೆ, ಸಂಗೀತ ಕುರಿತಂತೆ ಒಂದು ಪುಸ್ತಕ ರಚಿಸುವ ಯೋಜನೆಯನ್ನೂ ಹೊಂದಿದ್ದೇನೆ. ಜೊತೆಗೆ ಚಿತ್ರಕಲೆಯಲ್ಲೂ ನನಗೆ ಅಪಾರ ಆಸಕ್ತಿ.



ಸಂದರ್ಶನ: ಹೃದಯಶಿವ



ಜೀಎಸ್‌ಎಸ್ ಜೊತೆ ಸ್ಪರ್ಶ ಆರ್.ಕೆ.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH, Kannada Weekly Price Rs. 15/- 12-02-2014 RNI No. KARKAN2005/14

ಎಲುಬಿಲ್ಲದ ನಾಲಿಗೆ ಉಲಿದಾಗ



"ನಿಮಗೆ ನಾಚಿಕೆಯಾಗಲ್ವಾ, ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡ್ ಹೋಗಿ. ಯಾಕೆ ಕನ್ನಡ ಇಟ್ಕೊಂಡು ತಲೆಹಿಡಿಯೋ ಕೆಲಸ ಮಾಡ್ತೀರಿ?" ಎಂಬ 'ಅಣಿಮುತ್ತುಗಳು' ಯಾವಾಗ ಡಾ.ಚಂದ್ರಶೇಖರ ಕಂಬಾರರನ್ನು ಕುರಿತು 'ನೆನಪಿರಲಿ' ಪ್ರೇಮ್ ಬಾಯಿಯಿಂದ ಹೊರಬಿದ್ದವೋ ಕನ್ನಡ ಸಂಸ್ಕೃತಿ, ಕನ್ನಡ ಪರಂಪರೆ, ಕನ್ನಡ ಸಾಹಿತ್ಯದ ಮೇಲೆ ಅಪಾರವಾದ ಗೌರವವನ್ನು ಇಟ್ಟುಕೊಂಡಿರುವ ಕನ್ನಡಿಗರು ತಾವು ಕೂತಲ್ಲಿಂದಲೇ ಪ್ರೇಮ್ ಮುಖಕ್ಕೆ ಅನಾಮತ್ತು ಉಗಿಯಲಾರಂಭಿಸಿದ್ದಾರೆ. ಇಷ್ಟಕ್ಕೂ ಈ ನಟನಿಗೆ ಸಾಹಿತ್ಯ ಸಾಹಿತಿಗಳ ಬಗೆಗಿನ ಪ್ರಜ್ಞೆ ಇದ್ದಿದ್ದರೆ ಇಂಥ ಮಾತುಗಳನ್ನಾಡಿ ತನ್ನ ಬಾಯಿ ಹೊಲಸು ಮಾಡಿಕೊಳ್ಳುತ್ತಿರಲಿಲ್ಲ ಅಲ್ಲವೇ?

ತಮ್ಮ ಕವಿತೆ, ಕಾದಂಬರಿ, ನಾಟಕಗಳ ಮೂಲಕ ಕನ್ನಡ ಭಾಷೆಯನ್ನು ಶ್ರೀಮಂತಗೊಳಿಸಿ ಜ್ಞಾನಪೀಠದಂಥ ಪ್ರಶಸ್ತಿಯನ್ನು ಕನ್ನಡಕ್ಕೆ ತಂದುಕೊಟ್ಟಂಥ ಕಂಬಾರರಂತಹ ಒಬ್ಬ ಹಿರಿಯ ಸಾಹಿತಿಯ ವಿಷಯದಲ್ಲಿ ತೀರಾ ಹೀನಮಟ್ಟದ ಭಾಷಾ ಪ್ರಯೋಗ ಯಾರಿಗೂ ಶೋಭೆ ತರುವಂಥದ್ದಲ್ಲ.

ಸುಮಾರು ಒಂದು ದಶಕದ ಕಾಲ ಕನ್ನಡಿಗರ ನೆರಳಲ್ಲಿ ಬೆಳೆದು, ಕನ್ನಡ ಸಾಂಸ್ಕೃತಿಕ ನಾಯಕರ ಪಟ್ಟಿಯಲ್ಲಿ ಒಬ್ಬನಾಗಬೇಕಾದ ಜವಾಬ್ದಾರಿಯುತ ವ್ಯಕ್ತಿಯೊಬ್ಬ ಹೀಗೆ ಮಾತಾಡಿದಾಗ ಮನಸ್ಸಿಗೆ ನೋವಾಗದೇ ಇರದು ಅಲ್ಲವೇ? ಇಂತಹವರಿಗೆ ಮೊದಲು ಕನ್ನಡ ಸಾಹಿತ್ಯ ಕನ್ನಡ ಸಂಸ್ಕೃತಿ, ಕನ್ನಡ ಪರಂಪರೆಯ ಬಗ್ಗೆ ಅರಿವು ಮೂಡಿಸಬೇಕಿದೆ. ಆಗಲಾದರೂ ಒಬ್ಬ ಥರ್ಡ್ ಕ್ಲಾಸ್ ರೌಡಿ ಲೆವೆಲ್ಲಿನ ಇಂಥ ಭಾಷಾಪ್ರಯೋಗಕ್ಕೆ ಕಡಿವಾಣ ಬೀಳಬಹುದು. ಇಷ್ಟಕ್ಕೂ, ಒಬ್ಬ ಪ್ರಸಿದ್ಧ ನಟನ ವಿರುದ್ಧ ಸಾಹಿತಿಯೊಬ್ಬ ಹೀಗೆ ಕೆಳಮಟ್ಟದಲ್ಲಿ ಮಾತಾಡಿದ್ದರೆ ಚಲನಚಿತ್ರ ವಾಣಿಜ್ಯ ಮಂಡಳಿ ಸುಮ್ಮನಿರುತ್ತಿತ್ತಾ? ಕಲಾವಿದರ ಸಂಘ ಸುಮ್ಮನಿರುತಿತ್ತಾ?... ವಿಪರ್ಯಾಸವೆಂದರೆ ಈ ಕುರಿತು ಯಾವೊಂದು ಕನ್ನಡ ಸಂಘಟನೆಗಳಾಗಲೀ, ಕನ್ನಡ ಸಾಹಿತ್ಯ ಪರಿಷತ್ತಾಗಲೀ, ಚಲನಚಿತ್ರ ಲೇಖಕರ ಸಂಘವಾಗಲೀ ಉಸಿರೆತ್ತದೆ ಕೂತಿರೋದು ಆಶ್ಚರ್ಯ ತರುವಂಥದ್ದು!

ಕನ್ನಡ ರಕ್ಷಣೆಯ ಪರಿ!



ಡಬ್ಬಿಂಗ್ ವಿರೋಧಿಸಿ ಶಿವರಾಜಕುಮಾರ್ ನೇತೃತ್ವದಲ್ಲಿ ಮೊನ್ನೆಯಷ್ಟೇ ನಡೆದ ಬೃಹತ್ ರ್‍ಯಾಲಿಯಲ್ಲಿ ಕನ್ನಡ ಚಿತ್ರರಂಗದ ಅನೇಕ ಕಲಾವಿದರು, ತಂತ್ರಜ್ಞರು ಪಾಲ್ಗೊಂಡಿದ್ದರು. ಆದರೆ ಸದಾ ಕನ್ನಡದ ರಕ್ಷಣೆಯೇ ತನ್ನ ಕಸುಬು ಎಂದು ಬೊಬ್ಬೆ ಇಡುವ 'ಮಹೂಲಿ' ಸಂಘಟನೆಯೊಂದು ಡಬ್ಬಿಂಗ್ ಪರ ನಿಂತಿದೆ!

ಗೌಡ ಎಂಬಾತನ ನೇತೃತ್ವವಿರುದ ಈ ರಕ್ಷಣಾ ಸಂಘಟನೆಯ ಮುಖ್ಯ ಸದಸ್ಯನೊಬ್ಬ "ಡಬ್ಬಿಂಗ್ ಬೇಕೇ ಬೇಕು" ಅಂತ ಪಟ್ಟು ಹಿಡಿದಿದ್ದಾನೆ.

ಇದೆಂತಹ ಕನ್ನಡ ರಕ್ಷಣೆ? ಆ ಗೌಡನೇ ಬಲ್ಲ!!



'ಮಳ್ಳಿ' ಇಟ್ಟೆಳು ಕೊಳ್ಳಿ



ಹೊಸಬರೇ ಸೇರಿಕೊಂಡು ಮಾಡಿರುವ 'ಮಳ್ಳಿ' ಎಂಬ ಚಿತ್ರದ ತಂಡ ಮೊನ್ನೆ ತನ್ನ ಸಿಡಿಗಳನ್ನು ಬಿಡುಗಡೆ ಮಾಡುವ ಕಾರ್ಯಕ್ರಮ ಹಮ್ಮಿಕೊಂಡಿತ್ತು. 'ಮಳ್ಳಿ' ಚಿತ್ರದ ನಿರ್ದೇಶಕ ವಿಷ್ಣುಪ್ರಿಯ ಅವರು ತಮ್ಮ ಚಿತ್ರದಲ್ಲಿ ಸುಜಿತ್-ದಿಶಾ ಪೂವಯ್ಯ ಎಂಬ ಹೊಸಮುಖಗಳ ಜೋಡಿ ಚೆನ್ನಾಗಿ ನಟಿಸಿದೆ ಎಂದರು. ಬಾಬಿ ಎನ್ನುವ ಮಹಿಳಾ ಪ್ರತಿಭೆ ಸಂಗೀತ ನೀಡಿರುವ ಈ ಚಿತ್ರದ ಹಾಡುಗಳನ್ನು ರಾಜೇಶ್ ಕೃಷ್ಣ, ಶಮಿತಾ ಮಲ್ನಾಡ್ ಸೇರಿದಂತೆ ಎಲ್ಲ ಸ್ಥಳೀಯ ಗಾಯಕ/ಗಾಯಕಿಯರೇ ಹಾಡಿರುವುದಾಗಿಯೂ ಹೆಮ್ಮೆಯಿಂದ ಹೇಳಿಕೊಂಡರು.

ಈ ಚಿತ್ರದಲ್ಲಿನ ಒಂದು ಹಾಡು ವಿಶೇಷವಾಗಿದ್ದು, ಆ ಹಾಡಿನ ಸಾಹಿತ್ಯ ಹೇಗಿರುತ್ತಪ್ಪಾ ಅಂದ್ರೆ ಡಾ.ರಾಜಕುಮಾರ್ ಅವರಿಂದ ಹಿಡಿದು, ನಿನ್ನೆಮೊನ್ನೆಯ ಶ್ರೀಕಿವರೆಗೆ ಎಲ್ಲ ನಾಯಕನಟರ ಹೆಸರುಗಳು ಸಾಹಿತ್ಯದಲ್ಲಿ ಅಡಕಗೊಂಡಿದ್ದಾವಂತೆ. ಆ ಹಾಡನ್ನು ಹೇಮಂತ್ ಹಾಡಿದ್ದು, ಹಿಟ್ ಆಗುವ ಎಲ್ಲ ಲಕ್ಷಣಗಳಿವೆ ಎಂದು ಹೇಳಿ ಮುಖ ಅರಳಿಸಿದರು. ನಾರಾಯಣ ಗೌಡ ಎನ್ನುವ ಕೃಷಿಕರು ಈ ಚಿತ್ರಕ್ಕೆ ಹಣ ಹಾಕಿದ್ದಾರೆ. ಹಾಗೆಯೇ ಸೋನಿಯಾ ಸೇನ್ ಎಂಬ ಬಂಗಾಳಿ ಬಾಲೆ ಈ ಸಿನಿಮಾದಲ್ಲಿನ ಐಟಂ ಸಾಂಗ್‌ನಲ್ಲಿ ಚಳಿ ಬಿಟ್ಟು ಕುಣಿದಿದ್ದು, ನೋಡುಗರಿಗೆ ಕಚಗುಳಿಯಂತೂ ಗ್ಯಾರಂಟಿ ಎಂಬುದು ಆಕೆಯದೇ ಆಶ್ವಾಸನೆ.

ಅನುಪ್ರಭಾಕರ್ ವಿಚ್ಛೇದನ



ದಶಕದ ಹಿಂದೆ ಯಷ್ಟೇ ಜಯಂತಿ ಪುತ್ರ ಕೃಷ್ಣಕುಮಾರರನ್ನು ಮದುವೆಯಾಗಿದ್ದ ನಟಿ ಅನು ಪ್ರಭಾಕರ್ ಇದೀಗ ಅವರಿಂದ ವಿಚ್ಛೇದನ ಕೋರಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾರೆ. ದಾಂಪತ್ಯ ಜೀವನದಲ್ಲಿ ಏನೋ ಎಡವಟ್ಟಾಗಿದ್ದರಿಂದ ಈಗ ಅನು ಮತ್ತು ಕೃಷ್ಣಕುಮಾರ್ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ವೈಯಕ್ತಿಕ ಬದುಕಿನ ಈ ಸವಾಲನ್ನೂ ಅವರಿಬ್ಬರು ಎದುರಿಸಿ ನೆಮ್ಮದಿಯ ಬದುಕು ಸಾಗಿಸಲಿ ಎಂಬುದು ಎಲ್ಲರ ಆಶಯ.

ಕರ್ನಾಟಕ ಬುಲ್ಡೋಜರ್ಸ್ ಗೆಲುವು

ಕರ್ನಾಟಕ ಬುಲ್ಡೋಜರ್ಸ್ ಹಾಗೂ ಬೆಂಗಾಲ್ ಟೈಗರ್ಸ್ ತಂಡಗಳ ನಡುವೆ ಕಳೆದ ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸೆಲೆಬ್ರಿಟಿ ಕ್ರಿಕೆಟ್ ಲೀಗ್ ಪಂದ್ಯದಲ್ಲಿ ಕರ್ನಾಟಕ ಬುಲ್ಡೋಜರ್ಸ್ ಭರ್ಜರಿಯಾಗಿ ಜಯ ದಾಖಲಿಸುವ ಮೂಲಕ ಒಳ್ಳೆಯ ಓಪನಿಂಗ್ ಪಡೆದುಕೊಂಡಿದೆ. ಮೊದಲು ಬ್ಯಾಟ್ ಮಾಡಿದ ಕರ್ನಾಟಕ ಬುಲ್ಡೋಜರ್ಸ್ ತಂಡ ಪ್ರದೀಪ್ ರಾಜೀವ ಅವರ ಉತ್ತಮ ಬ್ಯಾಟಿಂಗ್‌ನಿಂದಾಗಿ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 230 ರನ್‌ಗಳನ್ನು ಗಳಿಸಿತ್ತು.

ಈ ಬೃಹತ್ ಮೊತ್ತವನ್ನು ಬೆನ್ನಟ್ಟಿ ಕ್ರೀಜ್‌ಗಿಳಿದ ಬೆಂಗಾಲ್ ಟೈಗರ್ಸ್ ತಂಡ 115 ರನ್‌ಗಳನ್ನಷ್ಟೇ ಗಳಿಸಲು ಸಾಧ್ಯವಾಯಿತು. ಈ ಗೆಲುವಿನ ಹಿಂದೆ ಕರ್ನಾಟಕ ಬುಲ್ಡೋಜರ್ಸ್ ಪರ ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಚಂದ್ರ ಹಾಗೂ ಭಾಸ್ಕರ್ ಪಾತ್ರವೂ ಉಂಟು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com